ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಸಯಿದಾ ಬಾನು

ಸರ್ಕಾರದ ಅಧೀನ ಕಾರ್ಯದರ್ಶಿ,

ಕಾನೂನು ಇಲಾಖೆ (ಆಡಳಿತ–2).

P.R.479

SC-25

ಒಳಾಡಳಿತ ಸಚಿವಾಲಯ

ವಿಷಯ : ಅಭಿಯೋಗ ಮತ್ತು ಸರ್ಕಾರಿ ವ್ಯಾಜ್ಯಗಳ ಇಲಾಖೆಯಲ್ಲಿ ವೃಂದ 'ಸಿ' ಮತ್ತು 'ಡಿ' ಹುದ್ದೆಗಳನ್ನು ಭರ್ತಿ ಮಾಡಲು ಅನುಮತಿಯನ್ನು ನೀಡುವ ಬಗ್ಗೆ.

ಓದಲಾಗಿದೆ : ಅಭಿಯೋಗ ನಿರ್ದೇಶಕರ ಪತ್ರ ಸಂಖ್ಯೆ : ಡಿಸಿಎನ್/ಸಿಶಾ–2/103/2011–12, ದಿ : 10–12–2014.

ಪ್ರಸ್ತಾವನೆ :

ಮೇಲೆ ಓದಲಾದ ಪ್ರಸ್ತಾವನೆಯಲ್ಲಿ ಅಭಿಯೋಗ ಮತ್ತು ಸರ್ಕಾರಿ ವ್ಯಾಜ್ಯಗಳ ನಿರ್ದೇಶಕರು, ಇಲಾಖೆಯಲ್ಲಿ ಬಹಳಷ್ಟು ಹುದ್ದೆಗಳು ಖಾಲಿ ಇರುವುದರಿಂದ, ಆಡಳಿತ ವಿಷಯದಲ್ಲಿ ಹಾಗೂ ಕಛೇರಿ ಕೆಲಸ ಕಾರ್ಯಗಳ ನಿರ್ವಹಣೆಗೆ ತೊಂದರೆ ಉಂಟಾಗುತ್ತಿದೆ. ಶೀಘ್ರಲಿಪಿಗಾರರ ಮತ್ತು ವಾಹನ ಚಾಲಕರ ವೃಂದಗಳಲ್ಲಿ ಬಡ್ತಿಗೆ ಅರ್ಹ ನೌಕರರು ಲಭ್ಯವಿಲ್ಲದ ಕಾರಣ ಕೊರತೆ ಉಂಟಾಗಿರುತ್ತದೆ. ಇಲಾಖೆಯಲ್ಲಿ ಹೊಸದಾಗಿ ಹುದ್ದೆಗಳು ಸೃಜನೆಯಾಗಿರುವುದರಿಂದ ಶೀಘ್ರಲಿಪಿಗಾರರು, ವಾಹನ ಚಾಲಕರು ಮತ್ತು ದಲಾಯತ್ ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡಲು ಅನುಮತಿಯನ್ನು ನೀಡುವಂತೆ ಕೋರಿರುತ್ತಾರೆ.

ಪ್ರಸ್ತಾವನೆಯನ್ನು ಪರಿಶೀಲಿಸಿ, ಅಭಿಯೋಗ ಮತ್ತು ಸರ್ಕಾರಿ ವ್ಯಾಜ್ಯಗಳ ಇಲಾಖೆಯಲ್ಲಿ ಈ ಕೆಳಕಂಡ ಸಮೂಹ 'ಸಿ' ಮತ್ತು 'ಡಿ' ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರವು ತೀರ್ಮಾನಿಸಿದೆ.

ಕ್ರ.ಸಂ.	ಹುದ್ದೆಗಳ ಹೆಸರು	ಹುದ್ದೆಗಳ ಸಂಖ್ಯೆ	ವಿಧಾನ
1	ಶೀಘ್ರಲಿಪಿಗಾರರು	08	ನೇರ ನೇಮಕಾತಿ ಮೂಲಕ
2	ವಾಹನ ಚಾಲಕರು	02	ಹೊರ ಗುತ್ತಿಗೆ ಆಧಾರದ ಮೇಲೆ
3	ದಲಾಯತ್	87	ಹೊರ ಗುತ್ತಿಗೆ ಆಧಾರದ ಮೇಲೆ
	ಒಟ್ಟು	**97**	

ಸರ್ಕಾರದ ಆದೇಶ ಸಂಖ್ಯೆ ಒಇ 378 ಪಿಪಿಇ 2013, ಬೆಂಗಳೂರು, ದಿನಾಂಕ : 21ನೇ ಜುಲೈ 2015.

ಮೇಲೆ ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ, ಅಭಿಯೋಗ ಮತ್ತು ಸರ್ಕಾರಿ ವ್ಯಾಜ್ಯಗಳ ಈ ಕೆಳಕಂಡ ಸಮೂಹ 'ಸಿ' ಮತ್ತು 'ಡಿ' ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರದ ಅನುಮತಿಯನ್ನು ನೀಡಿದೆ.

ಕ್ರ.ಸಂ.	ಹುದ್ದೆಗಳ ಹೆಸರು	ಹುದ್ದೆಗಳ ಸಂಖ್ಯೆ	ವಿಧಾನ
1	ಶೀಘ್ರಲಿಪಿಗಾರರು	08	ನೇರ ನೇಮಕಾತಿ ಮೂಲಕ
2	ವಾಹನ ಚಾಲಕರು	02	ಹೊರ ಗುತ್ತಿಗೆ ಆಧಾರದ ಮೇಲೆ
3	ದಲಾಯತ್	87	ಹೊರ ಗುತ್ತಿಗೆ ಆಧಾರದ ಮೇಲೆ
	ಒಟ್ಟು	**97**	

ಸದರಿ ಅದೇಶವನ್ನು ಆರ್ಥಿಕ ಇಲಾಖೆಯ ಅ.ಟಿ. ಸಂಖ್ಯೆ : ಆಇ 659 ವೆಚ್ಚ–11 2014, ದಿನಾಂಕ : 07–07–2015ರ ಸಹಮತಿ ಅನುಸಾರ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ದೇವೇಂದ್ರಪ್ಪ ಕಟ್ಟಿಮನಿ

ಸರ್ಕಾರದ ಅಧೀನ ಕಾರ್ಯದರ್ಶಿ,

ಒಳಾಡಳಿತ ಇಲಾಖೆ

(ಪೊಲೀಸ್ ಸೇವೆಗಳು–ಬಿ)

P.R. 453

ಕಾನೂನು ಸಚಿವಾಲಯ

ವಿಷಯ : ಕುಂದಗೋಳ ಕಂದಾಯ ತಾಲ್ಲೂಕು, ಧಾರವಾಡ ಜಿಲ್ಲೆಯಲ್ಲಿ ಇಲ್ಲಿ ಹೊಸದಾಗಿ ಸೃಜಿಸಿರುವ ಒಂದು ಹೆಚ್ಚುವರಿ ನೋಟರಿ ಹುದ್ದೆಯನ್ನು ತುಂಬುವ ಬಗ್ಗೆ.

ಓದಲಾಗಿದೆ :

1. ಸರ್ಕಾರಿ ಆದೇಶ ಸಂಖ್ಯೆ ಲಾ 136 ಎಲ್‌ಸಿಎಲ್ 2013, ದಿನಾಂಕ : 09–06–2014.
2. ಸರ್ಕಾರದ ಪತ್ರ ಸಂಖ್ಯೆ : 366 ಎಲ್‌ಸಿಎಲ್ 2014, ದಿನಾಂಕ : 14–11–2014.
3. ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಧಾರವಾಡ ಜಿಲ್ಲೆ, ಇವರ ಪತ್ರ ಸಂಖ್ಯೆ : ಸಿಪಿಎನ್ ನಂ. 01/2015, ದಿನಾಂಕ : 05–01–2015
4. ಸರ್ಕಾರಿ ಅಧಿಸೂಚನೆ ಸಂಖ್ಯೆ : ಲಾ 157 ಎಲ್‌ಸಿಎಲ್ 2015, ದಿನಾಂಕ : 08–06–2015.
5. ಸಂದರ್ಶನದ ಸಭಾ ಸೂಚನಾ ಪತ್ರದ ದಿನಾಂಕ : 08–06–2015.

ಪ್ರಸ್ತಾವನೆ :

ಮೇಲೆ ಓದಲಾದ ಕ್ರಮ ಸಂಖ್ಯೆ (1)ರ ಸರ್ಕಾರಿ ಆದೇಶದಲ್ಲಿ ಕುಂದಗೋಳ ಕಂದಾಯ ತಾಲ್ಲೂಕು, ಬಾಗಲಕೋಟೆ ಜಿಲ್ಲೆಗೆ ಸಾರ್ವಜನಿಕ ಹಿತದೃಷ್ಟಿಯಿಂದ ಹೊಸದಾಗಿ ಒಂದು ಹೆಚ್ಚುವರಿ ನೋಟರಿ ಹುದ್ದೆಯನ್ನು ಸೃಜಿಸಲು ಸರ್ಕಾರದ ಮಂಜೂರಾತಿ ನೀಡಲಾಗಿತ್ತು. ತದನಂತರ ಮೇಲೆ ಓದಲಾದ ಕ್ರಮ ಸಂಖ್ಯೆ : (2)ರ ಪತ್ರದಲ್ಲಿ ಸದರಿ ಹುದ್ದೆಯನ್ನು ತುಂಬುವ ಕುರಿತಂತೆ ನೋಟರಿ/ನಿಯಮಾವಳಿ ನಿಯಮ 1956 ನಿಯಮ 6(1)(2) ಮತ್ತು 7(1)(2)(3)ರನ್ವಯ ಮತ್ತು ತಿದ್ದುಪಡಿ ನಿಯಮಗಳನ್ವಯ ಅಧಿಸೂಚನೆ ಹೊರಡಿಸಿ ಸ್ಥಳೀಯ ಜಾಹೀರಾತು ನೀಡಿ ಆ ಮೂಲಕ ಸ್ವೀಕರಿಸುವ ಅರ್ಜಿಗಳನ್ನು ಕರ್ನಾಟಕ ಕಾನೂನು ಅಧಿಕಾರಿಗಳ (ನೇಮಕಾತಿ ಮತ್ತು ಸೇವಾ ಷರತ್ತುಗಳು) ನಿಯಮಗಳ 1977ರ ನಿಯಮ 12 ರನ್ವಯ ಪರಿಶೀಲಿಸಿ ಜಿಲ್ಲಾ/ಪ್ರಧಾನ ನ್ಯಾಯಧೀಶರ ಅಭಿಪ್ರಾಯದೊಂದಿಗೆ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸುವಂತೆ ಕೋರಲಾಗಿತ್ತು. ಆ ಮೇರೆಗೆ ಕ್ರಮ ಸಂಖ್ಯೆ (3)ರ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ಪತ್ರದಲ್ಲಿ 12 ವಕೀಲರುಗಳ ಮೆಮೋರಿಯಲ್‌ಗಳನ್ನು ಅವರ ಅಭಿಪ್ರಾಯದೊಂದಿಗೆ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿರುತ್ತದೆ.

ಮೇಲೆ ಓದಲಾದ ಕ್ರಮ ಸಂಖ್ಯೆ (4)ರ ಸರ್ಕಾರಿ ಅಧಿಸೂಚನೆಯಲ್ಲಿ ಸಂಖ್ಯೆ : ಲಾ 61 ಎಲ್‌ಸಿಎಲ್ 2009, ದಿನಾಂಕ : 14–07–2010 ಮತ್ತು ಸಂಖ್ಯೆ : ಲಾ 53 ಎಲ್‌ಸಿಎಲ್ 2013, ದಿನಾಂಕ : 23–07–2013ರ ಸರ್ಕಾರಿ ಅಧಿಸೂಚನೆಗಳಲ್ಲಿ ನೋಟರಿ ಸಂದರ್ಶನ ಮಂಡಳಿಗೆ ರಚಿಸಲಾಗಿರುವ ಸಮಿತಿಗಳನ್ನು ಈ ಕೂಡಲೇ ಜಾರಿಗೆ ಬರುವಂತೆ ರದ್ದುಗೊಳಿಸಿ, 1952ರ ಕೇಂದ್ರ ಅಧಿನಿಯಮ, ಸೆಕ್ಷನ್ 15ರಲ್ಲಿ (1951ರ ಅಧಿನಿಯಮ 53) ಓದಲಾದ ನೋಟರಿಗಳ ತಿದ್ದುಪಡಿ ನಿಯಮಗಳು, ಹಾಗೂ 2009ರ ನೋಟರಿಗಳ (ತಿದ್ದುಪಡಿ ನಿಯಮಗಳ, ನಿಯಮ 7(ಎ)(2))ರನ್ವಯ ಈ ಕೆಳಕಂಡ ನೋಟರಿ ಸಂದರ್ಶನ ಮಂಡಳಿಯನ್ನು ಮುಂದಿನ ಆದೇಶದವರೆಗೆ ಜಾರಿಗೆ ಬರುವಂತೆ ರಚಿಸಲಾಗಿದೆ.

1.	ಅಪರ ಕಾನೂನು ಕಾರ್ಯದರ್ಶಿಗಳು (ಅಭಿಪ್ರಾಯ)	–	ಅಧ್ಯಕ್ಷರು
2.	ಕಾನೂನು ಕೋಶದ ಮುಖ್ಯಸ್ಥರು (ಹಿರಿಯ ಸಿವಿಲ್ ನ್ಯಾಯಾಧೀಶರು) (ಲೋಕೋಪಯೋಗಿ ಮತ್ತು ಜಲಸಂಪನ್ಮೂಲ ಇಲಾಖೆ)	–	ಸದಸ್ಯರು
3.	ಕಾನೂನು ಕೋಶದ ಮುಖ್ಯಸ್ಥರು(ಹಿರಿಯ ಸಿವಿಲ್ ನ್ಯಾಯಾಧೀಶರು (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ)	–	ಸದಸ್ಯರು

ಮೇಲೆ ಓದಲಾದ ಕ್ರಮ ಸಂಖ್ಯೆ (5)ರ ಪತ್ರದಲ್ಲಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ಪ್ರಸ್ತಾವನೆಯಲ್ಲಿ ಶಿಫಾರಸ್ಸು ಮಾಡಿರುವ ಎಲ್ಲಾ ವಕೀಲರುಗಳನ್ನು ಸಂದರ್ಶನಕ್ಕೆ ಆಹ್ವಾನಿಸಿ ದಿನಾಂಕ : 22–06–2015 ರಂದು ನಡೆದ ಸಂದರ್ಶನ ಮಂಡಳಿಯಲ್ಲಿ **ಶ್ರೀ ಮಿಯಾನವರ್ ಸುಲೇಮಾನ್ ಪಾಷಾ ಮೆಹಬೂಬ್‌ಸಾಬ್,** ವಕೀಲರು, ಇವರನ್ನು ಕುಂದಗೋಳ ಕಂದಾಯ ತಾಲ್ಲೂಕು, ಧಾರವಾಡ ಜಿಲ್ಲೆ ಇಲ್ಲಿ ಹೊಸದಾಗಿ ಸೃಜಿಸಿರುವ ಒಂದು ಹೆಚ್ಚುವರಿ ನೋಟರಿ ಹುದ್ದೆಗೆ ನೇಮಕಾತಿ ಮಾಡಲು ಶಿಫಾರಸ್ಸು ಮಾಡಲಾಗಿದೆ.

ಆಮೇರೆಗೆ, ಸರ್ಕಾರವು ಈ ಕೆಳಕಂಡಂತೆ ಆದೇಶಿಸಲಾಗಿದೆ.

ಸರ್ಕಾರದ ಆದೇಶ ಸಂಖ್ಯೆ ಲಾ 366 ಎಲ್‌ಸಿಎಲ್ 2014, ಬೆಂಗಳೂರು, ದಿನಾಂಕ : 17–07–2015.

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಕೂಲಂಕಷವಾಗಿ ಪರಿಶೀಲಿಸಿ ನೋಟರಿ ಅಧಿನಿಯಮ, 1952 ಹಾಗೂ ಇದರ ಅಡಿಯಲ್ಲಿ ರಚಿಸಲಾಗಿರುವ ನೋಟರಿ ನಿಯಮಗಳು, 1956 ಹಾಗೂ ನಂತರದ ತಿದ್ದುಪಡಿ ನಿಯಮಗಳನ್ವಯ ನಿಯಮ 8(1)ರಲ್ಲಿ ಪ್ರದತ್ತವಾದ ಅಧಿಕಾರದನ್ವಯ **ಶ್ರೀ ಮಿಯಾನವರ್ ಸುಲೇಮಾನ್ ಪಾಷಾ ಮೆಹಬೂಬ್‌ಸಾಬ್, ಸುಲ್ತಾನಪುರ ಪೋಸ್ಟ್, ಕಲಶ, ಕುಂದಗೋಳ ತಾಲ್ಲೂಕು, ಧಾರವಾಡ ಜಿಲ್ಲೆ**. ಇವರನ್ನು ವೃತ್ತಿ ಪ್ರಮಾಣ ಪತ್ರ ನೀಡಲಾದ ದಿನಾಂಕದಿಂದ ಜಾರಿಗೆ ಬರುವಂತೆ 5 (ಐದು) ವರ್ಷಗಳ ಅವಧಿಗೆ ಧಾರವಾಡ ಕಂದಾಯ ತಾಲ್ಲೂಕಿನಲ್ಲಿ ಹೊಸದಾಗಿ ಸೃಜಿಸಿರುವ ನೋಟರಿ ಹುದ್ದೆಗೆ ನೇಮಕಾತಿ ಮಾಡಲಾಗಿದೆ.

ಸದರಿ, ವಕೀಲರು ಲೆಕ್ಕ ಶೀರ್ಷಿಕೆ 0070 – ಇತರೆ ಆಡಳಿತಾತ್ಮಕ ಸೇವೆಗಳು–01–ನ್ಯಾಯ ಪರಿಪಾಲನೆ–501–0–ಇತರೆ ಸ್ವೀಕೃತಿಗಳು–06–ಇತರೆ ಬಾಬ್ತುಗಳಿಗೆ (0070–01–501–0–06) ನೋಟರಿ ನಿಯಮಗಳಲ್ಲಿ ನಿಗದಿಪಡಿಸಲಾದ ರೂ. 1000.00 (ಒಂದು ಸಾವಿರ ಮಾತ್ರ) ಶುಲ್ಕವನ್ನು ಸರ್ಕಾರಿ ಖಜಾನೆಯಲ್ಲಿ ಜಮಾ ಮಾಡಿ ಆ ಬಗೆಗಿನ ಮೂಲ ಚಲನ್ ಮತ್ತು ಹುಟ್ಟಿದ ದಿನಾಂಕವನ್ನು ದೃಢೀಕರಿಸಬಲ್ಲ ದಾಖಲೆಯನ್ನು ಹಾಜರುಪಡಿಸಿದ ನಂತರ ಅವರಿಗೆ ವೃತ್ತಿ ಪ್ರಮಾಣ ಪತ್ರವನ್ನು ನೀಡಲಾಗುವುದು.

ವೃತ್ತಿ ಪ್ರಮಾಣ ಪತ್ರ ನೀಡಿದ ನಂತರ ಶ್ರೀಯುತರ ಹೆಸರನ್ನು ನೋಟರಿ ಅಧಿನಿಯಮ, 1952 ಕಲಂ 4 ನೇ ಪ್ರಕರಣದಡಿ ಸರ್ಕಾರ ನಿರ್ವಹಿಸುತ್ತಿರುವ ನೋಟರಿ ಪಟ್ಟಿಯಲ್ಲಿ ನಮೂದಿಸಲಾಗುವುದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

P.R. 454
S.C.- 25

ಸಯಿದಾ ಬಾನು
ಸರ್ಕಾರದ ಅಧೀನ ಕಾರ್ಯದರ್ಶಿ,
ಕಾನೂನು ಇಲಾಖೆ

ಕಂದಾಯ ಸಚಿವಾಲಯ

ತಿದ್ದುಪಡಿ

ಸಂಖ್ಯೆ : ಆರ್‌ಡಿ 20 ಎಲ್‌ಜಿಆರ್ 2013, ಬೆಂಗಳೂರು ದಿನಾಂಕ : 14–07–2015

ಸರ್ಕಾರದ ಆದೇಶ ಸಂಖ್ಯೆ : ಆರ್‌ಡಿ 43 ಎಲ್‌ಜಿಆರ್ 2010 ದಿನಾಂಕ : 18–02–2011ರ ಆದೇಶ ಭಾಗದಲ್ಲಿನ ಮೊದಲನೇ ಸಾಲಿನಲ್ಲಿರುವ "ಕೊಪ್ಪಳ ಜಿಲ್ಲೆ, ಗಂಗಾವತಿ ತಾಲ್ಲೂಕು, ಕ್ಯಾರಿಹಾಳ ಗ್ರಾಮದ ಸ.ನಂ.17ರಲ್ಲಿನ 120.16 ಎಕರೆ ಗಾಯರಾಣ ಜಮೀನಿನ ಪೈಕಿ 26–00 ಎಕರೆ ಜಮೀನನ್ನು" ಎಂಬುದರ ಬದಲಾಗಿ "ಕೊಪ್ಪಳ ಜಿಲ್ಲೆ, ಗಂಗಾವತಿ ತಾಲ್ಲೂಕಿನ ಈಚನಾಳ ಗ್ರಾಮದ ಸ.ನಂ.40ರಲ್ಲಿ 5–18 ಎಕರೆ, ಸ.ನಂ.29ರಲ್ಲಿ 2.07 ಎಕರೆ, ಉದ್ದಿಹಾಳ ಗ್ರಾಮದ ಸ.ನಂ.16ರಲ್ಲಿ 9–22 ಎಕರೆ ಹಾಗೂ ಕ್ಯಾರಿಹಾಳ ಗ್ರಾಮದ ಸ.ನಂ.17ರಲ್ಲಿ 8–35 ಎಕರೆ ಒಟ್ಟು 26–02 ಎಕರೆ ಜಮೀನನ್ನು" ಎಂದು ತಿದ್ದಿ ಓದಿಕೊಳ್ಳತಕ್ಕದ್ದು.

ಉಳಿದಂತೆ ಸರ್ಕಾರದ ಆದೇಶ ಸಂಖ್ಯೆ : ಆರ್‌ಡಿ 43 ಎಲ್‌ಜಿಆರ್ 2010 ದಿನಾಂಕ : 18–02–2011ರಲ್ಲಿನ ಷರತ್ತುಗಳು ಮುಂದುವರೆಯುತ್ತವೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

P.R. 455
S.C - 25

ಎಸ್.ಎಲ್. ಮಹಾಂತೇಗೌಡ
ಸರ್ಕಾರದ ಅಧೀನ ಕಾರ್ಯದರ್ಶಿ,
ಕಂದಾಯ ಇಲಾಖೆ

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯ

ವಿಷಯ : ಔಷಧ ನಿಯಂತ್ರಣ ಇಲಾಖೆಯ ಚೀಫ್ ಸೈಂಟಿಫಿಕ್ ಆಫೀಸರ್ ಹುದ್ದೆಯನ್ನು ಪ್ರಿನ್ಸಿಪಾಲ್, ಸೈಂಟಿಫಿಕ್ ಆಫೀಸರ್ ಹುದ್ದೆಗೆ ಮೇಲ್ದರ್ಜೆಗೇರಿಸುವ ಬಗ್ಗೆ–ಆದೇಶ.

ಓದಲಾಗಿದೆ : ಪತ್ರ ಸಂಖ್ಯೆ : ಔನಿಇ/861/ಸಿಬ್ಬಂದಿ/2012–13, ದಿನಾಂಕ : 05–09–2013 ಮತ್ತು 21–01–2014.

ಪ್ರಸ್ತಾವನೆ :

ಔಷಧ ನಿಯಂತ್ರಕರು, ಔಷಧ ನಿಯಂತ್ರಣ ಇಲಾಖೆ ಇವರು ಮೇಲಿನ ತಮ್ಮ ಪ್ರಸ್ತಾವನೆಯಲ್ಲಿ ರಾಜ್ಯದಲ್ಲಿ ಔಷಧ ನಿಯಂತ್ರಕರ ಅಧೀನದಲ್ಲಿ 03 ಪ್ರಾಂತೀಯ ಔಷಧ ಪರೀಕ್ಷಾ ಪ್ರಯೋಗಾಲಯಗಳಿದ್ದು, ಅವುಗಳು ಬೆಂಗಳೂರು, ಹುಬ್ಬಳ್ಳಿ ಮತ್ತು ಬಳ್ಳಾರಿಯಲ್ಲಿ ಕಾರ್ಯನಿರ್ವಹಿಸುತ್ತಿವೆ. ರಾಜ್ಯದ ಔಷಧ ಪರವೀಕ್ಷಕರುಗಳು ಹಾಗೂ ಸಾರ್ವಜನಿಕರಿಂದ ನಿಯಮಾನುಸಾರ ಸ್ವೀಕೃತವಾಗುವ ಔಷಧಗಳ ಗುಣಮಟ್ಟ ಪರೀಕ್ಷೆ ನಡೆಸಿ, ನಿಗದಿತ ಅವಧಿಯಲ್ಲಿ ವಿಶ್ಲೇಷಣಾ ವರದಿಗಳನ್ನು ಸಲ್ಲಿಸುವ ಮೂಲಕ ಮಾರುಕಟ್ಟೆಯಲ್ಲಿ ಲಭ್ಯವಿರುವ ಔಷಧಗಳ ವಿಶ್ವಾಸಾರ್ಹತೆಯನ್ನು ದೃಢಪಡಿಸಿ, ಕಾರ್ಯನಿರ್ವಹಿಸುತ್ತಿದ್ದು, ಈ ಔಷಧ ಪ್ರಯೋಗಾಲಯಗಳಿಗೆ ಮುಖ್ಯ ವೈಜ್ಞಾನಿಕ ಅಧಿಕಾರಿಗಳು ಮುಖ್ಯಸ್ಥರುಗಳಾಗಿರುತ್ತಾರೆಂದು, ಪ್ರಸ್ತುತ ಇಲಾಖೆಯಲ್ಲಿ ಜಾರಿಯಲ್ಲಿರುವ ವೃಂದ ಮತ್ತು ನೇಮಕಾತಿ ನಿಯಮಾವಳಿಯನ್ವಯ ರೂ. 36,300–53,850ರ ವೇತನ ಶ್ರೇಣಿಯ 04 ಮುಖ್ಯ ವೈಜ್ಞಾನಿಕ ಅಧಿಕಾರಿಗಳ ಹುದ್ದೆಗಳಿದ್ದು, ಹುಬ್ಬಳ್ಳಿ ಮತ್ತು ಬಳ್ಳಾರಿಯಲ್ಲಿರುವ ಪ್ರಾಂತೀಯ ಔಷಧ ಪ್ರಯೋಗಾಲಯಗಳಲ್ಲಿ ತಲಾ 01 ಮುಖ್ಯ ವೈಜ್ಞಾನಿಕ ಅಧಿಕಾರಿಯ ಹುದ್ದೆ ಪ್ರತಿಷ್ಠಾಪಿಸಿದ್ದು, ಬೆಂಗಳೂರಿನಲ್ಲಿರುವ ಔಷಧ ಪರೀಕ್ಷಾ ಪ್ರಯೋಗಾಲಯಕ್ಕೆ 02 ಮುಖ್ಯ ವೈಜ್ಞಾನಿಕ ಅಧಿಕಾರಿ ಹುದ್ದೆಗಳಿರುವುದರಿಂದ, ವಿಭಾಗೀಯ ಮಟ್ಟದ ಸ್ಥಾನಮಾನ ಹೊಂದಿರುವ ಚೀಫ್

ಸೈಂಟಿಫಿಕ್ ಆಫೀಸರ್‌ಗಳು ಪ್ರಯೋಗಾಲಯ, ಆಡಳಿತಾತ್ಮಕ ವಿಷಯಗಳ ಕುರಿತಂತೆ ಇಲಾಖಾ ಮುಖ್ಯಸ್ಥರುಗಳಿಗೆ ನೇರವಾಗಿ ವ್ಯವಹರಿಸಬೇಕಾಗಿದ್ದು, ಸದರಿ ಪ್ರಯೋಗಾಲಯಗಳಿಂದ ಪ್ರತ್ಯೇಕವಾಗಿ ಸ್ವೀಕೃತವಾಗುವ ವರದಿ, ಕೋರಿಕೆ ಇತ್ಯಾದಿಗಳನ್ನು ಕೇಂದ್ರ ಕಛೇರಿಯಲ್ಲಿ ಪರಿಷ್ಕರಿಸಲಾಗುತ್ತಿದ್ದು, ಈಗಾಗಲೇ ಸಿಬ್ಬಂದಿ ಕೊರತೆಯಿರುವ ನಿಮಿತ್ತ ಕೇಂದ್ರ ಕಛೇರಿಯಲ್ಲಿ ಕಾರ್ಯ ಒತ್ತಡದ ತೀವ್ರತೆಯಿಂದ 01 ಮುಖ್ಯ ವೈಜ್ಞಾನಿಕ ಅಧಿಕಾರಿ ಹುದ್ದೆಯನ್ನು ಪ್ರಧಾನ ವೈಜ್ಞಾನಿಕ ಅಧಿಕಾರಿ ಹುದ್ದೆಯನ್ನಾಗಿ ಉನ್ನತೀಕರಿಸುವುದು/ಮೇಲ್ದರ್ಜೆಗೇರಿಸುವುದು ಅವಶ್ಯವಿರುತ್ತದೆ. ಸದರಿ ಹುದ್ದೆಯನ್ನು ಮುಂಬಡ್ತಿ ಮೂಲಕ ತುಂಬಲಾಗುತ್ತದೆ. ಜೊತೆಗೆ ಮುಖ್ಯ ವೈಜ್ಞಾನಿಕ ಅಧಿಕಾರಿ ವೃಂದದಲ್ಲಿನ ಸ್ಥಾನಪನ್ನರು ಈಗಾಗಲೇ ಗರಿಷ್ಠ ವೇತನ ಮಿತಿಯನ್ನು ಹೊಂದಿರುವುದರಿಂದ, ಇದರಿಂದ ಉಂಟಾಗಬಹುದಾದ ಆರ್ಥಿಕ ಹೊರೆ ಕನಿಷ್ಠವಾಗಿರುವುದರಿಂದ, ರೂ. 36,300-53,850ರ ವೇತನ ಶ್ರೇಣಿಯ 04 ಮುಖ್ಯ ವೈಜ್ಞಾನಿಕ ಅಧಿಕಾರಿ ಹುದ್ದೆಗಳ ಪೈಕಿ ಬೆಂಗಳೂರಿನಲ್ಲಿರುವ 02 ಮುಖ್ಯ ವೈಜ್ಞಾನಿಕ ಅಧಿಕಾರಿಗಳ 01 ಹುದ್ದೆಯನ್ನು 40,050-56,550ರ ವೇತನ ಶ್ರೇಣಿಯ ಪ್ರಧಾನ ವೈಜ್ಞಾನಿಕ ಅಧಿಕಾರಿ ಹುದ್ದೆಯಿಂದ ಮೇಲ್ದರ್ಜೆಗೇರಿಸಲು ಶಿಫಾರಸ್ಸು ಮಾಡಿರುತ್ತಾರೆ.

ಮೇಲಿನ ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ, ಈ ಕೆಳಗಿನಂತೆ ಆದೇಶ ಹೊರಡಿಸಿದೆ.

ಸರ್ಕಾರದ ಆದೇಶ ಸಂಖ್ಯೆ ಆಕುಕ 65 ಐಎಂಎಂ 2013, ಬೆಂಗಳೂರು, ದಿನಾಂಕ : 24-07-2015.

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಔಷಧ ನಿಯಂತ್ರಣ ಇಲಾಖೆಯಲ್ಲಿನ ಬೆಂಗಳೂರು ಔಷಧ ಪರೀಕ್ಷಾ ಪ್ರಯೋಗಾಲಯದಲ್ಲಿನ ಎರಡು ಚೀಫ್ ಸೈಂಟಿಫಿಕ್ ಆಫೀಸರ್ ಹುದ್ದೆಗಳ ಪೈಕಿ ಒಂದು ಚೀಫ್ ಸೈಂಟಿಫಿಕ್ ಆಫೀಸರ್ (ವೇತನ ಶ್ರೇಣಿ ರೂ.36,300-900-39,000-1050-45,300-1200-52,500-1350-53,850) ಹುದ್ದೆಯನ್ನು ಪ್ರಿನ್ಸಿಪಾಲ್ ಸೈಂಟಿಫಿಕ್ ಆಫೀಸರ್ (ವೇತನ ಶ್ರೇಣಿ ರೂ. 40,050-1050-45,300-1200-52,500-1350-56,550) ಹುದ್ದೆಗೆ ಮೇಲ್ದರ್ಜೆಗೇರಿಸಿದೆ.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ : ಆಇ 57 ವೆಚ್ಚ-5/2015, ದಿನಾಂಕ : 12-06-2015ರಲ್ಲಿ ನೀಡಿರುವ ಸಹಮತಿಯ ಮೇರೆಗೆ ಹೊರಡಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಬಿ. ಕಮಲಮ್ಮ
ಸರ್ಕಾರದ ಅಧೀನ ಕಾರ್ಯದರ್ಶಿ,
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ
(ಭಾ.ವೈ.ಪ. ಮತ್ತು ಸಮನ್ವಯ)

P.R. 456
S.C.- 25

ಕಂದಾಯ ಸಚಿವಾಲಯ

ವಿಷಯ : ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ಅಧಿನಿಯಮ - 1997 ಮತ್ತು (ತಿದ್ದುಪಡಿ) ನಿಯಮಗಳು ಅನ್ವಯ ರಾಜ್ಯ ಧಾರ್ಮಿಕ ಪರಿಷತ್ತನ್ನು ರಚನೆ ಮಾಡುವ ಕುರಿತು.

ಓದಲಾಗಿದೆ :
1. ಸರ್ಕಾರದ ಆದೇಶ ಸಂಖ್ಯೆ : ಕಂಇ 59 ಮುಸೇವಿ 2014 ದಿನಾಂಕ : 19-09-2014.
2. ಆಯುಕ್ತರು, ಧಾರ್ಮಿಕ ದತ್ತಿ ಇಲಾಖೆ, ಬೆಂಗಳೂರು ಇವರ ಪತ್ರ ಸಂಖ್ಯೆ : ಎಡಿಎಂ/08/ಸಿಆರ್/53/2014-15, ದಿನಾಂಕ : 21-02-2015.

ಪ್ರಸ್ತಾವನೆ :

ಮೇಲೆ ಓದಲಾದ (2)ರಲ್ಲಿನ ಆಯುಕ್ತರು, ಧಾರ್ಮಿಕ ದತ್ತಿ ಇಲಾಖೆ, ಇವರ ಪತ್ರದಲ್ಲಿ ರಾಜ್ಯ ಧಾರ್ಮಿಕ ಪರಿಷತ್ತಿಗೆ ನಾಮ ನಿರ್ದೇಶಿತ ಸದಸ್ಯರನ್ನು ನೇಮಕ ಮಾಡುವ ಕುರಿತು ಲಭ್ಯವಿರುವ ಸದಸ್ಯರ ಮಾಹಿತಿಯೊಂದಿಗೆ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಿರುತ್ತಾರೆ. ಈಗಾಗಲೇ ಮೇಲೆ ಓದಲಾದ (1)ರ ಸರ್ಕಾರದ ಆದೇಶದಲ್ಲಿ, ರಾಜ್ಯ ಧಾರ್ಮಿಕ ಪರಿಷತ್ತಿನ ನ್ಯಾಯಿಕ ಸದಸ್ಯರನ್ನಾಗಿ ಶ್ರೀ ಮಹಿಪಾಲ್ ದೇಸಾಯಿ, ನಿವೃತ್ತ ಜಿಲ್ಲಾ ನ್ಯಾಯಾಧೀಶರು ಇವರನ್ನು 'ಮುಂದಿನ 04 ವರ್ಷಗಳ ಅವಧಿಗೆ ಅಥವಾ ಮುಂದಿನ ಆದೇಶದವರೆಗೆ ಇವುಗಳಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ ನೇಮಕ ಮಾಡಿ' ಆದೇಶ ಹೊರಡಿಸಲಾಗಿರುತ್ತದೆ.

ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ಅಧಿನಿಯಮ, 1997 ಮತ್ತು ತಿದ್ದುಪಡಿ ನಿಯಮಗಳು ಸೆಕ್ಷನ್ 20ರನ್ವಯ ಕರ್ನಾಟಕ ರಾಜ್ಯ ಧಾರ್ಮಿಕ ಪರಿಷತ್ತನ್ನು ರಚಿಸಲು ಅವಕಾಶವಿದ್ದು, ಅದರಂತೆ ಸದರಿ ಧಾರ್ಮಿಕ ಪರಿಷತ್ತಿಗೆ ಅಧಿಕಾರ/ಅಧಿಕಾರೇತರ ನಾಮ ನಿರ್ದೇಶಿತ ಮಹನೀಯರುಗಳನ್ನೊಳಗೊಂಡಂತೆ ನಾಮ ನಿರ್ದೇಶನ ಮಾಡಲು ಸರ್ಕಾರವು ತೀರ್ಮಾನಿಸಿ, ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರಿ ಆದೇಶ ಸಂಖ್ಯೆ ಕಂಇ 28 ಮುಇನಿ 2014, ಬೆಂಗಳೂರು, ದಿನಾಂಕ : 28ನೇ ಏಪ್ರಿಲ್, 2015.

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಕರ್ನಾಟಕ ಹಿಂದೂ ಧಾರ್ಮಿಕ ಮತ್ತು ಧರ್ಮಾದಾಯ ಸಂಸ್ಥೆಗಳ ಅಧಿನಿಯಮ 1997 ಮತ್ತು ತಿದ್ದುಪಡಿ ನಿಯಮಗಳು ಸೆಕ್ಷನ್ 20ರನ್ವಯ ಕರ್ನಾಟಕ ಸರ್ಕಾರವು ಈ ಕೆಳಕಾಣಿಸಿದ ಅಧಿಕಾರ/ಅಧಿಕಾರೇತರ ನಾಮ ನಿರ್ದೇಶಿತ ಮಹನೀಯರುಗಳನ್ನೊಳಗೊಂಡಂತೆ ಕರ್ನಾಟಕ ರಾಜ್ಯ ಧಾರ್ಮಿಕ ಪರಿಷತ್ತನ್ನು ತಕ್ಷಣದಿಂದ ಜಾರಿಗೆ ಬರುವಂತೆ ನಾಲ್ಕು ವರ್ಷಗಳ ಅವಧಿಗೆ ಅಥವಾ ಮುಂದಿನ ಆದೇಶದವರೆಗೆ ಇದರಲ್ಲಿ ಯಾವುದು ಮೊದಲೋ ಅಲ್ಲಿಯವರೆವಿಗೆ ನೇಮಿಸಿ ಆದೇಶಿಸಿದೆ :-

1.	ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ಪ್ರಭಾರದಲ್ಲಿರುವ ಸಚಿವರು	ಅಧ್ಯಕ್ಷರು
2	ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ಇಲಾಖೆಯ ಪ್ರಭಾರದಲ್ಲಿರುವ ಸರ್ಕಾರದ ಕಾರ್ಯದರ್ಶಿಗಳು	ಉಪಾಧ್ಯಕ್ಷರು
3.	ಆಯುಕ್ತರು, ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ಇಲಾಖೆ	ಪದನಿಮಿತ್ತ ಕಾರ್ಯದರ್ಶಿಗಳು
4.	**ಅಧಿಕಾರೇತರ ನಾಮ ನಿರ್ದೇಶಿತ ಸದಸ್ಯರು**	
	1. ಶ್ರೀ ಮಹಿಪಾಲ್ ದೇಸಾಯಿ, ಜಿಲ್ಲಾ ನಿವೃತ್ತ ನ್ಯಾಯಾಧೀಶರು, ನಂ. 1444, ಸಾಯಿ ನಿವಾಸ್, 1ನೇ ಮುಖ್ಯರಸ್ತೆ, 1ನೇ ಅಡ್ಡ ರಸ್ತೆ, ನ್ಯಾಯಾಂಗ ಬಡಾವಣೆ, ಜಿ.ಕೆ.ವಿ.ಕೆ. ಅಂಚೆ, ಬಳ್ಳಾರಿ ರಸ್ತೆ, ಬೆಂಗಳೂರು–560 065 (ಸರ್ಕಾರದ ಆದೇಶ ಸಂಖ್ಯೆ : ಕಂಇ 59 ಮುಸೇವಿ 2014, ದಿನಾಂಕ : 19–09–2014 ರಲ್ಲಿ ಈಗಾಗಲೇ ನೇಮಿಸಿದೆ)	ನ್ಯಾಯಿಕ ಸದಸ್ಯರು
	2. ಶ್ರೀ ವೇದಮೂರ್ತಿ ಕೇಂಜ ಶ್ರೀಧರ ತಂತ್ರಿ, ಆಗಮ ಪಂಡಿತರು, ತಂತ್ರಿ ನಿವಾಸ, ಕೇಂಜ, ಕುತ್ಯಾರು ಅಂಚೆ, ಉಡುಪಿ ಜಿಲ್ಲೆ – 574116.	ಆಗಮ ಪಂಡಿತರು
	3. ಶ್ರೀ ಹೆಚ್.ಸಿ. ಹನುಮಂತಯ್ಯ, ಲಕ್ಷ್ಮೀ ನಿವಾಸ, ಶಿರಾ ಗೇಟ್–ಸತ್ಯಮಂಗಲ ರಸ್ತೆ, ಪುಟ್ಟಸಾಮಯ್ಯನ ಪಾಳ್ಯ ಹತ್ತಿರ, ಎನ್.ಹೆಚ್.–4, ತುಮಕೂರು–572166.	ನಾಯಕ – ಎಸ್.ಟಿ.
	4. ಶ್ರೀ ಕೆ.ಎಂ. ನಾಗರಾಜ್, 465/10, ಕನಕನಪಾಳ್ಯ ರಸ್ತೆ, 2ನೇ ಬ್ಲಾಕ್, ಜಯನಗರ, ಬೆಂಗಳೂರು–560011.	ಹಿಂದುಳಿದ ವರ್ಗ
	5. ಶ್ರೀ ಎಸ್.ಕೆ. ಜಗನ್ನಿವಾಸರಾವ್, ವಕೀಲರು, ಬಿನ್ ಎನ್. ಕೃಷ್ಣಯ್ಯ, ನೆಟ್ಟೋಜಿ ಮನೆ, ಬಪ್ಪಳಿಗೆ, ಪುತ್ತೂರು ತಾಲ್ಲೂಕು, ದಕ್ಷಿಣ ಕನ್ನಡ ಜಿಲ್ಲೆ.	ಸಾಮಾನ್ಯ
	6. ಶ್ರೀ ಪದ್ಮನಾಭ ಕೊಟ್ಯಾನ್ ಬಿನ್ ಲೋಕಯ್ಯ ಪೂಜಾರಿ, ಪೆಲತ್ತಡಿ ಮನೆ, ಪಡು ಅಂಚೆ, ಮಂಗಳೂರು ತಾಲ್ಲೂಕು, ದಕ್ಷಿಣ ಕನ್ನಡ ಜಿಲ್ಲೆ.	ಸಾಮಾನ್ಯ

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

P.R. 458

S.C.- 100

ಸಿ.ಟಿ. ಜಯರಾಮೇಗೌಡ

ಸರ್ಕಾರದ ಅಧೀನ ಕಾರ್ಯದರ್ಶಿ,

ಕಂದಾಯ ಇಲಾಖೆ (ಮುಜರಾಯಿ)

ಕಂದಾಯ ಸಚಿವಾಲಯ

ವಿಷಯ : ರಾಜ್ಯದ ಧಾರ್ಮಿಕ ದತ್ತಿ ಇಲಾಖಾ ವ್ಯಾಪ್ತಿಯಲ್ಲಿ ಬರುವ ಅಧಿಸೂಚಿತ ಸಂಸ್ಥೆಗಳ ಹೆಸರಿನಲ್ಲಿ ಅನಧಿಕೃತವಾಗಿ ಖಾಸಗಿ ವ್ಯಕ್ತಿಗಳು, ಸಂಘ ಸಂಸ್ಥೆಗಳು ಭಕ್ತಾದಿಗಳಿಂದ ಹಣ ವಸೂಲಿ ಮಾಡುತ್ತಿರುವ ಕುರಿತು.

ಓದಲಾಗಿದೆ : ಆಯುಕ್ತರು, ಧಾರ್ಮಿಕ ದತ್ತಿ ಇಲಾಖೆ ಇವರ ಪತ್ರ ಸಂಖ್ಯೆ : ಎಡಿಎಂ/08/ಸಿಆರ್/54/2014–15, ದಿನಾಂಕ : 25–02–2015.

ಪ್ರಸ್ತಾವನೆ :

ಮೇಲೆ ಓದಲಾದ ಆಯುಕ್ತರು, ರಾಜ್ಯದ ಧಾರ್ಮಿಕ ದತ್ತಿ ಇಲಾಖೆ, ಇವರು ಸರ್ಕಾರಕ್ಕೆ ಬರೆದ ದಿನಾಂಕ : 25–02–2015ರ ಪತ್ರದಲ್ಲಿ, ಕರ್ನಾಟಕ ರಾಜ್ಯದಲ್ಲಿನ ಧಾರ್ಮಿಕ ದತ್ತಿ ಇಲಾಖಾ ವ್ಯಾಪ್ತಿಗೆ ಒಳಪಡುವ ಅಧಿಸೂಚಿತ ದೇವಸ್ಥಾನ ಹಾಗೂ ಸಂಸ್ಥೆಗಳ ಹಿತಕ್ಕೆ ವಿರುದ್ಧವಾಗಿ ಖಾಸಗಿ ಸಂಘ ಸಂಸ್ಥೆ/ಟ್ರಸ್ಟ್/ಸಮಿತಿಗಳು ಅನಧಿಕೃತವಾಗಿ ಮುಜರಾಯಿ ದೇವಾಲಯಗಳ ಹೆಸರಿನಲ್ಲಿ ಹಣ ವಸೂಲಿ ಮಾಡುತ್ತಿರುವ ಪ್ರಕರಣಗಳು ಗಮನಕ್ಕೆ ಬಂದಿದ್ದು, ಇಂತಹ ಪ್ರಕರಣಗಳನ್ನು ತಡೆಗಟ್ಟುವ ದೃಷ್ಟಿಯಿಂದ ಸರ್ಕಾರಿ ಆದೇಶ ಹೊರಡಿಸಲು ಶಿಫಾರಸ್ಸು ಮಾಡಿರುತ್ತಾರೆ.

ಆಯುಕ್ತರು, ಧಾರ್ಮಿಕ ದತ್ತಿ ಇಲಾಖೆ ಇವರ ಪ್ರಸ್ತಾವನೆಯನ್ನು ಸರ್ಕಾರವು ಕೂಲಂಕಷವಾಗಿ ಪರಿಶೀಲಿಸಿ, ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ ಕಂಇ 26 ಮುಸೇವಿ 2015, ಬೆಂಗಳೂರು, ದಿನಾಂಕ : 16ನೇ ಮಾರ್ಚ್, 2015.

ಕರ್ನಾಟಕ ರಾಜ್ಯದ ಧಾರ್ಮಿಕ ದತ್ತಿ ಇಲಾಖಾ ವ್ಯಾಪ್ತಿಗೆ ಒಳಪಡುವ ಅಧಿಸೂಚಿತ ದೇವಸ್ಥಾನಗಳು/ಸಂಸ್ಥೆಗಳ ಹಿತಕ್ಕೆ ವಿರುದ್ಧವಾಗಿ ಖಾಸಗಿ ಸಂಘ ಸಂಸ್ಥೆ/ಟ್ರಸ್ಟ್/ಸಮಿತಿಗಳು/ವ್ಯಕ್ತಿಗಳು ಅನಧಿಕೃತವಾಗಿ ಮುಜರಾಯಿ ದೇವಾಲಯಗಳ ಹೆಸರಿನಲ್ಲಿ ಹಣ ವಸೂಲಿ ಮಾಡುತ್ತಿರುವ ಪ್ರಕರಣಗಳನ್ನು ತಡೆಗಟ್ಟುವ ದೃಷ್ಟಿಯಿಂದ ಈ ಕೆಳಗಿನಂತೆ ಆದೇಶಿಸಿದೆ.

"ಧಾರ್ಮಿಕ ದತ್ತಿ ಇಲಾಖೆಗೆ ಸೇರಿದ ದೇವಸ್ಥಾನಗಳು/ಅಧಿಸೂಚಿತ ಸಂಸ್ಥೆಗಳ ಹಕ್ಕಾದ ಹಾಗೂ ಅಧಿಸೂಚಿತ ಸಂಸ್ಥೆಗೆ ನ್ಯಾಯವಾಗಿ ಸೇರಬೇಕಾದ ಭಕ್ತಾದಿಗಳ ದೇಣಿಗೆ/ಕಾಣಿಕೆಗಳನ್ನು ಅಕ್ರಮವಾಗಿ ವಸೂಲಿ ಮಾಡುತ್ತಿರುವ ಖಾಸಗಿ ಸಂಘ/ಸಂಸ್ಥೆ/ಟ್ರಸ್ಟ್‌ಗಳನ್ನು ನಿಯಂತ್ರಿಸಲು ಹಾಗೂ ಸದರಿ ಖಾಸಗಿ ಸಂಘ/ಸಂಸ್ಥೆ/ಟ್ರಸ್ಟ್‌ಗಳು ಅಧಿಸೂಚಿತ ಸಂಸ್ಥೆಗಳ ಆಡಳಿತದಲ್ಲಿ ಯಾವುದೇ ಹಸ್ತಕ್ಷೇಪ ಮಾಡದಂತೆ, ವಿರೋಧಿಸಲು ಧಾರ್ಮಿಕ ದತ್ತಿ ಇಲಾಖೆಯ ಅಧಿಸೂಚಿತ ಸಂಸ್ಥೆಗಳ ಹೆಸರಿನೊಂದಿಗೆ ಹಾಗೂ ಈ ದೇವಾಲಯಗಳ, ದೇವರುಗಳ ಭಾವಚಿತ್ರವುಳ್ಳ ಮುದ್ರಾಂಕದೊಂದಿಗೆ ಯಾವುದೇ ಖಾಸಗಿ ಸಂಘ/ಸಂಸ್ಥೆ/ಟ್ರಸ್ಟ್‌ಗಳನ್ನು/ವ್ಯಕ್ತಿಗಳನ್ನು ನೊಂದಾಯಿಸುವುದನ್ನು ನಿಷೇದಿಸಲಾಗಿದೆ ಹಾಗೂ ಈಗಾಗಲೇ ಈ ರೀತಿಯಲ್ಲಿ ಮುಜರಾಯಿ ಇಲಾಖೆಗೆ ಒಳಪಟ್ಟ ಅಧಿಸೂಚಿತ ಸಂಸ್ಥೆಗಳ ಹೆಸರಿನಲ್ಲಾಗಲಿ ಅಥವಾ ಸದರಿ ದೇವಾಲಯಗಳ, ದೇವರುಗಳ ಭಾವಚಿತ್ರವುಳ್ಳ ಮುದ್ರಾಂಕದೊಂದಿಗೆ ಅಸ್ತಿತ್ವದಲ್ಲಿರುವ ಇಂತಹ ಖಾಸಗಿ ಸಂಘ/ಸಂಸ್ಥೆ/ಟ್ರಸ್ಟ್‌ಗಳು ಅಸಿಂಧುವಾಗಿರುತ್ತವೆ. ಒಂದು ವೇಳೆ ಇಂತಹ ಅನಧಿಕೃತ ಚಟುವಟಿಕೆಗಳು ಮುಂದುವರೆಸಿದಲ್ಲಿ ಅಂತಹ ಸಂಘ ಸಂಸ್ಥೆಗಳು/ಟ್ರಸ್ಟ್/ವ್ಯಕ್ತಿಗಳ ವಿರುದ್ಧ ಕಾನೂನು ಕ್ರಮ ಜರುಗಿಸಲಾಗುವುದು."

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

P.R. 459

S.C.- 100

ಸಿ.ಟಿ. ಜಯರಾಮೇಗೌಡ
ಸರ್ಕಾರದ ಅಧೀನ ಕಾರ್ಯದರ್ಶಿ,
ಕಂದಾಯ ಇಲಾಖೆ (ಮುಜರಾಯಿ)

ಕಂದಾಯ ಸಚಿವಾಲಯ

ವಿಷಯ : ಮುಜರಾಯಿ ಇಲಾಖೆಯಲ್ಲಿನ ಸ್ಥಿರ ಸ್ವತ್ತಿನ ಗುತ್ತಿಗೆ ನೀಡುವಲ್ಲಿ ಅಂಗವಿಕಲರಿಗೆ ಮೀಸಲಾತಿ ಕಲ್ಪಿಸಿ ಅನುಷ್ಠಾನಗೊಳಿಸುವ ಕುರಿತು.

ಓದಲಾಗಿದೆ :
1. ಸರ್ಕಾರದ ಆದೇಶ ಸಂಖ್ಯೆ : ಕಂಇ 84 ಮುಆಬಿ 2007, ದಿನಾಂಕ : 14–07–2008.
2. ಆಯುಕ್ತರು, ಧಾರ್ಮಿಕ ದತ್ತಿ ಇಲಾಖೆ ಇವರ ಪತ್ರ ಸಂಖ್ಯೆ : ಎಡಿಎಂ 5 ಎಲ್‌ಎನ್‌ಡಿ 89/2014–15, ದಿನಾಂಕ : 04–03–2015.

ಪ್ರಸ್ತಾವನೆ :

ಮೇಲೆ (1)ರಲ್ಲಿ ಓದಲಾದ ಸರ್ಕಾರದ ಆದೇಶದಲ್ಲಿ ಮುಜರಾಯಿ ಇಲಾಖೆಯ ಅಧೀನಕ್ಕೊಳಪಟ್ಟ ಧಾರ್ಮಿಕ ಸಂಸ್ಥೆಗಳಿಗೆ ಸೇರಿದ ಕಟ್ಟಡ, ಖಾಲಿ ಜಾಗ, ಅಂಗಡಿ ಮಳಿಗೆಗಳನ್ನು ಬಹಿರಂಗ ಹರಾಜು ಮಾಡಿ, ಗುತ್ತಿಗೆ ನೀಡುವ ಮತ್ತು ಅಂತಹ ಗುತ್ತಿಗೆ ನವೀಕರಿಸುವ ಸಂಬಂಧ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ಕ್ರಮವಾಗಿ ಕಲ್ಪಿಸಿರುವ ಶೇ. 20 ಮತ್ತು ಶೇ. 5 ಮೀಸಲಾತಿಯನ್ನು ಕರ್ನಾಟಕ ರಾಜ್ಯ ವ್ಯಾಪ್ತಿಗೆ ಒಳಪಡುವಂತೆ ಅನ್ವಯಿಸಿ, ಕಡ್ಡಾಯವಾಗಿ ಪಾಲಿಸುವಂತೆ ಆದೇಶಿಸಲಾಗಿರುತ್ತದೆ.

ಮೇಲೆ (2)ರಲ್ಲಿ ಓದಲಾದ ಆಯುಕ್ತರು, ಧಾರ್ಮಿಕ ದತ್ತಿ ಇಲಾಖೆ ಇವರ ಪತ್ರದಲ್ಲಿ ಧಾರ್ಮಿಕ ದತ್ತಿ ಇಲಾಖೆಯ ವ್ಯಾಪ್ತಿಗೆ ಒಳಪಡುವ ದೇವಾಲಯಗಳು/ಅಧಿಸೂಚಿತ ಸಂಸ್ಥೆಗಳಿಗೆ ಸೇರಿದ ಸ್ಥಿರ ಆಸ್ತಿಗಳ ಗುತ್ತಿಗೆಗಳನ್ನು ಬಹಿರಂಗ ಹರಾಜು ಮಾಡಿ ಗುತ್ತಿಗೆಗೆ ನೀಡುವ ಹಾಗೂ ನವೀಕರಿಸುವ ಸಂಬಂಧ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ಕ್ರಮವಾಗಿ ಶೇ.20 ಮತ್ತು ಶೇ.5 ರಷ್ಟು ಮೀಸಲಾತಿಯನ್ನು ಕಲ್ಪಿಸಿರುವಂತೆ ಅಂಗವಿಕಲರಿಗೂ ಕೂಡ ಶೇ. 3 ರಷ್ಟು ಮೀಸಲಾತಿಯನ್ನು ಕಲ್ಪಿಸಿ, ಕರ್ನಾಟಕ ರಾಜ್ಯ ವ್ಯಾಪ್ತಿಗೆ ಒಳಪಡುವಂತೆ ಒಟ್ಟು ಶೇ. 28 ರಷ್ಟು ಮೀಸಲಾತಿಯನ್ನು ಕಡ್ಡಾಯವಾಗಿ ಪಾಲಿಸಲು ಆದೇಶ ಹೊರಡಿಸುವಂತೆ ಕೋರಿರುತ್ತಾರೆ.

ಆಯುಕ್ತರು, ಧಾರ್ಮಿಕ ದತ್ತಿ ಇಲಾಖೆ ಇವರ ಪ್ರಸ್ತಾವನೆಯನ್ನು ಸರ್ಕಾರವು ಪರಿಶೀಲಿಸಿ, ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ ಕಂಇ 14 ಮುಆಬಿ 2015, ಬೆಂಗಳೂರು, ದಿನಾಂಕ : 08ನೇ ಏಪ್ರಿಲ್, 2015.

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಧಾರ್ಮಿಕ ದತ್ತಿ ಇಲಾಖೆಯ ವ್ಯಾಪ್ತಿಗೆ ಒಳಪಡುವ ದೇವಾಲಯಗಳು/ಅಧಿಸೂಚಿತ ಸಂಸ್ಥೆಗಳಿಗೆ ಸೇರಿದ ಕಟ್ಟಡ, ಖಾಲಿ ಜಾಗ, ಅಂಗಡಿ ಮಳಿಗೆಗಳನ್ನು ಬಹಿರಂಗ ಹರಾಜು ಮಾಡಿ, ಗುತ್ತಿಗೆ ನೀಡುವ ಮತ್ತು ಅಂತಹ ಗುತ್ತಿಗೆ ನವೀಕರಿಸುವ ಸಂಬಂಧ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ಕ್ರಮವಾಗಿ ಕಲ್ಪಿಸಿರುವ ಶೇ. 20 ಮತ್ತು ಶೇ. 5 ಮೀಸಲಾತಿಯನ್ನು ಕಲ್ಪಿಸಿರುವಂತೆ ಅಂಗವಿಕಲರಿಗೂ ಕೂಡ ಶೇ. 3 ರಷ್ಟು ಮೀಸಲಾತಿಯನ್ನು ಕಲ್ಪಿಸಿ, ಕರ್ನಾಟಕ ರಾಜ್ಯ ವ್ಯಾಪ್ತಿಗೆ ಒಳಪಡುವಂತೆ ಒಟ್ಟು ಶೇ. 28 ರಷ್ಟು ಮೀಸಲಾತಿಯನ್ನು ಕಡ್ಡಾಯವಾಗಿ ಪಾಲಿಸುವಂತೆ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

P.R. 460

S.C.- 25

ಸಿ.ಟಿ. ಜಯರಾಮೇಗೌಡ
ಸರ್ಕಾರದ ಅಧೀನ ಕಾರ್ಯದರ್ಶಿ,
ಕಂದಾಯ ಇಲಾಖೆ (ಮುಜರಾಯಿ)

ಕಂದಾಯ ಸಚಿವಾಲಯ

ವಿಷಯ : ಧಾರ್ಮಿಕ ದತ್ತಿ ಇಲಾಖೆಯ ವ್ಯಾಪ್ತಿಗೆ ಒಳಪಡುವ ಅಧಿಸೂಚಿತ ದೇವಾಲಯಗಳಲ್ಲಿರುವ ಚಿನ್ನಾಭರಣಗಳನ್ನು ಮೌಲ್ಯಮಾಪನ ಮಾಡುವ ಕುರಿತು.

ಓದಲಾಗಿದೆ :

1. ಸರ್ಕಾರದ ಪತ್ರ ಸಂಖ್ಯೆ : ಕಂಇ 36 ಮುಆಬಿ 2011, ದಿನಾಂಕ : 22-06-2011.
2. ಆಯುಕ್ತರು, ಧಾರ್ಮಿಕ ದತ್ತಿ ಇಲಾಖೆ ಇವರ ಪತ್ರ ಸಂಖ್ಯೆ : ಎಡಿಎಂ/01/ಸಿಆರ್/211/2012-13, ದಿನಾಂಕ : 09-04-2015.

ಪ್ರಸ್ತಾವನೆ :

ಮೇಲೆ ಓದಲಾದ (1)ರ ಸರ್ಕಾರದ ಪತ್ರ ದಿನಾಂಕ : 22-06-2011ರಲ್ಲಿ, ರಾಜ್ಯದ ಮುಜರಾಯಿ ಇಲಾಖಾ ವ್ಯಾಪ್ತಿಗೆ ಒಳಪಡುವ ಅಧಿಸೂಚಿತ ಸಂಸ್ಥೆಗಳು/ದೇವಾಲಯಗಳಲ್ಲಿರುವ ಆಭರಣಗಳನ್ನು ಶ್ರೀ ವೇದಾಮೂರ್ತಾಚಾರ್, ಆಭರಣಗಳ ಮೌಲ್ಯಮಾಪಕರು ಇವರಿಂದ ಮೌಲ್ಯಮಾಪನವನ್ನು ಮಾಡಲು ನಿರ್ದೇಶನ ನೀಡಲಾಗಿತ್ತು.

ಮೇಲೆ ಓದಲಾದ (2)ರ ಆಯುಕ್ತರು, ಧಾರ್ಮಿಕ ದತ್ತಿ ಇಲಾಖೆ ಇವರ ಪತ್ರ ದಿನಾಂಕ : 09-04-2015ರಲ್ಲಿ ಶ್ರೀ ವೇದಮೂರ್ತಾಚಾರ್ ಇವರು ಕೆಲವು ದೇವಾಲಯಗಳಲ್ಲಿರುವ ಆಭರಣಗಳನ್ನು ಮೌಲ್ಯಮಾಪನ ಮಾಡಿ, ಮೌಲ್ಯಮಾಪನ ವರದಿಯನ್ನು ಪೂರ್ಣ ಪ್ರಮಾಣದಲ್ಲಿ ನೀಡುತ್ತಿಲ್ಲ. ಕೆಲವು ಬಾರಿ, ಇವರೇ ಆಭರಣಗಳ ಮೌಲ್ಯಮಾಪನ ವರದಿಯನ್ನು ಇಲಾಖಾ ಅಧಿಕಾರಿಗಳ ಅನುಮತಿ ಇಲ್ಲದೇ, ಖುದ್ದಾಗಿ ವಾಹಿನಿಗಳಲ್ಲಿ ಪ್ರಚಾರ ಪಡಿಸಿರುತ್ತಾರೆಂದು ಸಾರ್ವಜನಿಕರು ಹಾಗೂ ಅಧಿಕಾರಿಗಳಿಂದ ಲಿಖಿತವಾಗಿ ಹಾಗೂ ಮೌಖಿಕವಾಗಿ ದೂರುಗಳು ಬಂದಿರುತ್ತವೆ.

ಇಲಾಖೆಯಲ್ಲಿ ಪ್ರವರ್ಗ 'ಎ' ಮತ್ತು 'ಬಿ' ಸಮೂಹ ದೇವಾಲಯಗಳು ಬಹಳಷ್ಟು ಇದ್ದು, ಎಲ್ಲಾ ದೇವಾಲಯಗಳಿಗೂ ಈ ಒಬ್ಬರೇ ಮೌಲ್ಯಮಾಪಕರನ್ನು ನಿಯೋಜಿಸಿ ರಾಜ್ಯಾದ್ಯಂತ ಮೌಲ್ಯಮಾಪನವನ್ನು ಮಾಡಿಸುವುದು ಅಸಾಧ್ಯ. ಅಲ್ಲದೇ, ಒಬ್ಬರಿಂದಲೇ ಮೌಲ್ಯಮಾಪನ ಮಾಡಿಸುವುದು ಸೂಕ್ತವಲ್ಲ. ಈ ಹಿನ್ನೆಲೆಯಲ್ಲಿ ಆದಾಯ ತೆರಿಗೆ ಇಲಾಖೆಯಿಂದ ಅಂಗೀಕೃತಗೊಂಡ ಮೌಲ್ಯಮಾಪಕರುಗಳನ್ನು ಸಂಪರ್ಕಿಸಲಾಗಿ ಅವರುಗಳು ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿನ ದೇವಾಲಯಗಳಿಗೆ ಹೋಗಿ ಮೌಲ್ಯಮಾಪನ ಮಾಡಲು ಒಪ್ಪಿರುವುದಿಲ್ಲ. ಇದಲ್ಲದೇ, ದೇವಾಲಯಗಳ ಆಭರಣಗಳನ್ನು ಬೆಂಗಳೂರಿಗೆ ತಂದು ಮೌಲ್ಯಮಾಪನ ಮಾಡಿ ಹಿಂದಿರುಗಿಸುವುದಾಗಿ ತಿಳಿಸಿದ್ದು, ಇದು ಸೂಕ್ತವಾಗಿರುವುದಿಲ್ಲ.

ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿನ ರಾಷ್ಟ್ರೀಕೃತ ಬ್ಯಾಂಕುಗಳ ಪ್ಯಾನಲ್‌ಗಳಲ್ಲಿದ್ದ ಆಭರಣಗಳ ಮೌಲ್ಯಮಾಪಕರನ್ನು ನಿಯಮಾನುಸಾರ ನೇಮಕ ಮಾಡಿಕೊಂಡಿರುವುದನ್ನು ಗಮನಿಸಲಾಗಿದೆ. ಅವರುಗಳು ಕಾನೂನಾತ್ಮಕವಾಗಿ ಪ್ಯಾನಲ್‌ಗಳನ್ನು ರಚಿಸಿಕೊಂಡು, ಅದರಲ್ಲಿರುವ ಮೌಲ್ಯಮಾಪಕರಿಂದ ಷರತ್ತು ಭದ್ದ ಕರಾರು ಪತ್ರಗಳನ್ನು ಬರೆಸಿಕೊಂಡು ಮೌಲ್ಯಮಾಪನ ಮಾಡಿಸುವ ಪದ್ಧತಿ ಇರುತ್ತದೆ. ಅದರಂತೆಯೇ ಎಲ್ಲಾ ಜಿಲ್ಲೆಗಳಲ್ಲಿರುವ ರಾಷ್ಟ್ರೀಕೃತ ಬ್ಯಾಂಕುಗಳಲ್ಲಿನ ಪ್ಯಾನಲ್‌ನಲ್ಲಿದ್ದ ಮೌಲ್ಯಮಾಪಕರಿಂದಲೇ ಅವಶ್ಯಕತೆಗನುಗುಣವಾಗಿ ಸ್ಥಳೀಯ ತಹಶೀಲ್ದಾರ್ (ಕಂದಾಯ) ಹಾಗೂ ಸಂಬಂಧಪಟ್ಟ ಎಲ್ಲಾ ಅಧಿಕಾರಿಗಳ ಸಮಕ್ಷಮದಲ್ಲಿ ಸಂಪೂರ್ಣ ವಿಡಿಯೋ ಚಿತ್ರೀಕರಣದೊಂದಿಗೆ ದೇವಸ್ಥಾನಗಳಲ್ಲಿನ ಆಭರಣಗಳನ್ನು ನಿಯಮಾನುಸಾರ ಮೌಲ್ಯಮಾಪನ ಮಾಡಿಸಿಕೊಳ್ಳಲು ಎಲ್ಲಾ ಜಿಲ್ಲಾಧಿಕಾರಿಗಳಿಗೆ ಅನುಮತಿ ನೀಡಿ ಆದೇಶ ಹೊರಡಿಸುವಂತೆ ಹಾಗೂ ಮೌಲ್ಯಮಾಪನ ಶುಲ್ಕವನ್ನು ರಾಷ್ಟ್ರೀಕೃತ ಬ್ಯಾಂಕುಗಳು ಅನುಷ್ಠಾನ ಮಾಡುತ್ತಿರುವ ನಿಯಮಗಳಂತೆಯೇ ದೇವಾಲಯದ ಆಭರಣ ಮೌಲ್ಯಮಾಪನ ಮಾಡಿದ್ದಾಗ್ಯೂ ಸಹ ಅದೇ ನಿಯಮಗಳಂತೆ ದೇವಾಲಯದ ನಿಧಿಯಿಂದ ಮೌಲ್ಯಮಾಪನ ಶುಲ್ಕವನ್ನು ಪಾವತಿಸಲು ಸಹ ಅನುಮತಿ ನೀಡಿ ಆದೇಶ ಹೊರಡಿಸುವಂತೆ ಕೋರಿರುತ್ತಾರೆ.

ಆಯುಕ್ತರು, ಧಾರ್ಮಿಕ ದತ್ತಿ ಇಲಾಖೆ ಇವರ ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ, ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ ಕಂಇ 22 ಮುಆಬಿ 2015, ಬೆಂಗಳೂರು, ದಿನಾಂಕ : 24ನೇ ಏಪ್ರಿಲ್, 2015.

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ರಾಜ್ಯದ ಮುಜರಾಯಿ ಇಲಾಖಾ ವ್ಯಾಪ್ತಿಗೆ ಒಳಪಟ್ಟ ದೇವಾಲಯಗಳಲ್ಲಿನ ಆಭರಣಗಳನ್ನು ಆಯಾಯ ಜಿಲ್ಲೆಯಲ್ಲಿರುವ ರಾಷ್ಟ್ರಿಕೃತ ಬ್ಯಾಂಕುಗಳ ಪ್ಯಾನಲ್‌ಗಳಲ್ಲಿದ್ದ ಆಭರಣಗಳ ಮೌಲ್ಯಮಾಪಕರುಗಳಿಂದ ಅವಶ್ಯಕತೆಗನುಗುಣವಾಗಿ ಸ್ಥಳೀಯ ತಹಶೀಲ್ದಾರ್ (ಕಂದಾಯ) ಹಾಗೂ ಸಂಬಂಧಪಟ್ಟ ಎಲ್ಲಾ ಅಧಿಕಾರಿಗಳ ಸಮಕ್ಷಮದಲ್ಲಿ ಸಂಪೂರ್ಣ ವಿಡಿಯೋ ಚಿತ್ರೀಕರಣದೊಂದಿಗೆ ನಿಯಮಾನುಸಾರ ಮೌಲ್ಯಮಾಪನ ಮಾಡಿಸಿಕೊಳ್ಳುವಂತೆ ಎಲ್ಲಾ ಜಿಲ್ಲಾಧಿಕಾರಿಗಳಿಗೆ ಅನುಮತಿ ನೀಡಿದೆ.

ಮೌಲ್ಯಮಾಪನ ಶುಲ್ಕವನ್ನು ಪಾವತಿಸಲು ರಾಷ್ಟ್ರೀಕೃತ ಬ್ಯಾಂಕುಗಳು ಅನುಷ್ಠಾನ ಮಾಡುತ್ತಿರುವ ನಿಯಮಗಳಂತೆಯೇ ದೇವಾಲಯಗಳಲ್ಲಿ ಆಭರಣ ಮೌಲ್ಯಮಾಪನ ಮಾಡಿದಾಗ್ಯೂ ಸಹ ಆ ವೆಚ್ಚವನ್ನು ಆಯಾಯ ದೇವಾಲಯದ ನಿಧಿಯಿಂದ ಪಾವತಿಸಲು ಅನುಮತಿ ನೀಡಿ ಅದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಸಿ.ಟಿ. ಜಯರಾಮೇಗೌಡ
ಸರ್ಕಾರದ ಅಧೀನ ಕಾರ್ಯದರ್ಶಿ,
ಕಂದಾಯ ಇಲಾಖೆ (ಮುಜರಾಯಿ)

P.R. 461
S.C.- 25

ಆರ್ಥಿಕ ಸಚಿವಾಲಯ

ವಿಷಯ : ಕರ್ನಾಟಕ ರಾಜ್ಯ ಲೆಕ್ಕಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆಯನ್ನು ಪುನರ್ ರಚನೆ–ಹುದ್ದೆಗಳ ಸೃಜನೆ, ಹುದ್ದೆಗಳ ಸ್ಥಳಾಂತರ, ಮರುಪದನಾಮೀಕರಣ ಇವುಗಳನ್ನು ನಿಗದಿಪಡಿಸಿ ಆದೇಶ ಹೊರಡಿಸುವ ಬಗ್ಗೆ.

ಓದಲಾಗಿದೆ :

1. ನಿಯಂತ್ರಕರು ರಾಜ್ಯ ಲೆಕ್ಕಪತ್ರ ಇಲಾಖೆ, ಇವರ ಪ್ರಸ್ತಾವನೆ ಸಂಖ್ಯೆ:ರಾಲೆಪ/5/ಇಟಿಎ/2010/6277 ದಿನಾಂಕ:20.01.2012.
2. ಸರ್ಕಾರದ ಆದೇಶ ಸಂಖ್ಯೆ:ಆಇ 224 ರಾಲೆಪ 2012 ದಿ:02.03.2015.
3. ನಿಯಂತ್ರಕರು, ಕರ್ನಾಟಕ ರಾಜ್ಯ ಲೆಕ್ಕಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆ ಇವರ ಪತ್ರ ಸಂ:ಸಿಎಸ್ಎ/1/ಐಡಿಎಫ್/2012/2014–15 ದಿನಾಂಕ:04.03.2015.

ಪ್ರಸ್ತಾವನೆ :

1) ಮೇಲೆ ಓದಲಾದ (1) ರ ದಿ:20.01.2012ರ ಪ್ರಸ್ತಾವನೆಯಲ್ಲಿ ನಿಯಂತ್ರಕರು, ರಾಜ್ಯ ಲೆಕ್ಕಪತ್ರ ಇಲಾಖೆ ಇವರು ರಾಜ್ಯ ಲೆಕ್ಕಪತ್ರ ಇಲಾಖೆಯ (ಕರ್ನಾಟಕ ರಾಜ್ಯ ಲೆಕ್ಕಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆ ಎಂದು ಮರುಪದನಾಮೀಕರಿಸಿರುವ) ಪುನರ್ ರಚನೆಯ ಪ್ರಸ್ತಾವನೆ ಸಲ್ಲಿಸಿ, ರಾಜ್ಯದಲ್ಲಿನ ಸ್ಥಳೀಯ ಸಂಸ್ಥೆಗಳಾದ ನಗರಪಾಲಿಕೆಗಳು, ನಗರಸಭೆ, ಪುರಸಭೆ, ಪಟ್ಟಣ ಪಂಚಾಯ್ತಿ, ಗ್ರಾಮ ಪಂಚಾಯತಿ ಒಳಗೊಂಡಂತೆ ಇತರೆ ಸಂಸ್ಥೆಗಳು ಮತ್ತು ವಿಶ್ವವಿದ್ಯಾಲಯಗಳ ಲೆಕ್ಕಗಳ ಲೆಕ್ಕಪರಿಶೋಧನೆ ಕಾರ್ಯವನ್ನು ನಿರ್ವಹಿಸುತ್ತಿರುವುದಾಗಿಯೂ ಮತ್ತು ರಾಜ್ಯದ ಎಲ್ಲಾ ಸರ್ಕಾರಿ ಇಲಾಖೆ/ಸಂಸ್ಥೆಗಳಿಗೆ ಹಣಕಾಸು ಅಧಿಕಾರಿಗಳು/ಆರ್ಥಿಕ ಸಲಹೆಗಾರರು, ಮುಖ್ಯ ಲೆಕ್ಕಾಧಿಕಾರಿಗಳು ಹಾಗೂ ಇತರೆ ಸಿಬ್ಬಂದಿಗಳನ್ನು ಆಯಾ ಸಂಸ್ಥೆಗಳ ಲೆಕ್ಕಪತ್ರಗಳನ್ನು ನಿರ್ವಹಿಸಲು ಮತ್ತು ಆಂತರಿಕ ಲೆಕ್ಕಪರಿಶೋಧನೆ ಕೈಗೊಳ್ಳಲು ನಿಯೋಜಿಸಲಾಗುತ್ತಿದೆ. ಹಾಗೂ ಕರ್ನಾಟಕ ರಾಜ್ಯ ಲೆಕ್ಕಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆಯಿಂದ ಕೈಗೊಳ್ಳಲಾಗುತ್ತಿರುವ ಲೆಕ್ಕಪರಿಶೋಧನೆ ಕಾರ್ಯವನ್ನು ಕೆಳಕಂಡ ಮೂರು ಪ್ರತ್ಯೇಕ ವಿಭಾಗಗಳಲ್ಲಿ ಕೈಗೊಳ್ಳಲಾಗುತ್ತಿದೆ ಎಂದು ತಿಳಿಸಿರುತ್ತಾರೆ.

i. ಇಪ್ಪತ್ತೊಂಭತ್ತು ಸ್ಥಳೀಯ ಲೆಕ್ಕಪರಿಶೋಧನಾ ವರ್ತುಲಗಳ ಮೂಲಕ ನಗರಸಭೆ, ಪುರಸಭೆ, ಪಟ್ಟಣ ಪಂಚಾಯತಿಗಳು, ಗ್ರಾಮ ಪಂಚಾಯಿತಿಗಳು, ಪ್ರಾಧಿಕಾರಗಳು, ಮಂಡಳಿಗಳು, ಮುಜರಾಯಿ ಸಂಸ್ಥೆಗಳು ಇತ್ಯಾದಿ ಸ್ಥಳೀಯ ಸಂಸ್ಥೆಗಳ ಲೆಕ್ಕಪರಿಶೋಧನೆ;

ii. ಕರ್ನಾಟಕ ರಾಜ್ಯ ಲೆಕ್ಕಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆಯ ಮುಖ್ಯ ಲೆಕ್ಕಪರಿಶೋಧಕರ ಮೂಲಕ ಮಹಾನಗರ ಪಾಲಿಕೆಗಳ ಲೆಕ್ಕಪರಿಶೋಧನೆ ಮತ್ತು

iii. ಕರ್ನಾಟಕ ರಾಜ್ಯ ಲೆಕ್ಕಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆಯ ಸರ್ಕಾರಿ ಲೆಕ್ಕಪರಿಶೋಧಕರುಗಳ ಮೂಲಕ ವಿಶ್ವವಿದ್ಯಾಲಯಗಳ ಲೆಕ್ಕಪರಿಶೋಧನೆ ಕೈಗೊಳ್ಳಲಾಗುತ್ತಿದೆ.

2) ವಿಶ್ವವಿದ್ಯಾಲಯಗಳ ಸರ್ಕಾರಿ ಲೆಕ್ಕಪರಿಶೋಧಕರ ಕಛೇರಿಗಳು, ಮಹಾನಗರ ಪಾಲಿಕೆಗಳ ಮುಖ್ಯ ಲೆಕ್ಕಪರಿಶೋಧಕರ ಕಛೇರಿಗಳು ಮತ್ತು ಸ್ಥಳೀಯ ಲೆಕ್ಕಪರಿಶೋಧನಾ ವರ್ತುಲ ಕಛೇರಿಗಳು, ಇಲಾಖೆಯ ಪ್ರಾರಂಭದ ಸಮಯದಲ್ಲಿ ಮಂಜೂರಾಗಿದ್ದ ಅಧಿಕಾರಿ ಮತ್ತು ಸಿಬ್ಬಂದಿಗಳಿಂದಲೇ ಕಾರ್ಯ ನಿರ್ವಹಿಸುತ್ತಿದ್ದು, ಸದರಿ ಸಂಸ್ಥೆಗಳ ಸಂಖ್ಯೆ, ಆರ್ಥಿಕ ವ್ಯವಹಾರ ಮತ್ತು ಸರ್ಕಾರದಿಂದ ಬಿಡುಗಡೆಯಾಗುವ ಅನುದಾನಗಳಲ್ಲಿ ಅಂದಿನಿಂದ ಇಂದಿನವರೆಗೆ ಗಣನೀಯ ಹೆಚ್ಚಳವಾಗಿದ್ದು ಅವುಗಳ ಕಾರ್ಯನಿರ್ವಹಣೆ ವ್ಯಾಪ್ತಿಗಳಿಗನುಗುಣವಾಗಿ ಲೆಕ್ಕಪರಿಶೋಧನೆಗೆ ಹೆಚ್ಚುವರಿ ಸಿಬ್ಬಂದಿ ಮಂಜೂರು ಮಾಡುವ ಅವಶ್ಯಕತೆ ಇದೆಯೆಂದು ಪ್ರಸ್ತಾಪಿಸಿದ್ದಾರೆ.

3) ಈ ಹಿನ್ನೆಲೆಯಲ್ಲಿ ಸ್ಥಳೀಯ ಲೆಕ್ಕಪರಿಶೋಧನಾ ವರ್ತುಲ ಕಛೇರಿಗಳನ್ನು ಬಲಪಡಿಸಲು ಹಾಗೂ ಬೆಂಗಳೂರು, ಮೈಸೂರು, ಬೆಳಗಾವಿ ಮತ್ತು ಕಲಬುರಗಿಗಳಲ್ಲಿ 4 ಪ್ರಾಂತೀಯ ಕಛೇರಿಗಳನ್ನು ಪ್ರಾರಂಭಿಸಿ, ಸ್ಥಳೀಯ ಸಂಸ್ಥೆಗಳ ಮತ್ತು ವಿಶ್ವವಿದ್ಯಾಲಯಗಳ ಲೆಕ್ಕಪರಿಶೋಧನೆಯ ಮೇಲ್ವಿಚಾರಣೆಯನ್ನು ಪ್ರಾಂತೀಯ ಕಛೇರಿಗಳ ಮೂಲಕ ಕೈಗೊಳ್ಳಲು ಉದ್ದೇಶಿಸಿ ಇಲಾಖೆಯ ಪುನರ್ ರಚನೆಗೆ ಅನುಸಾರವಾಗಿ ಲೆಕ್ಕಪರಿಶೋಧನೆ ವಿಭಾಗದಲ್ಲಿನ ಗ್ರೂಪ್–ಎ ವೃಂದದಲ್ಲಿನ ಹುದ್ದೆಗಳ ಪದನಾಮವನ್ನು ಮರು ಪದನಾಮೀಕರಿಸಲು ಪ್ರಸ್ತಾಪಿಸಿದ್ದಾರೆ. ಸದರೀ ಪ್ರಸ್ತಾವನೆಯನ್ನು ಪರಿಶೀಲಿಸಿ ಮೇಲೆ (2)ರಲ್ಲಿ ಓದಲಾದ 02.03.2015ರ ಸರ್ಕಾರದ ಆದೇಶದಲ್ಲಿ ರಾಜ್ಯ ಲೆಕ್ಕಪತ್ರ ಇಲಾಖೆಯ ಹೆಸರನ್ನು ಕರ್ನಾಟಕ ರಾಜ್ಯ ಲೆಕ್ಕಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆ ಎಂದು ಮರುನಾಮಕರಣಗೊಳಿಸಲಾಗಿದೆ. ಇದರ ತರುವಾಯ ಕರ್ನಾಟಕ ರಾಜ್ಯ ಲೆಕ್ಕಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆಯ ಪುನರ್ ರಚನೆಯನ್ನು ಪರಿಶೀಲಿಸಿದ ಸರ್ಕಾರವು ಮುಂದಿನಂತೆ ಆದೇಶಿಸುತ್ತದೆ.

ಸರ್ಕಾರದ ಆದೇಶ ಸಂಖ್ಯೆ : ಆಇ 331 ರಾಲೆಪ 2014, ಬೆಂಗಳೂರು, ದಿನಾಂಕ : 18–05–2015.

ಪ್ರಸ್ತಾವನೆಯಲ್ಲಿ ವಿವರಿಸಲ್ಪಟ್ಟ ಸನ್ನಿವೇಶಗಳಿಂದಾಗಿ ಕರ್ನಾಟಕ ರಾಜ್ಯ ಲೆಕ್ಕಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆಯನ್ನು ತಕ್ಷಣದಿಂದ ಜಾರಿಗೆ ಬರುವಂತೆ ಈ ಕೆಳಕಂಡಂತೆ ಪುನರ್ ರಚಿಸಲು ಈ ಮೂಲಕ ಸರ್ಕಾರದ ಅನುಮೋದನೆ ನೀಡಲಾಗಿದೆ:–

1. ಬೆಂಗಳೂರು, ಮೈಸೂರು, ಬೆಳಗಾವಿ ಮತ್ತು ಕಲಬುರಗಿಗಳಲ್ಲಿ 4 ಪ್ರಾಂತೀಯ ಕಛೇರಿಗಳ ಸೃಜನೆ.

2. ನಾಲ್ಕು ಪ್ರಾಂತೀಯ ಕಛೇರಿಗಳ ವ್ಯಾಪ್ತಿಯಲ್ಲಿ ಬರುವ ವಿಶ್ವವಿದ್ಯಾಲಯಗಳಲ್ಲಿ ಇರುವ ಕರ್ನಾಟಕ ರಾಜ್ಯ ಲೆಕ್ಕಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆಯ ಸರ್ಕಾರಿ ಲೆಕ್ಕ ಪರಿಶೋಧಕರ ಕಛೇರಿಗಳನ್ನು ಅವುಗಳಿಗೆ ಮಂಜೂರಾಗಿರುವ ಹುದ್ದೆಗಳೊಂದಿಗೆ ಅನುಬಂಧ-1ರಲ್ಲಿ ನಮೂದಿಸಿರುವಂತೆ ಆಯಾ ಪ್ರಾಂತೀಯ ಕಛೇರಿಗಳೊಂದಿಗೆ ಈ ಕೆಳಕಂಡಂತೆ ವಿಲೀನಗೊಳಿಸತಕ್ಕದ್ದು.

ಕರ್ನಾಟಕ ರಾಜ್ಯ ಲೆಕ್ಕಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆಯ ಪ್ರಾಂತೀಯ ಕಛೇರಿ	**ವಿಲೀನಗೊಳ್ಳುತ್ತಿರುವ ವಿಶ್ವವಿದ್ಯಾನಿಲಯಗಳು (ಅನುಬಂಧ-1ರಲ್ಲಿನ ಹುದ್ದೆಗಳೊಂದಿಗೆ)**
1. ಬೆಂಗಳೂರು ಪ್ರಾಂತೀಯ ಕಛೇರಿ	1. ಬೆಂಗಳೂರು ವಿಶ್ವವಿದ್ಯಾಲಯ 2. ಜಿ.ಕೆ.ವಿ.ಕೆ ಬೆಂಗಳೂರು (ಕೇಂದ್ರ ಕಚೇರಿಗೆ ಸ್ಥಳಾಂತರಿಸಿದ ಜಂಟಿ ನಿಯಂತ್ರಕರ ಹುದ್ದೆಯನ್ನು ಹೊರತುಪಡಿಸಿ) 3. ತುಮಕೂರು ವಿಶ್ವವಿದ್ಯಾಲಯ
2. ಮೈಸೂರು ಪ್ರಾಂತೀಯ ಕಛೇರಿ:	1. ಮೈಸೂರು ವಿಶ್ವವಿದ್ಯಾಲಯ 2. ಮಂಗಳೂರು ವಿಶ್ವವಿದ್ಯಾಲಯ 3. ಕುವೆಂಪು ವಿಶ್ವವಿದ್ಯಾಲಯ ಶಿವಮೊಗ್ಗ
3. ಬೆಳಗಾವಿ ಪ್ರಾಂತೀಯ ಕಛೇರಿ:	1. ಕೃಷಿ ವಿಶ್ವವಿದ್ಯಾಲಯ, ಧಾರವಾಡ 2. ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ 3. ಮಹಿಳಾ ವಿಶ್ವವಿದ್ಯಾಲಯ, ವಿಜಯಪುರ
4. ಕಲಬುರಗಿ ಪ್ರಾಂತೀಯ ಕಛೇರಿ:	1. ಕಲಬುರಗಿ ವಿಶ್ವವಿದ್ಯಾಲಯ

3. ಮಹಾನಗರ ಪಾಲಿಕೆಗಳ ಮುಖ್ಯ ಲೆಕ್ಕಪರಿಶೋಧಕರ ಕಛೇರಿಗಳಲ್ಲಿನ ಕರ್ನಾಟಕ ರಾಜ್ಯ ಲೆಕ್ಕಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆಯ ಅಧಿಕಾರಿ/ಸಿಬ್ಬಂದಿಗೆ ಮೀಸಲಿರಿಸಿ ಗುರುತಿಸಿರುವ 76 ವಿವಿಧ ಹುದ್ದೆಗಳನ್ನು ಅನುಬಂಧ-2ರಂತೆ ಕರ್ನಾಟಕ ರಾಜ್ಯ ಲೆಕ್ಕಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆಗೆ ಸ್ಥಳಾಂತರಿಸತಕ್ಕದ್ದು ಪ್ರಾಂತೀಯ ಕಛೇರಿಗೆ ಹುದ್ದೆಗಳ ವಿಲೀನವಾಗುತ್ತಿರುವ ಅಧಿಕಾರಿ/ಸಿಬ್ಬಂದಿ ವರ್ಗಾವಣೆ ಆದೇಶವನ್ನು ಪ್ರತ್ಯೇಕವಾಗಿ ಹೊರಡಿಸಲಾಗುವುದು.

4. ಅನುಬಂಧ-3 ಮತ್ತು ಅದಕ್ಕೆ ಲಗತ್ತಾದ 1 ರಿಂದ 13 ಕೋಷ್ಟಕಗಳಲ್ಲಿ ವಿವರಿಸಿರುವಂತೆ 297 ವಿವಿಧ ಹುದ್ದೆಗಳನ್ನು ಲೆಕ್ಕಪರಿಶೋಧನಾ ವಿಭಾಗದಲ್ಲಿ ಸೃಜಿಸಲು ಹಾಗೂ ಆ ಸದರಿ ಹುದ್ದೆಗಳಲ್ಲಿ 182 ಹುದ್ದೆಗಳನ್ನು ನೇರ ನೇಮಕಾತಿ ಹಾಗೂ 115 ಹುದ್ದೆಗಳನ್ನು ಮುಂಬಡ್ತಿ ಮುಖಾಂತರ ಭರ್ತಿ ಮಾಡಲು ಸರ್ಕಾರದ ಮಂಜೂರಾತಿ ನೀಡಲಾಗಿದೆ.

5. ವಿವಿಧ ಇಲಾಖೆಗಳಲ್ಲಿ/ಸಂಸ್ಥೆಗಳಲ್ಲಿ ಗ್ರೂಪ್-ಎ ವೃಂದಗಳ ಪದನಾಮವನ್ನು ಲೆಕ್ಕಪರಿಶೋಧನೆ ವಿಭಾಗಕ್ಕೆ ಸಂಬಂಧಿಸಿದಂತೆ ಲೆಕ್ಕಪತ್ರ ವಿಭಾಗದಿಂದ ಲೆಕ್ಕ ಪರಿಶೋಧನೆ ವಿಭಾಗಕ್ಕೆ ನೇಮಕವಾದ ಸಂದರ್ಭದಲ್ಲಿ ಪದನಾಮವು ಸ್ವಯಂಚಾಲಿತವಾಗಿ ಅನುಬಂಧ-4 ರಲ್ಲಿ ನಮೂದಿಸಿರುವಂತೆ ಮರುಪದನಾಮೀಕರಣವಾಗುತ್ತದೆ.

ಸಿಬ್ಬಂದಿ ಮತ್ತು ಆಡಳಿತ ಸುಧಾರಣೆಗೆ ಇಲಾಖೆ (ಸೇವೆಗಳು-6)ಯ ತಾತ್ವಿಕ ಅನುಮೋದನೆ ಹಾಗೂ ಸಹಮತಿಯನ್ನು ಟಿಪ್ಪಣಿ ಸಂಖ್ಯೆ:ಸಿಆಸುಇ/531/ಸಉಸೇ/2014, ದಿನಾಂಕ:07-02-2015ರಲ್ಲಿ ಪಡೆದು ಈ ಆದೇಶವನ್ನು ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಎನ್.ಲಕ್ಷ್ಮಣ

ಸರ್ಕಾರದ ಅಧೀನ ಕಾರ್ಯದರ್ಶಿ,

ಆರ್ಥಿಕ ಇಲಾಖೆ (ಆಡಳಿತ ಮತ್ತು ಮುಂಗಡ)

ಅನುಬಂಧ–1

ಸರ್ಕಾರದ ಆದೇಶ ಸಂಖ್ಯೆ: ಆಇ 331 ರಾಲೆಪ 2014, ದಿನಾಂಕ: 18.05.2015

ಪ್ರಾಂತೀಯ ಕಛೇರಿಗಳಿಗೆ ವಿಲೀನಗೊಳ್ಳಬೇಕಾದ ವಿಶ್ವವಿದ್ಯಾಲಯಗಳ ಸರ್ಕಾರಿ ಲೆಕ್ಕಪರಿಶೋಧಕರ ಕಛೇರಿಗಳ ಹುದ್ದೆಗಳು

ಕ್ರ.ಸಂ.	ಪ್ರಾಂತೀಯ ಕಛೇರಿ	ವಿಶ್ವವಿದ್ಯಾಲಯಗಳು	ಜಂಟಿ ನಿಯಂತ್ರಕರು	ಉಪ ನಿಯಂತ್ರಕರು	ಲೆಕ್ಕಪರಿಶೋಧನ ಅಧಿಕಾರಿಗಳು	ಲೆಕ್ಕ ಸಹಾಯಕರು	ಕಿರಿಯ ಲೆಕ್ಕ ಸಹಾಯಕರು	ಶೀಘ್ರ ಲಿಪಿಗಾರರು	ಬೆರಳಚ್ಚು ಗಾರರು	ಗ್ರೂಪ್ 'ಡಿ' ನೌಕರರು	ಷರಾ
1	ಬೆಂಗಳೂರು	**ಬೆಂಗಳೂರು ವಿ.ವಿ.**	**–**	**01**	**02**	**09**	**01**	**01**	**01**	**01**	
		ಜಿ.ಕೆ.ವಿ.ಕೆ ಬೆಂಗಳೂರು	01	–	03	14	01	–	01	01	ಜಂಟಿ ನಿಯಂತ್ರಕರ ಹುದ್ದೆಯನ್ನು ಕೇಂದ್ರ ಕಛೇರಿಗೆ ಸ್ಥಳಾಂತರಿಸಿದೆ
		ತುಮಕೂರು ವಿ.ವಿ	–	01	02	04	01	–	01	02	
2	ಮೈಸೂರು	ಮೈಸೂರು ವಿ.ವಿ	–	01	02	10	01	–	01	03	
		ಮಂಗಳೂರು ವಿ.ವಿ.	–	01	01	03	–	–	01	01	
		ಕುವೆಂಪು ವಿ.ವಿ.	–	01	01	03	01	–	01	01	
3	ಬೆಳಗಾವಿ	ಕೃಷಿ ವಿ.ವಿ ಧಾರವಾಡ	–	01	02	10	01	–	01	01	
		ಕರ್ನಾಟಕ ವಿ.ವಿ. ಧಾರವಾಡ	–	01	02	10	01	–	01	03	
		ಮಹಿಳಾ ವಿ.ವಿ. ವಿಜಯಪುರ	–	01	02	04	01	–	01	02	
4	ಕಲಬುರಗಿ	ಕಲಬುರಗಿ ವಿ.ವಿ.	–	01	01	04	01	–	01	01	

ಎನ್.ಲಕ್ಷ್ಮಣ
ಸರ್ಕಾರದ ಅಧೀನ ಕಾರ್ಯದರ್ಶಿ,
ಆರ್ಥಿಕ ಇಲಾಖೆ (ಆಡಳಿತ ಮತ್ತು ಮುಂಗಡಗಳು)

ಅನುಬಂಧ–2

ಸರ್ಕಾರದ ಆದೇಶ ಸಂಖ್ಯೆ: ಆಇ 331 ರಾಲೆಪ 2014, ದಿನಾಂಕ: 18.05.2015.

(ಕರ್ನಾಟಕ ರಾಜ್ಯ ಲೆಕ್ಕಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆಗೆ ಸ್ಥಳಾಂತರಿಸಲಾದ ಹುದ್ದೆಗಳು)

ಕ್ರ.ಸಂ.	ಮಹಾನಗರ ಪಾಲಿಕೆ	ಜಂಟಿ ನಿಯಂತ್ರಕರು	ಲೆಕ್ಕ ಪರಿಶೋಧನಾ ಅಧಿಕಾರಿ	ಲೆಕ್ಕ ಅಧೀಕ್ಷಕರು	ಲೆಕ್ಕ ಸಹಾಯಕರು	ಶೀಘ್ರ ಲಿಪಿಗಾರರು	ಕಿರಿಯ ಸಹಾಯಕರು	ಬೆರಳಚ್ಚು ಗಾರರು	ಚಾಲಕರು	ಗ್ರೂಪ್ 'ಡಿ' ನೌಕರರು	ಒಟ್ಟು
1	ಬೆಳಗಾವಿ	1	1	–	2	1	–	3	2	2	**12**
2	ಮೈಸೂರು	1	2	–	3	1	–	3	1	2	**13**
3	ಮಂಗಳೂರು	1	1	2	3	1	–	3	1		**14**
4	ಹುಬ್ಬಳ್ಳಿ – ಧಾರವಾಡ	1	1	2	2	–	1	2	1		**12**
5	ಕಲಬುರಗಿ	1	1	–	2	–	–	2	1	2	**8**
6	ದಾವಣಗೆರೆ	1	1	–	2	1	–	2	1	2	**9**
7	ಬಳ್ಳಾರಿ	1	1	–	2	–	–	2	1	1	**8**
	ಒಟ್ಟು	**7**	**8**	**4**	**16**	**4**	**1**	**17**	**8**	**11**	**76**

ಎನ್.ಲಕ್ಷ್ಮಣ
ಸರ್ಕಾರದ ಅಧೀನ ಕಾರ್ಯದರ್ಶಿ,
ಆರ್ಥಿಕ ಇಲಾಖೆ (ಆಡಳಿತ ಮತ್ತು ಮುಂಗಡಗಳು)

ಅನುಬಂಧ–3

ಸರ್ಕಾರದ ಆದೇಶ ಸಂಖ್ಯೆ: ಆಇ 331 ರಾಲೆಪ 2014, ದಿನಾಂಕ: 18.05.2015

ಕ್ರಸಂ	ವೃಂದದ ಹೆಸರು	ಹುದ್ದೆಗಳ ಸಂಖ್ಯೆ				ನೇಮಕಾತಿ ವಿಧಾನ (ಅಂಕಣ–4)		ವೇತನ ಶ್ರೇಣಿ	ಷರಾ
		ಹಾಲಿ ಇರುವ ಹುದ್ದೆಗಳು			ಸೃಜಿಸಲಾದ ಹುದ್ದೆಗಳು	ನೇರ ನೇಮಕಾತಿ	ಮುಂಬಡ್ತಿ		
		ಇಲಾಖೆಯ ಹುದ್ದೆಗಳು	ಇತರೆ ಇಲಾಖೆ/ನಿಗಮ ಮಂಡಳಿಗಳು/ ನಿಯೋಜನೆ ಹುದ್ದೆಗಳು	ಒಟ್ಟು ಹುದ್ದೆಗಳು					
1	2	3			4	5	6	7	8
1	ಪ್ರಧಾನ ನಿರ್ದೇಶಕರು ಲೆಕ್ಕಪತ್ರ ಮತ್ತು ಲೆಕ್ಕಪರಿಶೋಧನೆ Principal Director of Accounts and Audit	–	–	–	1	–	ಮುಂಬಡ್ತಿ	56550–79800	ಈ ಹುದ್ದೆಯನ್ನು ಮುಬಂಡ್ತಿ ಮೂಲಕ ತುಂಬುವ ಕಾರ್ಯವಿಧಾನವನ್ನು ಪ್ರತ್ಯೇಕವಾಗಿ ನಿಗದಿಪಡಿಸಲಾಗುವುದು
2	ನಿರ್ದೇಶಕರು (Director)	1	–	1	–	–	–	52000–73000	ರಾಜ್ಯ ಲೆಕ್ಕಪತ್ರ ಇಲಾಖೆಯ ನಿಯಂತ್ರಕರ ಹುದ್ದೆಯನ್ನು ಮರು ಪದನಾಮೀಕರಿಸುವುದು
3	ಅಪರ ನಿರ್ದೇಶಕರು (Additional Director)	2	7	9	4	–	4	44250–60600	ಅಪರ ನಿಯಂತ್ರಕರ ಹುದ್ದೆಯನ್ನು ಮರು ಪದನಾಮೀಕರಿಸಿರುವುದು ನಾಲ್ಕು ಪ್ರಾಂತೀಯ ಕಛೇರಿಗಳಿಗೆ ನಾಲ್ಕು ಅಪರ ನಿರ್ದೇಶಕರ ಹುದ್ದೆಗಳನ್ನು ಸೃಜಿಸಲಾಗಿದೆ. ಹುದ್ದೆಗಳ ವಿವರಗಳನ್ನು ಅನುಬಂಧ–3 ಕೋಷ್ಟಕ 1ರಲ್ಲಿ ನೀಡಲಾಗಿದೆ.
4	ಜಂಟಿ ನಿರ್ದೇಶಕರು (Joint Director)	11	95	106	2	–	2	40050–56550	ಜಂಟಿ ನಿಯಂತ್ರಕರ ಹುದ್ದೆಯನ್ನು ಮರು ಪದ ನಾಮೀಕರಿಸಿರುವುದು ಮಹಾನಗರ ಪಾಲಿಕೆಗಳು ಇರುವ ಜಿಲ್ಲೆಗಳ ಸ್ಥಳೀಯ ಲೆಕ್ಕಪರಿಶೋಧನಾ ವರ್ತುಲಗಳಿಗೆ ಜಂಟಿ ನಿರ್ದೇಶಕರ ಹುದ್ದೆಗಳನ್ನು ಸೃಜಿಸಲು ಉದ್ದೇಶಿಸಲಾಗಿದ್ದು, ಹಾಲಿ ಇರುವ ಹುದ್ದೆಗಳನ್ನು ಹೊಂದಾಣಿಕೆ ಮಾಡಿದ ನಂತರ ಅಗತ್ಯವಿರುವ 2 ಹೆಚ್ಚುವರಿ ಹುದ್ದೆಗಳನ್ನು ಸೃಜಿಸಲಾಗಿದೆ. ಹುದ್ದೆಗಳ ವಿವರಗಳನ್ನು ಅನುಬಂಧ–3 ಕೋಷ್ಟಕ 2ರಲ್ಲಿ ನೀಡಲಾಗಿದೆ.

1	2	3			4	5	6	7	8
5	ಹಿರಿಯ ಉಪ ನಿರ್ದೇಶಕರು (Senior Deputy Director)	9	72	81	20	–	20	36300–53850	ಉಪ ನಿಯಂತ್ರಕರ ಹುದ್ದೆಯನ್ನು ಮರು ಪದನಾಮೀಕರಿಸಿರುವುದು. ಮಹಾನಗರ ಪಾಲಿಕೆಗಳು ಇಲ್ಲದೆ ಇರುವ ಸ್ಥಳೀಯ ಲೆಕ್ಕಪರಿಶೋಧನಾ ವರ್ತುಲಗಳಲ್ಲಿ ಹಾಲಿ ಸಹಾಯಕ ನಿಯಂತ್ರಕರು ಮುಖ್ಯಸ್ಥರಾಗಿರುವ ಕಛೇರಿಗಳಿಗೆ ಹಿರಿಯ ಉಪ ನಿರ್ದೇಶಕರ ಹುದ್ದೆಗಳನ್ನು ಸೃಜಿಸಲಾಗಿದೆ. ಹುದ್ದೆಗಳ ವಿವರಗಳನ್ನು ಅನುಬಂಧ–3 ಕೋಷ್ಟಕ 3ರಲ್ಲಿ ನೀಡಲಾಗಿದೆ.
6	ಉಪ ನಿರ್ದೇಶಕರು (Deputy Director)	34	206	240	09	5	4	28100–50100	ಸಹಾಯಕ ನಿಯಂತ್ರಕರ ಹುದ್ದೆಯನ್ನು ಮರು ಪದನಾಮೀಕರಿಸಿರುವುದು. ಕೇಂದ್ರ ಕಛೇರಿಗೆ 6 ಹುದ್ದೆಗಳನ್ನು 4 ಪ್ರಾಂತೀಯ ಕಛೇರಿಗಳಿಗೆ 4 ಹುದ್ದೆಯನ್ನು ಸೃಜಿಸಲು ಉದ್ದೇಶಿಸಿದ್ದು 1 ಹುದ್ದೆಗಳನ್ನು ವಿಶ್ವವಿದ್ಯಾಲಯಕ್ಕೆ ಸ್ಥಳಾಂತರಿಸಲು ಉದ್ದೇಶಿಸಲಾಗಿದ್ದು 9 ಹುದ್ದೆಗಳನ್ನು ಸೃಜಿಸಲಾಗಿದೆ. ಹುದ್ದೆಗಳ ವಿವರಗಳನ್ನು ಅನುಬಂಧ –3 ಕೋಷ್ಟಕ 4ರಲ್ಲಿ ನೀಡಲಾಗಿದೆ.
7	ಲೆಕ್ಕಪರಿಶೋಧನಾಧಿಕಾರಿ (Audit Officer)	91	390	481	43	22	21	22800–43200	ಕೇಂದ್ರ ಕಛೇರಿಗೆ 5 ಹೆಚ್ಚುವರಿ ಹುದ್ದೆಗಳು ಮತ್ತು 4 ಪ್ರಾಂತೀಯ ಕಛೇರಿಗಳಿಗೆ 38 ಹುದ್ದೆಗಳನ್ನು ಸೃಜಿಸಲಾಗಿದೆ. 1. ಬೆಂಗಳೂರು ಪ್ರಾಂತೀಯ ಕಛೇರಿ 11 ಹುದ್ದೆಗಳು. 2. ಬೆಳಗಾವಿ ಪ್ರಾಂತೀಯ ಕಛೇರಿ 11 ಹುದ್ದೆಗಳು. 3. ಕಲಬುರಗಿ ಪ್ರಾಂತೀಯ ಕಛೇರಿ 08 ಹುದ್ದೆಗಳು. 4. ಮೈಸೂರು ಪ್ರಾಂತೀಯ ಕಛೇರಿ 09 ಹುದ್ದೆಗಳು. ಹುದ್ದೆಗಳ ವಿವರಗಳನ್ನು ಅನುಬಂಧ–3 ಕೋಷ್ಟಕ 5ರಲ್ಲಿ ನೀಡಲಾಗಿದೆ.

1	2	3			4	5	6	7	8
8	ಸಿಸ್ಟಮ್ ಅನಾಲಿಸ್ಟ್	–	–	–	01	01	–	20000–36300	ಕೇಂದ್ರ ಕಛೇರಿಗೆ ಹೊಸದಾಗಿ ಸೃಜಿಸಲಾದ ಹುದ್ದೆ. ಹುದ್ದೆಗಳ ವಿವರಗಳನ್ನು ಅನುಬಂಧ–3 ಕೋಷ್ಟಕ 6ರಲ್ಲಿ ನೀಡಲಾಗಿದೆ.
9	ಲೆಕ್ಕಾಧೀಕ್ಷಕರು (Account Superintendent)	38	654	692	50	–	50	21600–40050	4 ಪ್ರಾಂತೀಯ ಕಛೇರಿಗಳಿಗೆ 34 ಹುದ್ದೆಗಳು, ಪ್ರಸ್ತುತ ಲೆಕ್ಕ ಅಧೀಕ್ಷಕರ ಹುದ್ದೆ ಮಂಜೂರಾಗಿರದೆ ಇರುವ ಸ್ಥಳೀಯ ಲೆಕ್ಕಪರಿಶೋಧನಾ ವರ್ತುಲಗಳಿಗೆ 15 ಹುದ್ದೆಗಳು ಮತ್ತು ಕೇಂದ್ರ ಕಛೇರಿಗೆ 1 ಹುದ್ದೆ ಸೃಜಿಸಲಾಗಿದೆ. ಹುದ್ದೆಗಳ ವಿವರಗಳನ್ನು ಅನುಬಂಧ–3 ಕೋಷ್ಟಕ 7ರಲ್ಲಿ ನೀಡಲಾಗಿದೆ.
10	ಲೆಕ್ಕ ಸಹಾಯಕರು (Account Assistant)	398	1573	1971	11	8	3	14550–26700	4 ಪ್ರಾಂತೀಯ ಕಛೇರಿಗಳಿಗೆ ಹಾಲಿ ಲಭ್ಯವಿರುವ ಹುದ್ದೆಗಳನ್ನು ಹೊಂದಾಣಿಕೆ ಮಾಡಿದ ನಂತರ ಸೃಜಿಸಲಾದ ಹೆಚ್ಚುವರಿ ಹುದ್ದೆಗಳು. ಹುದ್ದೆಗಳ ವಿವರಗಳನ್ನು ಅನುಬಂಧ–3 ಕೋಷ್ಟಕ 8ರಲ್ಲಿ ನೀಡಲಾಗಿದೆ.
11	ಶೀಘ್ರಲಿಪಿಗಾರರು (Stenographer)	7	–	7	16	12	4	14550–26700	ಕೇಂದ್ರ ಕಛೇರಿಯ ಜಾಗೃತ ಕೋಶಕ್ಕೆ 3 ಹುದ್ದೆಗಳು ಪ್ರಾಂತೀಯ ಕಛೇರಿಗಳಿಗೆ 8 ಹುದ್ದೆಗಳು ಮತ್ತು ಜಂಟಿ ನಿಯಂತ್ರಕರು ಮುಖ್ಯಸ್ಥರಾಗಿರುವ ಸ್ಥಳೀಯ ಲೆಕ್ಕಪರಿಶೋಧನಾ ವರ್ತುಲಗಳಿಗೆ 5 ಹುದ್ದೆಗಳನ್ನು ಸೃಜಿಸಲಾಗಿದೆ. ಹುದ್ದೆಗಳ ವಿವರಗಳನ್ನು ಅನುಬಂಧ–3 ಕೋಷ್ಟಕ 9ರಲ್ಲಿ ನೀಡಲಾಗಿದೆ.

1	2	3			4	5	6	7	8
12	ಕಿರಿಯ ಲೆಕ್ಕ ಸಹಾಯಕರು (Junior Account Assistant)	42	714	756	11	10	1	11600–21000	ಕೇಂದ್ರ ಕಛೇರಿಗೆ 8 ಹುದ್ದೆಗಳು (ಜಾಗೃತ ಕೋಶ, ತರಬೇತಿ ಕೋಶ, ಉಪ–ನಿರ್ದೇಶಕರು (ಆಡಳಿತ ಮತ್ತು ಲೆಕ್ಕ ಪರಿಶೋಧನಾ ಶಾಖೆಗಳಿಗೆ) 4 ಪ್ರಾಂತೀಯ ಕಛೇರಿಗಳಿಗೆ 4 ಹುದ್ದೆಗಳು. ಹುದ್ದೆಗಳ ವಿವರಗಳನ್ನು ಅನುಬಂಧ–3 ಕೋಷ್ಟಕ 10ರಲ್ಲಿ ನೀಡಲಾಗಿದೆ.
13	ಬೆರಳಚ್ಚುಗಾರರು/ಡಾಟಾ ಎಂಟ್ರಿ ಆಪರೇಟರ್ (Typist/Data entry operator)	62	3	65	26	26	–	11600–21000	ಕೇಂದ್ರ ಕಛೇರಿಗೆ 10 ಹುದ್ದೆಗಳು ಪ್ರಾಂತೀಯ ಕಛೇರಿಗಳಿಗೆ 16 ಹುದ್ದೆಗಳು. ಹುದ್ದೆಗಳ ವಿವರಗಳನ್ನು ಅನುಬಂಧ–3 ಕೋಷ್ಟಕ 11ರಲ್ಲಿ ನೀಡಲಾಗಿದೆ.
14	ವಾಹನ ಚಾಲಕರು (Drivers)	2	–	2	50	45	5	11600–21000	ಕೇಂದ್ರ ಕಛೇರಿಗೆ 8 ಹುದ್ದೆಗಳು 12 ಪ್ರಾಂತೀಯ ಕಛೇರಿಗಳಿಗೆ 20 ಹುದ್ದೆಗಳು ಸ್ಥಳೀಯ ಲೆಕ್ಕಪರಿಶೋಧನಾ ವರ್ತುಲಗಳಿಗೆ 30ಹುದ್ದೆಗಳು. ಹುದ್ದೆಗಳು ವಿವರಗಳನ್ನು ಅನುಬಂಧ–3 ಕೋಷ್ಟಕ 12ರಲ್ಲಿ ನೀಡಲಾಗಿದೆ.
15	ಗ್ರೂಪ್ 'ಡಿ'/ಅಟೆಂಡೆಂಟ್ (Group 'D' Attendant)	61	10	71	53	53	–	11000–19000	ಕೇಂದ್ರ ಕಛೇರಿಗೆ 11 ಹುದ್ದೆಗಳು ಪ್ರಾಂತೀಯ ಕಛೇರಿಗಳಿಗೆ 24 ಹುದ್ದೆಗಳು ಸ್ಥಳೀಯ ಲೆಕ್ಕಪರಿಶೋಧನಾ ವರ್ತುಲಗಳಿಗೆ 18 ಹೆಚ್ಚುವರಿ ಹುದ್ದೆಗಳು. ಹುದ್ದೆಗಳು ವಿವರಗಳನ್ನು ಅನುಬಂಧ–3 ಕೋಷ್ಟಕ 13ರಲ್ಲಿ ನೀಡಲಾಗಿದೆ.
	ಒಟ್ಟು	**758**	**3724**	**4482**	**297***	**182**	**115**	**–**	**–**

***ಟಿಪ್ಪಣಿ : ಲೆಕ್ಕಪರಿಶೋಧನೆ ವಿಭಾಗದಲ್ಲಿ ಒಟ್ಟು 297 ಹುದ್ದೆಗಳು ಸೃಜಿಸಲಾಗಿದೆ.**

ಎನ್.ಲಕ್ಷ್ಮಣ
ಸರ್ಕಾರದ ಅಧೀನ ಕಾರ್ಯದರ್ಶಿ,
ಆರ್ಥಿಕ ಇಲಾಖೆ (ಆಡಳಿತ ಮತ್ತು ಮುಂಗಡಗಳು)

ಅನುಬಂಧ– 3ಕ್ಕೆ ಲಗತ್ತಿಸಿದ ಕೋಷ್ಟಕಗಳು

ಸರ್ಕಾರದ ಆದೇಶ ಸಂಖ್ಯೆ: ಆಇ 331 ರಾಲೆಪ 2014, ದಿನಾಂಕ: 18.05.2015.

ಕೋಷ್ಟಕ–1

ಅಪರ ನಿರ್ದೇಶಕರು ಹುದ್ದೆಗಳು –4 (ಸೃಜನೆ)

ವೇತನ ಶ್ರೇಣಿ–44250–1050–45300–1200–52500–1350–60600

1	ಪ್ರಾಂತೀಯ ಕಛೇರಿ ಬೆಂಗಳೂರು	1 ಹುದ್ದೆ
2	ಪ್ರಾಂತೀಯ ಕಛೇರಿ ಮೈಸೂರು	1 ಹುದ್ದೆ
3	ಪ್ರಾಂತೀಯ ಕಛೇರಿ ಬೆಳಗಾವಿ	1 ಹುದ್ದೆ
4	ಪ್ರಾಂತೀಯ ಕಛೇರಿ ಕಲಬುರಗಿ	1 ಹುದ್ದೆ

ಕೋಷ್ಟಕ–2

ಜಂಟಿ ನಿರ್ದೇಶಕರು ಹುದ್ದೆಗಳು –2 (ಸೃಜನೆ)

ವೇತನ ಶ್ರೇಣಿ–40050–1050–45300–1200–52500–1350–56550

1	ತುಮಕೂರು ಸ್ಥಳೀಯ ಲೆಕ್ಕಪರಿಶೋಧನಾ ವರ್ತುಲ	1 ಹುದ್ದೆ
2	ಶಿವಮೊಗ್ಗ ಸ್ಥಳೀಯ ಲೆಕ್ಕಪರಿಶೋಧನಾ ವರ್ತುಲ	1 ಹುದ್ದೆ

ಟಿಪ್ಪಣಿ : ಕೇಂದ್ರ ಕಛೇರಿಯ (ಆಡಳಿತ ಮತ್ತು ಮಾನವ ಸಂಪನ್ಮೂಲ) ಹುದ್ದೆಗೆ ಸರ್ಕಾರಿ ಲೆಕ್ಕಪರಿಶೋಧಕರು ಜಿ.ಕೆ.ವಿ.ಕೆ ಬೆಂಗಳೂರು ಕಛೇರಿಯಲ್ಲಿರುವ ಜಂಟಿ ನಿಯಂತ್ರಕರ ಹುದ್ದೆಯನ್ನು ಸ್ಥಳಾಂತರಿಸಲಾಗಿದೆ.

ಎನ್.ಲಕ್ಷ್ಮಣ
ಸರ್ಕಾರದ ಅಧೀನ ಕಾರ್ಯದರ್ಶಿ,
ಆರ್ಥಿಕ ಇಲಾಖೆ (ಆಡಳಿತ ಮತ್ತು ಮುಂಗಡಗಳು)

ಕೋಷ್ಟಕ–3

ಹಿರಿಯ ಉಪ ನಿರ್ದೇಶಕರು 20 ಹುದ್ದೆಗಳು (ಸೃಜನೆ)

ವೇತನ ಶ್ರೇಣಿ–36300–900–39000–1050–45300–1200–52500–1350–53850

ಮಹಾನಗರ ಪಾಲಿಕೆಗಳು ಇಲ್ಲದೆ ಇರುವ ಕೆಳಕಂಡ ಸ್ಥಳೀಯ ಲೆಕ್ಕಪರಿಶೋಧನಾ ವರ್ತುಲಗಳಿಗೆ ಸೃಜಿಸಲಾದ ಹುದ್ದೆಗಳು

1	ಬೆಂಗಳೂರು	1 ಹುದ್ದೆ
2	ಚಿಕ್ಕಬಳ್ಳಾಪುರ	1 ಹುದ್ದೆ
3	ರಾಮನಗರ	1 ಹುದ್ದೆ
4	ಚಿತ್ರದುರ್ಗ	1 ಹುದ್ದೆ
5	ಕೋಲಾರ	1 ಹುದ್ದೆ
6	ವಿಜಯಪುರ	1 ಹುದ್ದೆ
7	ಬಾಗಲಕೋಟೆ	1 ಹುದ್ದೆ
8	ಹಾವೇರಿ	1 ಹುದ್ದೆ
9	ಗದಗ	1 ಹುದ್ದೆ
10	ಕಾರವಾರ	1 ಹುದ್ದೆ
11	ಮಡಿಕೇರಿ	1 ಹುದ್ದೆ
12	ಚಾಮರಾಜನಗರ	1 ಹುದ್ದೆ
13	ಮಂಡ್ಯ	1 ಹುದ್ದೆ
14	ಹಾಸನ	1 ಹುದ್ದೆ

15	ಉಡುಪಿ	1 ಹುದ್ದೆ
16	ಚಿಕ್ಕಮಗಳೂರು	1 ಹುದ್ದೆ
17	ಬೀದರ	1 ಹುದ್ದೆ
18	ಯಾದಗಿರಿ	1 ಹುದ್ದೆ
19	ರಾಯಚೂರು	1 ಹುದ್ದೆ
20	ಕೊಪ್ಪಳ	1 ಹುದ್ದೆ

ಕೋಷ್ಟಕ–4

ಉಪ ನಿರ್ದೇಶಕರು 9 ಹುದ್ದೆಗಳು (ಸೃಜನೆ)

ವೇತನ ಶ್ರೇಣಿ–28100–700–28800–800–33600–900–39000–1050–45300–1200–50100

ಕೇಂದ್ರ ಕಛೇರಿ – 6 ಹುದ್ದೆಗಳು		
1	ಉಪ ನಿರ್ದೇಶಕರು (ಲೆಕ್ಕ ಪರಿಶೋದನೆ)	2 ಹುದ್ದೆ
2	ಜಾಗೃತ ಕೋಶ	4 ಹುದ್ದೆ
ಪ್ರಾಂತೀಯ ಕಛೇರಿಗಳು –4 ಹುದ್ದೆಗಳು		
1	ಬೆಂಗಳೂರು	1 ಹುದ್ದೆ
2	ಮೈಸೂರು	1 ಹುದ್ದೆ
3	ಬೆಳಗಾವಿ	1 ಹುದ್ದೆ
4	ಕಲಬುರಗಿ	1 ಹುದ್ದೆ
ಹೊಂದಾಣಿಕೆ ಮಾಡಬೇಕಾಗಿರುವ ಹುದ್ದೆ		
1	ಬೆಂಗಳೂರು ವಿಶ್ವವಿದ್ಯಾಲಯ	1 ಹುದ್ದೆ

ಎನ್.ಲಕ್ಷ್ಮಣ
ಸರ್ಕಾರದ ಅಧೀನ ಕಾರ್ಯದರ್ಶಿ,
ಆರ್ಥಿಕ ಇಲಾಖೆ (ಆಡಳಿತ ಮತ್ತು ಮುಂಗಡಗಳು)

ಕೋಷ್ಟಕ–5

ಲೆಕ್ಕಪರಿಶೋಧನಾ ಅಧಿಕಾರಿಗಳು 43 ಹುದ್ದೆಗಳು (ಸೃಜನೆ)

ವೇತನ ಶ್ರೇಣಿ–22800–600–24600–700–28800–800–33600–900–39000–1050–43200

1	**ಕೇಂದ್ರ ಕಛೇರಿಯ ಜಾಗೃತಕೋಶ**	**5 ಹುದ್ದೆಗಳು**
ಪ್ರಾಂತೀಯ ಕಛೇರಿಗಳು –38 ಹುದ್ದೆಗಳು		
1	ಬೆಂಗಳೂರು	11 ಹುದ್ದೆಗಳು
2	ಮೈಸೂರು	09 ಹುದ್ದೆಗಳು
3	ಬೆಳಗಾವಿ	10 ಹುದ್ದೆಗಳು
4	ಕಲಬುರಗಿ	08 ಹುದ್ದೆಗಳು

ಕೋಷ್ಟಕ–6

ಸಿಸ್ಟಮ್ ಅನಾಲಿಸ್ಟ್ –1 ಹುದ್ದೆ (ಸೃಜನೆ)

ವೇತನ ಶ್ರೇಣಿ–20000–500–21000–600–24600–700–28800–800–33600–900–36300

1	ಕೇಂದ್ರ ಕಛೇರಿಯ	1 ಹುದ್ದೆ

ಎನ್.ಲಕ್ಷ್ಮಣ
ಸರ್ಕಾರದ ಅಧೀನ ಕಾರ್ಯದರ್ಶಿ,
ಆರ್ಥಿಕ ಇಲಾಖೆ (ಆಡಳಿತ ಮತ್ತು ಮುಂಗಡಗಳು)

ಕೋಷ್ಟಕ–7

ಲೆಕ್ಕ ಅಧೀಕ್ಷಕರು–50 ಹುದ್ದೆಗಳು (ಸೃಜನೆ)

ವೇತನ ಶ್ರೇಣಿ–21600–600–24600–700–28800–800–33600–900–39000–1050–40050

1	**ಕೇಂದ್ರ ಕಛೇರಿಯ ತರಬೇತಿ ಕೋಶ**	**1 ಹುದ್ದೆ**
ಪ್ರಾಂತೀಯ ಕಛೇರಿಗಳು –34 ಹುದ್ದೆಗಳು		
1	ಬೆಂಗಳೂರು	10 ಹುದ್ದೆಗಳು
2	ಮೈಸೂರು	08 ಹುದ್ದೆಗಳು
3	ಬೆಳಗಾವಿ	09 ಹುದ್ದೆಗಳು
4	ಕಲಬುರಗಿ	07 ಹುದ್ದೆಗಳು
ಸ್ಥಳೀಯ ಲೆಕ್ಕಪರಿಶೋಧನಾ ವರ್ತುಲಗಳಿಗೆ 15 ಹುದ್ದೆಗಳು		
1	ಶಿವಮೊಗ್ಗ	1 ಹುದ್ದೆ
2	ತುಮಕೂರು	1 ಹುದ್ದೆ
3	ಹಾಸನ	1 ಹುದ್ದೆ
4	ಮಡಿಕೇರಿ	1 ಹುದ್ದೆ
5	ಮಂಡ್ಯ	1 ಹುದ್ದೆ
6	ಧಾರವಾಡ	1 ಹುದ್ದೆ
7	ಕಾರವಾರ	1 ಹುದ್ದೆ
8	ಬಳ್ಳಾರಿ	1 ಹುದ್ದೆ
9	ರಾಯಚೂರು	1 ಹುದ್ದೆ
10	ದಾವಣಗೆರೆ	1 ಹುದ್ದೆ
11	ರಾಮನಗರ	1 ಹುದ್ದೆ
12	ಚಿಕ್ಕಬಳ್ಳಾಪುರ	1 ಹುದ್ದೆ
13	ಚಾಮರಾಜನಗರ	1 ಹುದ್ದೆ
14	ಉಡುಪಿ	1 ಹುದ್ದೆ
15	ಬಾಗಲಕೋಟೆ	1 ಹುದ್ದೆ

ಎನ್.ಲಕ್ಷ್ಮಣ
ಸರ್ಕಾರದ ಅಧೀನ ಕಾರ್ಯದರ್ಶಿ,
ಆರ್ಥಿಕ ಇಲಾಖೆ (ಆಡಳಿತ ಮತ್ತು ಮುಂಗಡಗಳು)

ಕೋಷ್ಟಕ–8

ಲೆಕ್ಕ ಸಹಾಯಕರು–11 ಹುದ್ದೆಗಳು (ಸೃಜನೆ)

ವೇತನ ಶ್ರೇಣಿ–14550–350–15600–400–17200–450–19000–500–21000–600–24600–700–26700

ಪ್ರಾಂತೀಯ ಕಛೇರಿಗಳು–11 ಹುದ್ದೆಗಳು		
1	ಬೆಂಗಳೂರು	3 ಹುದ್ದೆಗಳು
2	ಮೈಸೂರು	3 ಹುದ್ದೆಗಳು
3	ಬೆಳಗಾವಿ	3 ಹುದ್ದೆಗಳು
4	ಕಲಬುರಗಿ	2 ಹುದ್ದೆಗಳು

ಕೋಷ್ಟಕ–9

ಶೀಘ್ರಲಿಪಿಗಾರರು–16 ಹುದ್ದೆಗಳು (ಸೃಜನೆ)

ವೇತನ ಶ್ರೇಣಿ–14550–350–15600–400–17200–450–19000–500–21000–600–24600–700–26700

1	**ಕೇಂದ್ರ ಕಛೇರಿ ಜಾಗೃತದಳ**	**3 ಹುದ್ದೆಗಳು**
ಪ್ರಾಂತೀಯ ಕಛೇರಿಗಳು–8 ಹುದ್ದೆಗಳು		
1	ಬೆಂಗಳೂರು	2 ಹುದ್ದೆಗಳು
2	ಮೈಸೂರು	2 ಹುದ್ದೆಗಳು
3	ಬೆಳಗಾವಿ	2 ಹುದ್ದೆಗಳು
4	ಕಲಬುರಗಿ	2 ಹುದ್ದೆಗಳು
ಸ್ಥಳೀಯ ಲೆಕ್ಕಪರಿಶೋಧನಾ ವರ್ತುಲಗಳು–5 ಹುದ್ದೆಗಳು		
1	ತುಮಕೂರು	1 ಹುದ್ದೆ
2	ಶಿವಮೊಗ್ಗ	1 ಹುದ್ದೆ
3	ಧಾರವಾಡ	1 ಹುದ್ದೆ
4	ಕಲಬುರಗಿ	1 ಹುದ್ದೆ
5	ಬಳ್ಳಾರಿ	1 ಹುದ್ದೆ

ಎನ್.ಲಕ್ಷ್ಮಣ
ಸರ್ಕಾರದ ಅಧೀನ ಕಾರ್ಯದರ್ಶಿ,
ಆರ್ಥಿಕ ಇಲಾಖೆ (ಆಡಳಿತ ಮತ್ತು ಮುಂಗಡಗಳು)

ಕೋಷ್ಟಕ–10

ಕಿರಿಯ ಲೆಕ್ಕ ಸಹಾಯಕರು –11 ಹುದ್ದೆಗಳು (ಸೃಜನೆ)

ವೇತನ ಶ್ರೇಣಿ–11600–200–12000–250–13000–300–14200–350–15600–400–17200–450–19000–500–21000

ಕೇಂದ್ರ ಕಛೇರಿ 7 ಹುದ್ದೆಗಳು		
1	ಜಾಗೃತ ಕೋಶ	1 ಹುದ್ದೆ
2	ತರಬೇತಿ ಕೋಶ	1 ಹುದ್ದೆ
3	ಉಪ ನಿರ್ದೇಶಕರು ಆಡಳಿತ	1 ಹುದ್ದೆ
4	ಲೆಕ್ಕಪರಿಶೋಧನಾ ಶಾಖೆ	4 ಹುದ್ದೆ

ಪ್ರಾಂತೀಯ ಕಛೇರಿಗಳು –4 ಹುದ್ದೆಗಳು		
1	ಬೆಂಗಳೂರು	1 ಹುದ್ದೆ
2	ಮೈಸೂರು	1 ಹುದ್ದೆ
3	ಬೆಳಗಾವಿ	1 ಹುದ್ದೆ
4	ಕಲಬುರಗಿ	1 ಹುದ್ದೆ

ಕೋಷ್ಟಕ–11

ಬೆರಳಚ್ಚುಗಾರರು/ಡಾಟಾ ಎಂಟ್ರಿ ಆಪರೇಟರ್ - 26 ಹುದ್ದೆಗಳು (ಸೃಜನೆ)

ವೇತನ ಶ್ರೇಣಿ–11600–200–12000–250–13000–300–14200–350–15600–400–17200–450–19000–500–21000

1	**ಕೇಂದ್ರ ಕಛೇರಿ**	**10 ಹುದ್ದೆಗಳು**
ಪ್ರಾಂತೀಯ ಕಛೇರಿಗಳು –16 ಹುದ್ದೆಗಳು		
1	ಬೆಂಗಳೂರು	4 ಹುದ್ದೆಗಳು
2	ಮೈಸೂರು	4 ಹುದ್ದೆಗಳು
3	ಬೆಳಗಾವಿ	4 ಹುದ್ದೆಗಳು
4	ಕಲಬುರಗಿ	4 ಹುದ್ದೆಗಳು

ಎನ್.ಲಕ್ಷ್ಮಣ
ಸರ್ಕಾರದ ಅಧೀನ ಕಾರ್ಯದರ್ಶಿ,
ಆರ್ಥಿಕ ಇಲಾಖೆ (ಆಡಳಿತ ಮತ್ತು ಮುಂಗಡಗಳು)

ಕೋಷ್ಟಕ–12

ವಾಹನ ಚಾಲಕರು -50 ಹುದ್ದೆಗಳು (ಸೃಜನೆ)

ವೇತನ ಶ್ರೇಣಿ–11600–200–12000–250–13000–300–14200–350–15600–400–17200–450–19000–500–21000

1	**ಕೇಂದ್ರ ಕಛೇರಿ**	**09 ಹುದ್ದೆಗಳು**
ಪ್ರಾಂತೀಯ ಕಛೇರಿಗಳು – 12 ಹುದ್ದೆಗಳು		
1	ಬೆಂಗಳೂರು	3 ಹುದ್ದೆಗಳು
2	ಮೈಸೂರು	3 ಹುದ್ದೆಗಳು
3	ಬೆಳಗಾವಿ	3 ಹುದ್ದೆಗಳು
4	ಕಲಬುರಗಿ	3 ಹುದ್ದೆಗಳು
ಸ್ಥಳೀಯ ಲೆಕ್ಕಪರಿಶೋಧನಾ ವರ್ತುಲ – 29 ಹುದ್ದೆಗಳು		
1	29 ಸ್ಥಳೀಯ ಲೆಕ್ಕಪರಿಶೋಧನಾ ವರ್ತುಲಗಳಿಗೆ ತಲಾ	1 ಹುದ್ದೆ

ಕೋಷ್ಟಕ–13

ಗ್ರೂಪ್ 'ಡಿ' - 53 ಹುದ್ದೆಗಳು (ಸೃಜನೆ)

ವೇತನ ಶ್ರೇಣಿ–11000–200–12000–250–13000–300–14200–350–15600–400–17200–450–19000

1	**ಕೇಂದ್ರ ಕಛೇರಿ**	**11 ಹುದ್ದೆಗಳು**
ಪ್ರಾಂತೀಯ ಕಛೇರಿಗಳು – 24 ಹುದ್ದೆ ಗಳು		
1	ಬೆಂಗಳೂರು	6 ಹುದ್ದೆಗಳು
2	ಮೈಸೂರು	6 ಹುದ್ದೆಗಳು
3	ಬೆಳಗಾವಿ	6 ಹುದ್ದೆಗಳು
4	ಕಲಬುರಗಿ	6 ಹುದ್ದೆಗಳು

ಎನ್.ಲಕ್ಷ್ಮಣ
ಸರ್ಕಾರದ ಅಧೀನ ಕಾರ್ಯದರ್ಶಿ,
ಆರ್ಥಿಕ ಇಲಾಖೆ (ಆಡಳಿತ ಮತ್ತು ಮುಂಗಡಗಳು)

ಅನುಬಂಧ–4

ಸರ್ಕಾರದ ಆದೇಶ ಸಂಖ್ಯೆ ಆಇ 331 ರಾಲೆಪ 2014, ದಿನಾಂಕ: 18.05.2015.

ಕರ್ನಾಟಕ ರಾಜ್ಯ ಲೆಕ್ಕಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆಯಲ್ಲಿನ ವಿವಿಧ ಇಲಾಖೆಗಳಲ್ಲಿ/ಸಂಸ್ಥೆಗಳಲ್ಲಿ ವಿವಿಧ ಹುದ್ದೆಗಳಲ್ಲಿ ಗ್ರೂಪ್–ಎ ವೃಂದಗಳ ಪದನಾಮವನ್ನು ಈ ಕೆಳಕಂಡಂತೆ ಮರು ಪದನಾಮೀಕರಿಸಲಾಗಿದೆ.

1) ನಿಯಂತ್ರಕರು, ಕರ್ನಾಟಕ ರಾಜ್ಯ ಲೆಕ್ಕಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆ ಹುದ್ದೆಯ ಪದನಾಮವನ್ನು ನಿರ್ದೇಶಕರು, ಕರ್ನಾಟಕ ರಾಜ್ಯ ಲೆಕ್ಕಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆ ಎಂದು ಮರು ಪದನಾಮೀಕರಿಸಿದೆ.

2) ಲೆಕ್ಕಪರಿಶೋಧನೆ ವಿಭಾಗಕ್ಕೆ ಅನ್ವಯವಾಗುವಂತೆ ಈ ಕೆಳಕಂಡಂತೆ ಹುದ್ದೆಗಳನ್ನು ಮರು ಪದನಾಮೀಕರಿಸಿದೆ.

ಲೆಕ್ಕಪತ್ರ ವಿಭಾಗದಲ್ಲಿನ ಪದನಾಮ	ಲೆಕ್ಕಪರಿಶೋಧನೆ ವಿಭಾಗದಲ್ಲಿನ ಮರು ಪದನಾಮ
1. ಅಪರ ನಿಯಂತ್ರಕರು (Additional Controller)	ಅಪರ ನಿರ್ದೇಶಕರು (Additional Director)
2. ಜಂಟಿ ನಿಯಂತ್ರಕರು (Joint Controller)	ಜಂಟಿ ನಿರ್ದೇಶಕರು (Joint Director)
3. ಉಪ ನಿಯಂತ್ರಕರು (Deputy Controller)	ಹಿರಿಯ ಉಪ ನಿರ್ದೇಶಕರು (Senior Deputy Director)
4. ಸಹಾಯಕ ನಿಯಂತ್ರಕರು (Assistant Controller)	ಉಪ ನಿರ್ದೇಶಕರು (Deputy Director)

ಎನ್.ಲಕ್ಷ್ಮಣ
ಸರ್ಕಾರದ ಅಧೀನ ಕಾರ್ಯದರ್ಶಿ,
ಆರ್ಥಿಕ ಇಲಾಖೆ (ಆಡಳಿತ ಮತ್ತು ಮುಂಗಡಗಳು)

PR-464
SC-200

ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಸಚಿವಾಲಯ

ವಿಷಯ : ಶ್ರೀಮತಿ ಅಪರ್ಣಾ ಪಾವಟೆ, ಸರ್ಕಾರದ ಅಧೀನ ಕಾರ್ಯದರ್ಶಿ, ಕರ್ನಾಟಕ ಸರ್ಕಾರ ಸಚಿವಾಲಯ ನಿಯೋಜನೆ ಮೇಲೆ ತಹಶೀಲ್ದಾರ್, ವಿಜಯಪುರ, ಇವರ ವಿರುದ್ಧ ದಾಖಲಾಗಿರುವ ಲೋಕಾಯುಕ್ತ ಟ್ರ್ಯಾಪ್ ಪ್ರಕರಣ–ಸರ್ಕಾರಿ ಸೇವೆಯಿಂದ ಅಮಾನತುಗೊಳಿಸುವ ಬಗ್ಗೆ.

ಓದಲಾಗಿದೆ :

1. ಅಪರ ಪೊಲೀಸ್ ಮಹಾ ನಿರ್ದೇಶಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ಇವರ ಪತ್ರ ಸಂಖ್ಯೆ:ಲೋಕ್/ಐಎನ್‌ವಿ(ಜಿ)ಎಲ್–02/ಸಿಆರ್–02/2015/ವಿಜಯಪುರ, ದಿನಾಂಕ 7–2–2015.
2. ಸರ್ಕಾರದ ಆದೇಶ ಸಂಖ್ಯೆ ಸಿಆಸುಇ 02 ಸೇಇವಿ 2015 ದಿನಾಂಕ 20–03–2015
3. ಸರ್ಕಾರದ ಪತ್ರ ಸಂಖ್ಯೆ ಸಿಆಸುಇ 02 ಸೇಇವಿ 2015 ದಿನಾಂಕ 24–03–2015
4. ಅಪರ ಪೊಲೀಸ್ ಮಹಾ ನಿರ್ದೇಶಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ಇವರ ಪತ್ರ ಸಂಖ್ಯೆ ಲೋಕ್/ಐಎನ್‌ವಿ(ಜಿ)ಎಲ್–02/ಸಿಆರ್–02/2015/ವಿಜಯಪುರ, ದಿನಾಂಕ 8–6–2015

ಪ್ರಸ್ತಾವನೆ :

ಅಪರ ಪೋಲೀಸ್ ಮಹಾ ನಿರ್ದೇಶಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ಇವರು ಮೇಲೆ ಓದಲಾದ ಕ್ರಮಸಂಖ್ಯೆ–1ರ ಪತ್ರದಲ್ಲಿ ಶ್ರೀ ರಮೇಶ ತಂದೆ ಹಣಮಂತ ಬಿದನೂರ, ಸಾ. ನವರಸಪುರ ಕಾಲನಿ, ವಿಜಯಪುರ ಇವರು ದಿನಾಂಕ 19–1–2015ರಂದು ವಿಜಯಪುರ ಲೋಕಾಯುಕ್ತ ಪೊಲೀಸ್ ಠಾಣೆಗೆ ಹಾಜರಾಗಿ ಶ್ರೀಮತಿ ಅಪರ್ಣಾ ಪಾವಟೆ, ತಹಶೀಲ್ದಾರರು, ವಿಜಯಪುರ (ಆರೋಪಿ–1) ಹಾಗೂ ಶ್ರೀ ಶಂಕರಗೌಡ ತಂದೆ ಬಸವನಗೌಡ ಬಿರಾದಾರ, ಗ್ರಾಮ ಲೆಕ್ಕಾಧಿಕಾರಿ, ಬರಟಗಿ, ವಿಜಯಪುರ (ಆರೋಪಿ–2) ಇವರುಗಳ ವಿರುದ್ಧ ದೂರನ್ನು ನೀಡಿ, ತಮಗೆ ಭೂಮಿ ವಿಕಾಸ ಎಂಬ ಸಂಸ್ಥೆಯ ವತಿಯಿಂದ ನಿವೇಶನಗಳನ್ನು ಅಭಿವೃದ್ಧಿಪಡಿಸಿ ಮಾರಾಟ ಮಾಡುವ ಸಲುವಾಗಿ ವಿಜಯಪುರ ತಾಲ್ಲೂಕಿನ ತೊರವಿ ಗ್ರಾಮದ ರಿ.ಸರ್ವೆ ನಂ. 580/2, 581/1, 581/2ಅ ಹಾಗೂ 581/2ಬ, 569/2ಎ ಜಮೀನುಗಳ ಭೂ ಬದಲಾವಣೆಗಾಗಿ ಭೂಸ್ವಾಧೀನ ಕಾಯಿದೆ ಕಲಂ 1960ರ 79 (ಎ) ಹಾಗೂ (ಬಿ) ಉಲ್ಲಂಘನೆ ಆಗದಿರುವ ಬಗ್ಗೆ ಮತ್ತು ಸದರಿ ಜಮೀನುಗಳ ಪಿ.ಟಿ.ಸಿಎಲ್. ಕಾಯಿದೆ ಉಲ್ಲಂಘನೆ ಆಗದಿರುವ ಬಗ್ಗೆ ಮಾನ್ಯ ತಹಶೀಲ್ದಾರ್, ವಿಜಯಪುರ ಇವರು ಪ್ರಮಾಣ ಪತ್ರ ನೀಡುವ ಸಲುವಾಗಿ ಸುಮಾರು 2–3 ತಿಂಗಳುಗಳಿಂದ ವಿಳಂಬ ಮಾಡುತ್ತಾ, ಗ್ರಾಮ ಲೆಕ್ಕಾಧಿಕಾರಿ ಶ್ರೀ ಶಂಕರಗೌಡ ತಂದೆ ಬಸವನಗೌಡ ಬಿರಾದಾರ

ಇವರ ಮುಖಾಂತರ ಶ್ರೀಮತಿ ಅಪರ್ಣಾ ಪಾವಟೆ, ತಹಶೀಲ್ದಾರರು, ವಿಜಯಪುರ ಇವರು ₹.1,00,000 ಹಣದ ಬೇಡಿಕೆ ಇಟ್ಟಿದ್ದು, ತಮಗೆ ಲಂಚ ನೀಡಲು ಇಷ್ಟವಿಲ್ಲದ ಕಾರಣ ಸದರಿ ಅಧಿಕಾರಿ /ನೌಕರರುಗಳ ವಿರುದ್ಧ ಸೂಕ್ತ ಕಾನೂನು ಕ್ರಮ ಜರುಗಿಸುವಂತೆ ಕೋರಿದ್ದರೆಂದು ತಿಳಿಸಲಾಗಿತ್ತು.

ಮುಂದುವರಿದು, ಫಿರ್ಯಾದುದಾರರಾದ ಶ್ರೀ ರಮೇಶ ತಂದೆ ಹಣಮಂತ ಬಿದನೂರ, ಸಾ. ನವರಸಪುರ ಕಾಲನಿ, ವಿಜಯಪುರ ಇವರು ಸಲ್ಲಿಸಿದ ದೂರನ್ನು ಶ್ರೀ ನಂದೀಶ್ವರ ಕುಂಬಾರ, ಪೋಲೀಸ್ ನಿರೀಕ್ಷಕರು, ಕರ್ನಾಟಕ ಲೋಕಾಯುಕ್ತ, ವಿಜಯಪುರ ಇವರು ವಿಜಯಪುರ ಲೋಕಾಯುಕ್ತ ಪೊಲೀಸ್ ಠಾಣೆಯಲ್ಲಿ ಮೊಕದ್ದಮೆ ಸಂಖ್ಯೆ 2/2015ರಲ್ಲಿ ಕಲಂ 7, ಲಂಚ ನಿರೋಧಕ ಕಾಯಿದೆ 1988ರ ಪ್ರಕಾರ ದಿನಾಂಕ 19–1–2015ರಂದು ಪ್ರಕರಣವನ್ನು ದಾಖಲಿಸಿಕೊಂಡು ತನಿಖೆ ಕೈಗೊಂಡಿದ್ದು, ದಿನಾಂಕ 19–1–2015ರಂದು ಆರೋಪಿ–1 ಶ್ರೀಮತಿ ಅಪರ್ಣಾ ಪಾವಟೆ, ತಹಶೀಲ್ದಾರರು, ವಿಜಯಪುರ ಇವರ ಸೂಚನೆಯ ಮೇರೆಗೆ ಆರೋಪಿ–2 ಶ್ರೀ ಶಂಕರಗೌಡ ತಂದೆ ಬಸವನಗೌಡ ಬಿರಾದಾರ, ಗ್ರಾಮ ಲೆಕ್ಕಾಧಿಕಾರಿ, ಬರಟಗಿ, ವಿಜಯಪುರ ಇವರು ವಿಜಯಪುರ ಜಿಲ್ಲಾಧಿಕಾರಿಗಳ ಕಾರ್ಯಾಲಯದ ಆವರಣದಲ್ಲಿರುವ ಬಸವೇಶ್ವರ ಹೋಟೆಲ್ ಮುಂದೆ ಫಿರ್ಯಾದುದಾರರಿಂದ ಲಂಚದ ಹಣ ₹.1,00,000ಗಳನ್ನು ಒತ್ತಾಯ ಮಾಡಿ ತಮ್ಮ ಬಲಗೈಯಿಂದ ಪಡೆದು, ಎರಡೂ ಕೈಗಳಿಂದ ಎಣಿಸಿ, ತಮ್ಮ ಪ್ಯಾಂಟಿನ ಎಡಜೇಬಿನಲ್ಲಿಟ್ಟುಕೊಂಡು ವಿಜಯಪುರ ಲೋಕಾಯುಕ್ತ ಪೊಲೀಸರ ಕೈಗೆ ಸಿಕ್ಕಿ ಬಿದ್ದಿರುವುದರಿಂದ ಈ ಪ್ರಕರಣದಲ್ಲಿ ಆರೋಪಿ–1 ಶ್ರೀಮತಿ ಅಪರ್ಣಾ ಪಾವಟೆ, ತಹಶೀಲ್ದಾರರು, ವಿಜಯಪುರ ಮತ್ತು ಆರೋಪಿ–2 ಶ್ರೀ ಶಂಕರಗೌಡ ತಂದೆ ಬಸವನಗೌಡ ಬಿರಾದಾರ, ಗ್ರಾಮ ಲೆಕ್ಕಾಧಿಕಾರಿ. ಬರಟಗಿ, ವಿಜಯಪುರ ಇವರ ಮೇಲಿನ ಭ್ರಷ್ಟಾಚಾರದ ಆಪಾದನೆ ಮೇಲ್ನೋಟಕ್ಕೆ ಸಾಬೀತಾಗಿರುವುದಾಗಿ ತಿಳಿಸಿದ್ದು, ಸರ್ಕಾರದ ತಿದ್ದುಪಡಿ ಆದೇಶ ಸಂಖ್ಯೆ ಡಿಪಿಎಆರ್ 4 ಎಸ್‌ಡಿಇ 2000, ದಿನಾಂಕ 15–4–2002 ರ ಹಿನ್ನೆಲೆಯಲ್ಲಿ ಆರೋಪಿ–1 ಶ್ರೀಮತಿ ಅಪರ್ಣಾ ಪಾವಟೆ, ತಹಶೀಲ್ದಾರರು, ವಿಜಯಪುರ ಇವರು ಪ್ರಕರಣದ ಸುಗಮ ತನಿಖೆಗೆ ಅಡ್ಡಿ ಉಂಟು ಮಾಡುವ ಮತ್ತು ತನಿಖೆಯಲ್ಲಿ ಹಸ್ತಕ್ಷೇಪ ಮಾಡುವ ಹಾಗೂ ಸಾಕ್ಷಿ ಪುರಾವೆಗಳನ್ನು ನಾಶಗೊಳಿಸುವ ಸಾಧ್ಯತೆಗಳಿರುವುದರಿಂದ ಇವರನ್ನು ಈ ಕೂಡಲೇ ಅಮಾನತ್ತಿನಲ್ಲಿ ಇಡಬೇಕೆಂದು ಹಾಗೂ ಇವರ ಲೀನ್ ಅನ್ನು ಬೇರೆಡೆಗೆ ವರ್ಗಾಯಿಸಬೇಕೆಂದು ಕೋರಿದ್ದರು.

ಅಪರ ಪೊಲೀಸ್ ಮಹಾ ನಿರ್ದೇಶಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ಅವರು ತಮ್ಮ ಪತ್ರದೊಂದಿಗೆ ಈ ಕೆಳಕಂಡ ದಾಖಲಾತಿಗಳನ್ನು ಲಗತ್ತಿಸಿ ಕಳುಹಿಸಿದ್ದರು.

1) ಫಿರ್ಯಾದುದಾರರೊಂದಿಗೆ ಆರೋಪಿತ ಅಧಿಕಾರಿ/ ನೌಕರರು ನಡೆಸಿರುವ ದೂರವಾಣಿ ಸಂಭಾಷಣೆಯ ವಿವರಗಳನ್ನೊಳಗೊಂಡ ತನಿಖಾಧಿಕಾರಿಯವರ ಮಧ್ಯಕಾಲಿಕ ವರದಿಯ ಪ್ರತಿ.
2) ಪ್ರಥಮ ವರ್ತಮಾನ ವರದಿಯ ಪ್ರತಿ.
3) ವಹಿಸಿಕೊಡುವ ಮತ್ತು ಹಣ ಜಪ್ತಿ ಪಂಚನಾಮೆಯ ಪ್ರತಿ.
4) ಫಿರ್ಯಾದುದಾರರು ದಿನಾಂಕ 19–1–2015 ರಂದು ಕರ್ನಾಟಕ ಲೋಕಾಯುಕ್ತದಲ್ಲಿ ಸಲ್ಲಿಸಿರುವ ದೂರಿನ ಪ್ರತಿ.
5) ಟ್ರ್ಯಾಪ್ ಪಂಚನಾಮೆಯ ಪ್ರತಿ.
6) ಆರೋಪಿ–2 ಶ್ರೀ ಶಂಕರಗೌಡ ತಂದೆ ಬಸವನಗೌಡ ಬಿರಾದಾರ, ಗ್ರಾಮ ಲೆಕ್ಕಾಧಿಕಾರಿ, ಬರಟಗಿ, ವಿಜಯಪುರ ಇವರ ದಿನಾಂಕ 19–1–2015ರ ಹೇಳಿಕೆಯ ಪ್ರತಿ.

ಅಪರ ಪೊಲೀಸ್ ಮಹಾ ನಿರ್ದೇಶಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ಇವರ ಪತ್ರದೊಂದಿಗೆ ಲಗತ್ತಿಸಿ ಕಳುಹಿಸಿರುವ ಮೇಲ್ಕಂಡ ದಾಖಲೆಗಳನ್ನು ಕೂಲಂಕಷವಾಗಿ ಪರಿಶೀಲಿಸಲಾಗಿ ಆರೋಪಿ–1 ಶ್ರೀಮತಿ ಅಪರ್ಣಾ ಪಾವಟೆ, ತಹಶೀಲ್ದಾರರು, ವಿಜಯಪುರ ಇವರು ಫಿರ್ಯಾದುದಾರರೊಂದಿಗೆ ದಿನಾಂಕ 14–1–2015ರಂದು ನಡೆಸಿರುವ ದೂರವಾಣಿ ಸಂಭಾಷಣೆಯಲ್ಲಿ ಹಣವನ್ನು ಆರೋಪಿ–2 ಶ್ರೀ ಶಂಕರಗೌಡ ತಂದೆ ಬಸವನಗೌಡ ಬಿರಾದಾರ, ಗ್ರಾಮ ಲೆಕ್ಕಾಧಿಕಾರಿ, ಬರಟಗಿ, ವಿಜಯಪುರ ಇವರ ಬಳಿ ನೀಡುವಂತೆ ಹಾಗೂ ಪಿ.ಟಿ.ಸಿ.ಎಲ್.ನ ಕಳಸ್ತೀನಿ ಇವತ್ತ ಎಂದು ಹೇಳಿರುವುದು ಕಂಡು ಬಂದಿರುತ್ತದೆ.

ದಿನಾಂಕ 19–1–2015ರಂದು ವಿಜಯಪುರ ಜಿಲ್ಲಾಧಿಕಾರಿಗಳ ಕಾರ್ಯಾಲಯದ ಆವರಣದಲ್ಲಿರುವ ಬಸವೇಶ್ವರ ಹೋಟೆಲ್ ಬಳಿ ಫಿರ್ಯಾದುದಾರರಿಂದ ಆರೋಪಿ–2 ಶ್ರೀ ಶಂಕರಗೌಡ ತಂದೆ ಬಸವನಗೌಡ ಬಿರಾದಾರ, ಗ್ರಾಮ ಲೆಕ್ಕಾಧಿಕಾರಿ, ಬರಟಗಿ, ವಿಜಯಪುರ ಇವರು ಫೆನಾಪ್ತಲೀನ್ ಪೌಡರ್ ಲೇಪಿಸಿರುವ ಲಂಚದ ಹಣ ₹. 1,00,000 ಗಳನ್ನು ತಮ್ಮ ಬಲಗೈಯಿಂದ ಪಡೆದು, ಎರಡೂ ಕೈಗಳಿಂದ ಎಣಿಸಿ, ತಮ್ಮ ಪ್ಯಾಂಟಿನ ಎಡಜೇಬಿನಲ್ಲಿಟ್ಟುಕೊಂಡಿರುವುದು ಇದಕ್ಕೆ ಪಂಚ ನಂ.1 ಇವರು ಸಾಕ್ಷಿಯಾಗಿದ್ದು, ನಂತರ ಆರೋಪಿ–2 ಶ್ರೀ ಶಂಕರಗೌಡ ತಂದೆ ಬಸವನಗೌಡ ಬಿರಾದಾರ, ಇವರ ಬಲಗೈಯನ್ನು ಶುದ್ಧವಾದ ನೀರು ಮತ್ತು ಸೋಡಿಯಂ ಕಾರ್ಬನೇಟ್ ಒಳಗೊಂಡ ದ್ರಾವಣದಲ್ಲಿ ಅದ್ದಿದ್ದ ನಂತರ ಬಲಗೈ ಬೆರಳುಗಳನ್ನು ತೊಳೆದ ಬಟ್ಟಲಿನಲ್ಲಿದ್ದ ದ್ರಾವಣವು ಕೆಂಪು ಗುಲಾಬಿ ಬಣ್ಣಕ್ಕೆ ಪರಿವರ್ತನೆ ಹೊಂದಿರುವುದು ಕಂಡು ಬಂದಿರುತ್ತದೆ.

ಆರೋಪಿ–2 ಶ್ರೀ ಶಂಕರಗೌಡ ತಂದೆ ಬಸವನಗೌಡ ಬಿರಾದಾರ, ಗ್ರಾಮ ಲೆಕ್ಕಾಧಿಕಾರಿ, ಬರಟಗಿ, ವಿಜಯಪುರ ಇವರ ಪ್ಯಾಂಟಿನ ಎಡಕಿಸೆಯಿಂದ ₹.1,00,000ಗಳ ಲಂಚದ ಹಣವನ್ನು ತೆಗೆದು ಸದರಿ ನೋಟುಗಳನ್ನು ಕರ್ನಾಟಕ ಲೋಕಾಯುಕ್ತ ಸಂಸ್ಥೆಯು ಪರಿಶೀಲಿಸಿದ ಸಂದರ್ಭದಲ್ಲಿ ಸದರಿ ನೋಟುಗಳು ಈ ಹಿಂದೆ ಪ್ರಾಯೋಗಿಕ ಪಂಚನಾಮೆಯಲ್ಲಿ ನಮೂದಿಸಿದ್ದ ನೋಟುಗಳೇ ಆಗಿರುವುದು ಕಂಡು ಬಂದಿರುತ್ತದೆ.

ಆರೋಪಿ–2 ಶ್ರೀ ಶಂಕರಗೌಡ ತಂದೆ ಬಸವನಗೌಡ ಬಿರಾದಾರ, ಗ್ರಾಮ ಲೆಕ್ಕಾಧಿಕಾರಿ, ಬರಟಗಿ, ವಿಜಯಪುರ ಇವರು ಫಿರ್ಯಾದಿಯಿಂದ ಪಡೆದ ಲಂಚದ ಹಣವನ್ನು ಪ್ಯಾಂಟಿನ ಎಡ ಕಿಸೆಯಲ್ಲಿ ಇಟ್ಟುಕೊಂಡಿದ್ದರಿಂದ ಆರೋಪಿಯು ಲಂಚದ ಹಣವನ್ನು ಇಟ್ಟುಕೊಂಡಿದ್ದ ಪ್ಯಾಂಟಿನ ಎಡಕಿಸೆಯನ್ನು ಹೊರಗೆ ಮಾಡಿ ಅದನ್ನು ಶುದ್ಧವಾದ ನೀರು ಮತ್ತು ಸೋಡಿಯಂ ಕಾರ್ಬನೇಟ್ ಒಳಗೊಂಡ ದ್ರಾವಣದಲ್ಲಿ ತೊಳೆದ ನಂತರ ದ್ರಾವಣವು ಕೆಂಪು ಗುಲಾಬಿ ಬಣ್ಣಕ್ಕೆ ಪರಿವರ್ತನೆ ಹೊಂದಿರುವುದು ಕಂಡು ಬಂದಿರುತ್ತದೆ.

ಆರೋಪಿ–2 ಶ್ರೀ ಶಂಕರಗೌಡ ತಂದೆ ಬಸವನಗೌಡ ಬಿರಾದಾರ, ಗ್ರಾಮ ಲೆಕ್ಕಾಧಿಕಾರಿ, ಬರಟಗಿ, ವಿಜಯಪುರ ಇವರು ಫಿರ್ಯಾದಿಯಿಂದ ಕೇಳಿ ಪಡೆದಿರುವ ಲಂಚದ ಹಣದ ಬಗ್ಗೆ ಸಲ್ಲಿಸಿರುವ ತಮ್ಮ ಹೇಳಿಕೆಯಲ್ಲಿ ವಿಜಯಪುರ ತಾಲ್ಲೂಕಿನ ತಹಶೀಲ್ದಾರರಾದ, ಶ್ರೀಮತಿ ಅಪರ್ಣಾ ಪಾವಟೆ, ಇವರು ತಮಗೆ ದೂರವಾಣಿ ಮಾಡಿ ಶ್ರೀ ರಮೇಶ ಬಿದನೂರ ಇವರು ತಮ್ಮ ಕೈಯಲ್ಲಿ ₹.1,00,000 ಹಣ ಕೊಡುತ್ತಾರೆ. ಅದನ್ನು ಅವರಿಗೆ ತಲುಪಿಸುವಂತೆ

ತಿಳಿಸಿದ್ದರಿಂದ ದಿನಾಂಕ 19–1–2015ರ ಮಧ್ಯಾಹ್ನ ಶ್ರೀ ರಮೇಶ ಬಿದನೂರ ಇವರು ₹.1,00,000 ಹಣ ಕೊಟ್ಟಿದ್ದು, ಯಾವ ಕೆಲಸಕ್ಕೆ ಅಂತಾ ತಮಗೆ ಗೊತ್ತಿಲ್ಲವೆಂದು ಹೇಳಿಕೆ ನೀಡಿರುವುದು ಕಂಡು ಬಂದಿರುತ್ತದೆ.

ಆರೋಪಿ–2 ಶ್ರೀ ಶಂಕರಗೌಡ ತಂದೆ ಬಸವನಗೌಡ ಬಿರಾದಾರ, ಇವರ ಹೇಳಿಕೆಯ ಬಗ್ಗೆ ಫಿರ್ಯಾದಿಯು ಆರೋಪಿ–2 ಶ್ರೀ ಶಂಕರಗೌಡ ತಂದೆ ಬಸವನಗೌಡ ಬಿರಾದಾರ, ಇವರು ಬರೆದುಕೊಟ್ಟ ಹೇಳಿಕೆ ನಿಜವಾಗಿದ್ದು, ಭೂ ಬದಲಾವಣೆಗಾಗಿ ಭೂಸ್ವಾಧೀನ ಕಾಯಿದೆ ಉಲ್ಲಂಘನೆ ಆಗಿಲ್ಲದಿರುವ ಬಗ್ಗೆ ಪ್ರಮಾಣ ಪತ್ರವನ್ನು ನೀಡಲು ತಹಶೀಲ್ದಾರ್, ಶ್ರೀಮತಿ ಅಪರ್ಣಾ ಪಾವಟೆ ಇವರು ತಮ್ಮಿಂದ ₹. 1,00,000 ಹಣದ ಬೇಡಿಕೆ ಇಟ್ಟು ಸದರಿ ಲಂಚದ ಹಣವನ್ನು ಆರೋಪಿ–2 ಶ್ರೀ ಶಂಕರಗೌಡ ತಂದೆ ಬಸವನಗೌಡ ಬಿರಾದಾರ, ಗ್ರಾಮ ಲೆಕ್ಕಾಧಿಕಾರಿ, ಬರಟಗಿ, ವಿಜಯಪುರ ಇವರ ಬಳಿ ನೀಡುವಂತೆ ಹೇಳಿರುವುದು ನಿಜವಾಗಿರುತ್ತದೆ ಎಂದು ಸಮುಜಾಯಿಷಿ ನೀಡಿರುವುದು ತನಿಖಾಧಿಕಾರಿಯವರ ಮಧ್ಯಕಾಲಿಕ ವರದಿಯಲ್ಲಿ ಕಂಡು ಬಂದಿರುತ್ತದೆ.

ಶ್ರೀಮತಿ ಅಪರ್ಣಾ ಪಾವಟೆ ಇವರು ₹.1,00,000ಗಳ ಹಣದ ಬಗ್ಗೆ ಸಲ್ಲಿಸಿರುವ ತಮ್ಮ ಹೇಳಿಕೆಯಲ್ಲಿ ತಮ್ಮ ಮೇಲೆ ಸುಳ್ಳು ಲಂಚದ ಆಪಾದನೆ ಮಾಡಲಾಗಿದ್ದು, ತಾವು ತೊರವಿ ಗ್ರಾಮಕ್ಕೆ ಸಂಬಂಧಿಸಿದಂತೆ ಯಾವುದೇ ಲಂಚದ ಹಣ ಕೇಳಿರುವುದಿಲ್ಲ ಹಾಗೂ ಪಡೆದಿರುವುದಿಲ್ಲವೆಂದು ಹೇಳಿಕೆ ನೀಡಿರುವುದು ತನಿಖಾಧಿಕಾರಿಯವರ ಮಧ್ಯಕಾಲಿಕ ವರದಿಯಲ್ಲಿ ಕಂಡು ಬಂದಿರುತ್ತದೆ.

ಆರೋಪಿ–1 ಶ್ರೀಮತಿ ಅಪರ್ಣಾ ಪಾವಟೆ, ತಹಶೀಲ್ದಾರರು, ವಿಜಯಪುರ ಇವರ ಹೇಳಿಕೆಯ ಬಗ್ಗೆ ಫಿರ್ಯಾದುದಾರರಾದ ಶ್ರೀ ರಮೇಶ ತಂದೆ ಹಣಮಂತ ಬಿದನೂರ, ಸಾ. ನವರಸಪುರ ಕಾಲನಿ, ವಿಜಯಪುರ ಇವರು ಶ್ರೀಮತಿ ಅಪರ್ಣಾ ಪಾವಟೆ, ತಹಶೀಲ್ದಾರರು ಇವರು ತಮ್ಮ ಕೆಲಸದ ವಿಷಯದಲ್ಲಿ ₹. 1,00,000 ಗಳ ಲಂಚದ ಹಣವನ್ನು ಆರೋಪಿ–2 ಶ್ರೀ ಶಂಕರಗೌಡ ತಂದೆ ಬಸವನಗೌಡ ಬಿರಾದಾರ, ಗ್ರಾಮ ಲೆಕ್ಕಾಧಿಕಾರಿ, ಬರಟಗಿ, ವಿಜಯಪುರ ಇವರ ಮುಖಾಂತರ ಬೇಡಿಕೆ ಇಟ್ಟಿರುವುದು ನಿಜವಾಗಿದ್ದು ಶ್ರೀಮತಿ ಅಪರ್ಣಾ ಪಾವಟೆ, ತಹಶೀಲ್ದಾರರು ಇವರ ಹೇಳಿಕೆ ಸುಳ್ಳು ಎಂದು ತಿಳಿಸಿರುವುದು ಹಾಗೂ ಈ ಬಗ್ಗೆ ಪಂಚರ ಸಾಕ್ಷಿಗಳು ಆರೋಪಿ–1 ಶ್ರೀಮತಿ ಅಪರ್ಣಾ ಪಾವಟೆ, ತಹಶೀಲ್ದಾರರು, ವಿಜಯಪುರ ಇವರು ಬರೆದುಕೊಟ್ಟಿರುವ ಸಮುಜಾಯಿಷಿಯು ಸತ್ಯಕ್ಕೆ ದೂರವಾಗಿರುತ್ತದೆ ಎಂದು ತಿಳಿಸಿರುವುದು ತನಿಖಾಧಿಕಾರಿಯವರ ಮಧ್ಯಕಾಲಿಕ ವರದಿಯಲ್ಲಿ ಕಂಡು ಬಂದಿರುತ್ತದೆ.

ದಿನಾಂಕ 19–1–2015 ರಂದು ರಾತ್ರಿ 20–45 ಗಂಟೆಗೆ ಆರೋಪಿ–1 ಶ್ರೀಮತಿ ಅಪರ್ಣಾ ಪಾವಟೆ, ತಹಶೀಲ್ದಾರರು ಮತ್ತು ಆರೋಪಿ–2 ಶ್ರೀ ಶಂಕರಗೌಡ ತಂದೆ ಬಸವನಗೌಡ ಬಿರಾದಾರ, ಗ್ರಾಮ ಲೆಕ್ಕಾಧಿಕಾರಿ ಇವರನ್ನು ದಸ್ತಗಿರಿ ಮಾಡಿ ಗೌರವಾನ್ವಿತ ವಿಶೇಷ ನ್ಯಾಯಾಲಯದಲ್ಲಿ ಹಾಜರುಪಡಿಸಿದ್ದು, ಗೌರವಾನ್ವಿತ ವಿಶೇಷ ನ್ಯಾಯಾಲಯವು ಆರೋಪಿತರನ್ನು ನ್ಯಾಯಾಂಗ ಬಂಧನದಲ್ಲಿಡಲು ಆದೇಶಿಸಿರುವುದು ತನಿಖಾಧಿಕಾರಿಯವರ ಮಧ್ಯಕಾಲಿಕ ವರದಿಯಲ್ಲಿ ಕಂಡು ಬಂದಿದ್ದು, ಈ ಅಧಿಕಾರಿಯವರು ಎಷ್ಟು ಗಂಟೆಗಳ ಕಾಲ ನ್ಯಾಯಾಂಗ ಬಂಧನದಲ್ಲಿದ್ದರು ಎಂಬ ಬಗ್ಗೆ ಯಾವುದೇ ಮಾಹಿತಿಯು ತನಿಖಾಧಿಕಾರಿಯವರ ಮಧ್ಯಕಾಲಿಕ ವರದಿಯಲ್ಲಿ ಲಭ್ಯವಿಲ್ಲದುದರಿಂದ ಅಪರ ಪೊಲೀಸ್ ಮಹಾನಿರ್ದೇಶಕರು, ಕರ್ನಾಟಕ ಲೋಕಾಯುಕ್ತ ಇವರ ದಿನಾಂಕ 7–2–2015ರ ಪತ್ರದೊಂದಿಗೆ ಸ್ವೀಕೃತವಾಗಿರುವ ತನಿಖಾಧಿಕಾರಿಯವರ ಮಧ್ಯಕಾಲಿಕ ವರದಿ, ಪ್ರಥಮ ವರ್ತಮಾನ ವರದಿ, ಫಿರ್ಯಾದಿದಾರರೊಂದಿಗೆ ಆರೋಪಿ–1 ಶ್ರೀಮತಿ ಅಪರ್ಣಾ ಪಾವಟೆ, ತಹಶೀಲ್ದಾರ್ ಮತ್ತು ಆರೋಪಿ–2 ಶ್ರೀ ಶಂಕರಗೌಡ ತಂದೆ ಬಸವನಗೌಡ ಬಿರಾದಾರ, ಗ್ರಾಮ ಲೆಕ್ಕಿಗ ಇವರುಗಳು ನಡೆಸಿರುವ ದೂರವಾಣಿ ಸಂಭಾಷಣೆಯ ವಿವರಗಳನ್ನು ಹಾಗೂ ಆರೋಪಿ–2 ಶ್ರೀ ಶಂಕರಗೌಡ ತಂದೆ ಬಸವನಗೌಡ ಬಿರಾದಾರ, ಗ್ರಾಮ ಲೆಕ್ಕಿಗ ಇವರು ನೀಡಿರುವ ಸ್ವರಕ್ಷಣಾ ಹೇಳಿಕೆ ಹಾಗೂ ಪಂಚರ ಸಾಕ್ಷಿಗಳ ಹೇಳಿಕೆ ಎಲ್ಲವನ್ನೂ ಪರಿಶೀಲಿಸಿ ಆರೋಪಿ–1 ಶ್ರೀಮತಿ ಅಪರ್ಣಾ ಪಾವಟೆ, ತಹಶೀಲ್ದಾರ್ ಇವರು ಫಿರ್ಯಾದುದಾರರಿಂದ ಭೂ ಬದಲಾವಣೆಗಾಗಿ ಭೂಸ್ವಾಧೀನ ಕಾಯಿದೆ ಉಲ್ಲಂಘನೆ ಆಗದಿರುವ ಬಗ್ಗೆ ಪ್ರಮಾಣ ಪತ್ರವನ್ನು ನೀಡಲು ಹಣದ ಬೇಡಿಕೆ ಇಟ್ಟು ಸದರಿ ಲಂಚದ ಹಣವನ್ನು ಆರೋಪಿ–2 ಶ್ರೀ ಶಂಕರಗೌಡ ತಂದೆ ಬಸವನಗೌಡ ಬಿರಾದಾರ, ಗ್ರಾಮ ಲೆಕ್ಕಾಧಿಕಾರಿ, ಬರಟಗಿ, ವಿಜಯಪುರ ಇವರ ಬಳಿ ನೀಡುವಂತೆ ಹೇಳಿರುವುದಕ್ಕೆ ಮೇಲ್ನೋಟದ ಸಾಕ್ಷ್ಯಗಳು ಇರುವುದು ಕಂಡು ಬಂದಿದ್ದರಿಂದ ಪ್ರಕರಣದ ಸುಗಮ ತನಿಖೆಯ ಹಿತದೃಷ್ಟಿಯಿಂದ, ಮೇಲೆ ಓದಲಾದ ಕ್ರಮ ಸಂಖ್ಯೆ 2ರ ಸರ್ಕಾರದ ಆದೇಶದನ್ವಯ ಶ್ರೀಮತಿ ಅಪರ್ಣಾ ಪಾವಟೆ, ಸರ್ಕಾರದ ಅಧೀನ ಕಾರ್ಯದರ್ಶಿ, ನಿಯೋಜನೆ ಮೇಲೆ ತಹಶೀಲ್ದಾರ್, ವಿಜಯಪುರ ಇವರ ವಿರುದ್ಧದ ಶಿಸ್ತು ಕ್ರಮವನ್ನು ಬಾಕಿ ಇರಿಸಿ ತಕ್ಷಣದಿಂದ ಜಾರಿಗೆ ಬರುವಂತೆ ಸರ್ಕಾರಿ ಸೇವೆಯಿಂದ ಅಮಾನತ್ತುಗೊಳಿಸಿ ಆದೇಶಿಸಲಾಗಿತ್ತು.

ಮೇಲೆ ಓದಲಾದ ಕ್ರಮ ಸಂಖ್ಯೆ 3ರ ಪತ್ರದಲ್ಲಿ ಶ್ರೀಮತಿ ಅಪರ್ಣಾ ಪಾವಟೆ ಇವರ ವಿರುದ್ಧದ ಲೋಕಾಯುಕ್ತ ಟ್ರ್ಯಾಪ್ ಪ್ರಕರಣಕ್ಕೆ ಸಂಬಂಧಿಸಿದಂತೆ ಸದರಿ ಅಧಿಕಾರಿಯವರು ಎಷ್ಟು ಗಂಟೆಗಳ ಕಾಲ ನ್ಯಾಯಾಂಗ ಬಂಧನದಲ್ಲಿದ್ದರು ಎಂಬ ಬಗ್ಗೆ ಮಾಹಿತಿಯನ್ನು ಒದಗಿಸುವಂತೆ ಅಪರ ಪೊಲೀಸ್ ಮಹಾ ನಿರ್ದೇಶಕರು ಕರ್ನಾಟಕ ಲೋಕಾಯುಕ್ತ ಇವರನ್ನು ಕೋರಲಾಗಿತ್ತು.

ಅದರಂತೆ ಮೇಲೆ ಓದಲಾದ ಕ್ರಮ ಸಂಖ್ಯೆ 4ರಲ್ಲಿ ಅಪರ ಪೋಲೀಸ್ ಮಹಾನಿರ್ದೇಶಕರು, ಕರ್ನಾಟಕ ಲೋಕಾಯಕ್ತ, ಬೆಂಗಳೂರು ಇವರು ಆರಕ್ಷಕ ನಿರೀಕ್ಷಕರು, ಕರ್ನಾಟಕ ಲೋಕಾಯುಕ್ತ ಬಿಜಾಪುರ ಇವರು ದಿನಾಂಕ 6–3–2015 ರಂದು ಬರೆದಿರುವ ಪತ್ರದ ಪ್ರತಿಯನ್ನು ಲಗತ್ತಿಸಿದ್ದು, ಸದರಿ ಪತ್ರದಲ್ಲಿ ಶ್ರೀಮತಿ ಅಪರ್ಣಾ ಅಡಿವೆಪ್ಪ ಪಾವಟೆ ಇವರನ್ನು ದಿನಾಂಕ 19–01–2015 ರಂದು ದಸ್ತಗಿರಿ ಮಾಡಿ ಮಾನ್ಯ ನ್ಯಾಯಾಲಯಕ್ಕೆ ಹಾಜರು ಪಡಿಸಿದ್ದು, ಸದರಿ ಅಧಿಕಾರಿಯವರು ದಿನಾಂಕ 19–01–2015 ರಿಂದ 27–01–2015 ರವರೆಗೆ ನ್ಯಾಯಾಂಗ ಬಂಧನದಲ್ಲಿದ್ದು, ದಿನಾಂಕ 27–01–2015 ರಂದು ನ್ಯಾಯಾಲಯದಿಂದ ಜಾಮೀನನ್ನು ಪಡೆದಿರುತ್ತಾರೆ ಎಂದು ತಿಳಿಸಲಾಗಿರುತ್ತದೆ.

ಈ ಪ್ರಕರಣದಲ್ಲಿ ಶ್ರೀಮತಿ ಅಪರ್ಣಾ ಪಾವಟೆ ಸರ್ಕಾರದ ಅಧೀನ ಕಾರ್ಯದರ್ಶಿ ಇವರು ದಿನಾಂಕ 19–01–2015 ರಿಂದ 27–01–2015 ರವರೆಗೆ ನ್ಯಾಯಾಂಗ ಬಂಧನದಲ್ಲಿದ್ದು, ಈ ಅವಧಿಯು 48 ಗಂಟೆಗಳನ್ನು ಮೀರಿರುವುದರಿಂದ ಶ್ರೀಮತಿ ಅಪರ್ಣಾ ಪಾವಟೆ ಇವರ ವಿರುದ್ಧದ ಲೋಕಾಯುಕ್ತ ಟ್ರ್ಯಾಪ್ ಪ್ರಕರಣಕ್ಕೆ ಸಂಬಂಧಿಸಿದಂತೆ ಇವರ ವಿರುದ್ಧದ ಶಿಸ್ತು ಕ್ರಮವನ್ನು ಬಾಕಿಯಿರಿಸಿ, ಇವರನ್ನು ನ್ಯಾಯಾಂಗ ಬಂಧನಕ್ಕೆ ಒಳಪಡಿಸಲಾದ ದಿನಾಂಕ 19–01–2015 ರಿಂದಲೇ ಪೂರ್ವಾನ್ವಯವಾಗಿ ಜಾರಿಗೆ ಬರುವಂತೆ ಕ.ನಾ.ಸೇ (ಸಿ.ಸಿ.ಎ) 1957ರ ನಿಯಮಾವಳಿಗಳ ನಿಯಮ 10(2)(ಎ) ರನ್ವಯ ಅಮಾನತ್ತಿನಲ್ಲಿರಿಸಲು ನಿರ್ಧರಿಸಿದ ಸರ್ಕಾರವು ಈ ಕೆಳಕಂಡಂತೆ ಆದೇಶಿಸುತ್ತದೆ.

ಸರ್ಕಾರದ ಆದೇಶ ಸಂಖ್ಯೆ : ಸಿಆಸುಇ 2 ಸೇಇವಿ 2015 ಬೆಂಗಳೂರು, ದಿನಾಂಕ 2ನೇ ಜುಲೈ 2015

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಶ್ರೀಮತಿ ಅಪರ್ಣಾ ಪಾವಟೆ, ಸರ್ಕಾರದ ಅಧೀನ ಕಾರ್ಯದರ್ಶಿ, ಇವರು ನಿಯೋಜನೆ ಮೇಲೆ ತಹಶೀಲ್ದಾರರು, ವಿಜಯಪುರ ಹುದ್ದೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದ ಅವಧಿಯಲ್ಲಿ ಸದರಿ ಅಧಿಕಾರಿಯವರ ವಿರುದ್ಧ ದಾಖಲಾಗಿರುವ ಲೋಕಾಯುಕ್ತ ಟ್ರ್ಯಾಪ್ ಪ್ರಕರಣ ಮೊಕದ್ದಮೆ ಸಂಖ್ಯೆ 2/2015 ಕ್ಕೆ ಸಂಬಂಧಿಸಿದಂತೆ, ಸದರಿ ಅಧಿಕಾರಿಯವರು ದಿನಾಂಕ 19-01-2015 ರಿಂದ 27-01-2015ರವರೆಗೆ ನ್ಯಾಯಾಂಗ ಬಂಧನದಲ್ಲಿದ್ದು, ಈ ಅವಧಿಯು 48 ಗಂಟೆಗಳನ್ನು ಮೀರಿರುವುದರಿಂದ ಇವರ ವಿರುದ್ಧದ ಶಿಸ್ತು ಕ್ರಮವನ್ನು ಬಾಕಿಯಿರಿಸಿ, ಕ.ನಾ.ಸೇ (ಸಿ.ಸಿ.ಎ) ನಿಯಮಾವಳಿಗಳು 1957ರ ನಿಯಮ 10(2)(ಎ) ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಇವರನ್ನು ನ್ಯಾಯಾಂಗ ಬಂಧನಕ್ಕೆ ಒಳಪಡಿಸಲಾದ ದಿನಾಂಕ 19-01-2015 ರಿಂದಲೇ ಪೂರ್ವಾನ್ವಯವಾಗಿ ಜಾರಿಗೆ ಬರುವಂತೆ ಸರ್ಕಾರಿ ಸೇವೆಯಿಂದ ಅಮಾನತ್ತುಗೊಳಿಸಿ ಆದೇಶಿಸಿದೆ.

ಅಮಾನತ್ತಿನ ಅವಧಿಯಲ್ಲಿ ಶ್ರೀಮತಿ ಅಪರ್ಣಾ ಪಾವಟೆ, ಸರ್ಕಾರದ ಅಧೀನ ಕಾರ್ಯದರ್ಶಿ, ಇವರು ಕೆ.ಸಿ.ಎಸ್.ಆರ್. ನಿಯಮ 98ರ ಅನ್ವಯ ಜೀವನಾಧಾರ ಭತ್ಯೆಯನ್ನು ಪಡೆಯಲು ಅರ್ಹರಿರುತ್ತಾರೆ ಹಾಗೂ ಅಮಾನತ್ತಿನ ಅವಧಿಯಲ್ಲಿ ಸಕ್ಷಮ ಪ್ರಾಧಿಕಾರದ ಲಿಖಿತ ಅನುಮತಿಯಿಲ್ಲದೆ ಕೇಂದ್ರ ಸ್ಥಾನವನ್ನು ಬಿಡತಕ್ಕದ್ದಲ್ಲ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

P.R. 483

ಚಂದ್ರಶೇಖರ

ಸರ್ಕಾರದ ಅಧೀನ ಕಾರ್ಯದರ್ಶಿ,

ಸಿ.ಆ.ಸು. ಇಲಾಖೆ (ಸೇವೆಗಳು-6)

ಆರ್ಥಿಕ ಸಚಿವಾಲಯ

ವಿಷಯ : ಹಾಸನ ಜಿಲ್ಲೆಯ ಶ್ರವಣಬೆಳಗೊಳದಲ್ಲಿ ನಡೆದ ಅಖಿಲ ಭಾರತ 81ನೇ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಹಾಸನ ಜಿಲ್ಲೆಯ ರಾಜ್ಯ ಸರ್ಕಾರಿ ನೌಕರರ ಒಂದು ದಿನದ ವೇತನವನ್ನು ವಂತಿಗೆಯಾಗಿ ಕಟಾವು ಮಾಡಿರುವ ಮೊತ್ತದ ಹಂಚಿಕೆ ಕುರಿತು ಆದೇಶ.

ಓದಲಾಗಿದೆ :

1. ಅಧ್ಯಕ್ಷರು, ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘ, ಬೆಂಗಳೂರು ಇವರ ಪತ್ರ ಸಂಖ್ಯೆ: 4080/2013-14 ದಿನಾಂಕ 23-12-2014
2. ಹಾಸನ ಜಿಲ್ಲೆಯ ಜಿಲ್ಲಾಧಿಕಾರಿಯವರ ಪತ್ರ ಸಂಖ್ಯೆ: ಮುನಿಸಿ(3)ಸಿ.ಆರ್./142/2014-15 ದಿನಾಂಕ:04-01-2015
3. ಸ.ಆ. ಸಂಖ್ಯೆ: ಆಇ 28 ಎಸ್‌ಆರ್‌ಪಿ 2014, ದಿನಾಂಕ 16-01-2015.
4. ಹಾಸನ ಜಿಲ್ಲೆಯ ಜಿಲ್ಲಾಧಿಕಾರಿಯವರ ಪತ್ರ ಸಂಖ್ಯೆ:ಮುನಿಸಿ(3)/ಸಿ.ಆರ್./142/2014-15 ದಿನಾಂಕ: 25-06-2015

ಪ್ರಸ್ತಾವನೆ :

ಮೇಲೆ (1)ರಲ್ಲಿ ಓದಲಾದ ದಿನಾಂಕ 23-12-2014ರ ಮನವಿ ಪತ್ರದಲ್ಲಿ ಅಧ್ಯಕ್ಷರು, ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘ, ಬೆಂಗಳೂರು ಇವರ ಕೋರಿಕೆಯನ್ನು ಪರಿಶೀಲಿಸಿದ ಸರ್ಕಾರವು ಮೇಲೆ (3)ರಲ್ಲಿ ಓದಲಾದ ದಿನಾಂಕ 16-01-2015ರ ಸರ್ಕಾರಿ ಆದೇಶದಲ್ಲಿ 2015ನೇ ಫೆಬ್ರವರಿ ಮಾಹೆಯ ದಿನಾಂಕ 1,2 ಹಾಗೂ 3 ರಂದು ಹಾಸನ ಜಿಲ್ಲೆಯ ಶ್ರವಣಬೆಳಗೊಳದಲ್ಲಿ ನಡೆದ "81ನೇ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಹಾಸನ ಜಿಲ್ಲಾ ರಾಜ್ಯ ಸರ್ಕಾರಿ ನೌಕರರ ಜನವರಿ 2015ರ ತಿಂಗಳ ವೇತನದಲ್ಲಿ ಒಂದು ದಿನದ ವೇತನವನ್ನು ವಂತಿಗೆ ರೂಪದಲ್ಲಿ ಕಟಾಯಿಸಿ ಅದರಿಂದ ಸಂಗ್ರಹವಾದ ಒಟ್ಟು ಮೊತ್ತದ ಶೇ. 50ರಷ್ಟನ್ನು ಅಖಿಲ ಭಾರತ 81ನೇ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಬಳಸಿಕೊಳ್ಳಲು ಮಂಜೂರಾತಿ ನೀಡಿರುತ್ತದೆ ಹಾಗೂ ಉಳಿದ ಶೇ 50ರಷ್ಟು ಮೊತ್ತವನ್ನು ಯಾವ ಉದ್ದೇಶಕ್ಕೆ ಬಳಸಿಕೊಳ್ಳಬೇಕು ಎಂಬ ಬಗ್ಗೆ ಪ್ರತ್ಯೇಕ ಆದೇಶ ಹೊರಡಿಸಲಾಗುವುದು ಎಂದು ಆದೇಶಿಸಿರುತ್ತದೆ. ಮೇಲೆ (4) ರಲ್ಲಿ ಓದಲಾದ ಹಾಸನ ಜಿಲ್ಲಾಧಿಕಾರಿಯವರ ಪತ್ರದಲ್ಲಿ ಅಧ್ಯಕ್ಷರು, ಸರ್ಕಾರಿ ನೌಕರರ ಸಂಘ ಮತ್ತು ಅಧ್ಯಕ್ಷರು, ಕನ್ನಡ ಸಾಹಿತ್ಯ ಪರಿಷತ್, ಹಾಸನ ಇವರೊಂದಿಗೆ ಚರ್ಚಿಸಿ ಹಾಸನ ಜಿಲ್ಲಾ ಸರ್ಕಾರಿ ನೌಕರರ ಜನವರಿ 2015ರ ತಿಂಗಳ ವೇತನದಲ್ಲಿ ಕಟಾಯಿಸಿದ ಒಂದು ದಿನದ ವೇತನದ ಮೊತ್ತದಲ್ಲಿ ಶೇ.70 ರಷ್ಟನ್ನು ಸಾಹಿತ್ಯ ಸಮ್ಮೇಳನಕ್ಕೆ ಹಾಗೂ ಉಳಿದ ಶೇ.30ರಷ್ಟನ್ನು ಹಾಸನ ಜಿಲ್ಲಾ ಸರ್ಕಾರಿ ನೌಕರರ ಸಂಘಕ್ಕೆ ರಾಜ್ಯ ಸರ್ಕಾರಿ ನೌಕರರ ಸಮುದಾಯ ಭವನ ನಿರ್ಮಾಣಕ್ಕೆ ನೀಡಲು ತೀರ್ಮಾನಿಸಿದ್ದು, ಅದರಂತೆ ಸರ್ಕಾರಿ ಆದೇಶವನ್ನು ಹೊರಡಿಸುವಂತೆ ಕೋರಿರುತ್ತಾರೆ. ಅವರ ಕೋರಿಕೆಯನ್ನು ಪರಿಶೀಲಿಸಿದ ಸರ್ಕಾರವು, ಈ ಕೆಳಕಂಡಂತೆ ಮಾರ್ಪಾಡು ಆದೇಶ ಹೊರಡಿಸಿರುತ್ತದೆ.

ಸರ್ಕಾರದ ಆದೇಶ ಸಂಖ್ಯೆ : ಆಇ 28 ಎಸ್‌ಆರ್‌ಪಿ 2014, ಬೆಂಗಳೂರು, ದಿನಾಂಕ : 21ನೇ ಜುಲೈ 2015

1) ದಿನಾಂಕ 16-01-2015ರ ಸರ್ಕಾರಿ ಆದೇಶ ಸಂಖ್ಯೆ: ಆಇ 28 ಎಸ್‌ಆರ್‌ಪಿ 2014ನ್ನು ಭಾಗಶಃ ಮಾರ್ಪಡಿಸಿ, 2015ರ ಫೆಬ್ರವರಿ ಮಾಹೆಯ ದಿನಾಂಕ 1,2 ಹಾಗೂ 3 ರಂದು ಹಾಸನ ಜಿಲ್ಲೆಯ ಶ್ರವಣಬೆಳಗೊಳದಲ್ಲಿ ನಡೆಸಲಾದ "81ನೇ ಕನ್ನಡ ಸಾಹಿತ್ಯ ಸಮ್ಮೇಳನ"ಕ್ಕೆ ಹಾಸನ ಜಿಲ್ಲಾ ರಾಜ್ಯ ಸರ್ಕಾರಿ ನೌಕರರ ಜನವರಿ 2015ರ ತಿಂಗಳ ವೇತನದಲ್ಲಿ ಕಟಾಯಿಸಲಾದ ಒಂದು ದಿನದ ವೇತನದಿಂದ ಸಂಗ್ರಹವಾದ ಒಟ್ಟು ಮೊತ್ತದ ಶೇ.70ರಷ್ಟನ್ನು (ಈಗಾಗಲೇ ದಿನಾಂಕ 16-01-2015ರ ಸ.ಆ. ಸಂಖ್ಯೆ: ಆಇ 28 ಎಸ್‌ಆರ್‌ಪಿ 2014ರನ್ವಯ ಸಮ್ಮೇಳನದ ಉದ್ದೇಶಿತ ಕಾರ್ಯಕ್ಕೆ ಬಳಸಿಕೊಳ್ಳುವ ಸಂಬಂಧದಲ್ಲಿ ಜಿಲ್ಲಾಧಿಕಾರಿಗಳು, ಹಾಸನ ಜಿಲ್ಲೆ ಇವರಿಗೆ ನೀಡಲಾಗಿರುವ ಶೇ.50 ರಷ್ಟನ್ನು ಒಳಗೊಂಡಂತೆ) ಅಖಿಲ ಭಾರತ 81ನೇ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಬಳಸಿಕೊಳ್ಳಲು ಹಾಗೂ ಉಳಿದ ಶೇ.30 ರಷ್ಟನ್ನು ಹಾಸನ ಜಿಲ್ಲಾ ಸರ್ಕಾರಿ ನೌಕರರ ಸಂಘಕ್ಕೆ ರಾಜ್ಯ ಸರ್ಕಾರಿ ನೌಕರರ ಸಮುದಾಯ ಭವನ ನಿರ್ಮಾಣಕ್ಕೆ ನೀಡಲು ಸರ್ಕಾರವು ಈ ಮೂಲಕ ಮಂಜೂರಾತಿ ನೀಡಿ ಆದೇಶಿಸಿದೆ.

2) ಹೀಗೆ ಸಂಗ್ರಹಿಸಲಾದ ಒಟ್ಟು ಮೊತ್ತವನ್ನು ಜಿಲ್ಲಾಧಿಕಾರಿಗಳು, ಹಾಸನ ಜಿಲ್ಲೆ ಇವರಿಗೆ ಚೆಕ್ಕಿನ ಮೂಲಕ ಖಜಾನೆ ಅಧಿಕಾರಿಗಳು ಸಂದಾಯ ಮಾಡುವ ವಿಧಿ ವಿಧಾನಗಳು ಈ ಕೆಳಗಿನಂತೆ ಇವೆ:-

ಅ) 81ನೇ ಕನ್ನಡ ಸಾಹಿತ್ಯ ಸಮ್ಮೇಳನಕ್ಕಾಗಿ ಹಾಸನ ಜಿಲ್ಲೆಯ ರಾಜ್ಯ ಸರ್ಕಾರಿ ನೌಕರರ ಒಂದು ದಿನದ ವೇತನವನ್ನು ಕಟಾಯಿಸಿ ಲೆಕ್ಕ ಶೀರ್ಷಿಕೆ "8658–00–102–4–29 ಹಾಸನ ಜಿಲ್ಲೆಯ ಶ್ರವಣಬೆಳಗೊಳದಲ್ಲಿ ನಡೆಯಲಿರುವ 81ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ವಂತಿಗೆ" ಯಡಿ ಜಮಾ ಮಾಡಿರುವ ಒಟ್ಟು ಮೊತ್ತದಲ್ಲಿ ದಿನಾಂಕ 16–01–2015ರ ಸರ್ಕಾರಿ ಆದೇಶ ಸಂಖ್ಯೆ: ಆಇ 28 ಎಸ್‌ಆರ್‌ಪಿ 2014ರನ್ವಯ ಈಗಾಗಲೇ ಶೇ. 50 ರಷ್ಟನ್ನು ಜಿಲ್ಲಾಧಿಕಾರಿಗಳು, ಹಾಸನ ಜಿಲ್ಲೆ ಇವರಿಗೆ ನೀಡಿದ್ದು, ಉಳಿದ ಶೇ. 50ರಷ್ಟು ಮೊತ್ತಕ್ಕೆ ಜಿಲ್ಲಾ ಖಜಾನೆ ಅಧಿಕಾರಿಯು ಜಿಲ್ಲಾಧಿಕಾರಿಗಳಿಗೆ ಚೆಕ್ಕನ್ನು ನೀಡತಕ್ಕದ್ದು.

ಆ) ಜಿಲ್ಲಾಧಿಕಾರಿ, ಹಾಸನ ಜಿಲ್ಲೆ ಅವರು ಒಟ್ಟು ವಂತಿಗೆಯ ಶೇ.70 ರಷ್ಟನ್ನು (ಈಗಾಗಲೇ ದಿನಾಂಕ 16–01–2015ರ ಸರ್ಕಾರಿ ಆದೇಶ ಸಂಖ್ಯೆ: ಆಇ 28 ಎಸ್‌ಆರ್‌ಪಿ 2014ರನ್ವಯ ಸಂದಾಯ ಮಾಡಿರುವ ಶೇ. 50ರಷ್ಟನ್ನು ಒಳಗೊಂಡಂತೆ) ಸಮ್ಮೇಳನದ ಉದ್ದೇಶಿತ ಕಾರ್ಯಕ್ಕೆ ಬಳಸಿಕೊಳ್ಳಲು ಹಾಗೂ ಉಳಿದ ಶೇ. 30 ರಷ್ಟನ್ನು ಹಾಸನ ಜಿಲ್ಲಾ ಸರ್ಕಾರಿ ನೌಕರರ ಸಂಘಕ್ಕೆ ರಾಜ್ಯ ಸರ್ಕಾರಿ ನೌಕರರ ಸಮುದಾಯ ಭವನ ನಿರ್ಮಾಣಕ್ಕೆ ನೀಡುವ ಅಧಿಕಾರ ಹೊಂದಿರುತ್ತಾರೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

P.R. 484
SC-50

ಕೆ.ಎಸ್. ರಾಜಲಕ್ಷ್ಮಿ
ಸರ್ಕಾರದ ಅಧೀನ ಕಾರ್ಯದರ್ಶಿ,
ಆರ್ಥಿಕ ಇಲಾಖೆ (ಸೇವೆಗಳು–2)

ಕಾನೂನು ಸಚಿವಾಲಯ

ವಿಷಯ : ಜಮಖಂಡಿ ಕಂದಾಯ ತಾಲ್ಲೂಕು, ಬಾಗಲಕೋಟೆ ಜಿಲ್ಲೆ ಇಲ್ಲಿ ಹೊಸದಾಗಿ ಸೃಜಿಸಿರುವ ಒಂದು ಹೆಚ್ಚುವರಿ ನೋಟರಿ ಹುದ್ದೆಯನ್ನು ತುಂಬುವ ಬಗ್ಗೆ.

ಓದಲಾಗಿದೆ :

1. ಸರ್ಕಾರಿ ಆದೇಶ ಸಂಖ್ಯೆ: ಲಾ 137 ಎಲ್‌ಸಿಎಲ್ 2013, ದಿನಾಂಕ: 26.09.2014.
2. ಸರ್ಕಾರದ ಪತ್ರ ಸಂಖ್ಯೆ: 362 ಎಲ್‌ಸಿಎಲ್ 2014. ದಿನಾಂಕ: 07.11.2014.
3. ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬಾಗಲಕೋಟೆ ಜಿಲ್ಲೆ ಇವರ ಪತ್ರ ಸಂಖ್ಯೆ: ಇಎಸ್‌ಟಿ/930/2015, ದಿ: 09.02.2015.
4. ಸರ್ಕಾರಿ ಅಧಿಸೂಚನೆ ಸಂಖ್ಯೆ: ಲಾ 157 ಎಲ್‌ಸಿಎಲ್ 2015. ದಿನಾಂಕ: 30.05.2015.
5. ಸರ್ಕಾರದ ಸಮ ಸಂಖ್ಯೆಯ ಸಂದರ್ಶನ ಸೂಚನಾ ಪತ್ರದ ದಿನಾಂಕ: 08.06.2015.

ಪ್ರಸ್ತಾವನೆ :

ಮೇಲೆ ಓದಲಾದ ಕ್ರಮ ಸಂಖ್ಯೆ (1) ರ ಸರ್ಕಾರಿ ಆದೇಶದಲ್ಲಿ ಜಮಖಂಡಿ ಕಂದಾಯ ತಾಲ್ಲೂಕು, ಬಾಗಲಕೋಟೆ ಜಿಲ್ಲೆ ಇಲ್ಲಿಗೆ ಸಾರ್ವಜನಿಕ ಹಿತದೃಷ್ಟಿಯಿಂದ ಹೊಸದಾಗಿ ಒಂದು ಹೆಚ್ಚುವರಿ ನೋಟರಿ ಹುದ್ದೆಯನ್ನು ಸೃಜಿಸಲು ಸರ್ಕಾರದ ಮಂಜೂರಾತಿ ನೀಡಲಾಗಿದೆ. ಮೇಲೆ ಓದಲಾದ ಕ್ರಮ, ಸಂಖ್ಯೆ: (2)ರ ಪತ್ರದಲ್ಲಿ ಸದರಿ ಹುದ್ದೆಯನ್ನು ತುಂಬುವ ಕುರಿತಂತೆ ನೋಟರಿಗಳ ಅಧಿನಿಯಮ/ನಿಯಮಗಳು 1956 ನಿಯಮ 6(1)(2) ಮತ್ತು 7(1)(2) (3) ರನ್ವಯ ಮತ್ತು ತಿದ್ದುಪಡಿ ನಿಯಮಗಳನ್ವಯ ಅಧಿಸೂಚನೆ ಹೊರಡಿಸಿ ಸ್ಥಳೀಯ ಜಾಹೀರಾತು ನೀಡಿ ಆ ಮೂಲಕ ಸ್ವೀಕರಿಸುವ ಅರ್ಜಿಗಳನ್ನು ಕರ್ನಾಟಕ ಕಾನೂನು ಅಧಿಕಾರಿಗಳ (ನೇಮಕಾತಿ ಮತ್ತು ಸೇವಾ ಷರತ್ತುಗಳು) ನಿಯಮಗಳ 1977ರ ನಿಯಮ 12 ರನ್ವಯ ಪರಿಶೀಲಿಸಿ ಅವರ ಅಭಿಪ್ರಾಯದೊಂದಿಗೆ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸುವಂತೆ ಕೋರಲಾಗಿತ್ತು. ಆ ಮೇರೆಗೆ ಮೇಲೆ ಓದಲಾದ ಕ್ರಮ ಸಂಖ್ಯೆ (3) ರ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ಪತ್ರದಲ್ಲಿ 8 ವಕೀಲರುಗಳ ಮೆಮೋರಿಯಲ್‌ಗಳನ್ನು ಅವರ ಅಭಿಪ್ರಾಯದೊಂದಿಗೆ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿರುತ್ತದೆ.

ಮೇಲೆ ಓದಲಾದ ಕ್ರಮ ಸಂಖ್ಯೆ (4) ರ ಸರ್ಕಾರಿ ಅಧಿಸೂಚನೆಯಲ್ಲಿ ಸಂಖ್ಯೆ: ಲಾ 61 ಎಲ್‌ಸಿಎಲ್ 2009, ದಿನಾಂಕ: 14/07/2010 ಮತ್ತು ಸಂಖ್ಯೆ: ಲಾ53 ಎಲ್‌ಸಿಎಲ್ 2013, ದಿನಾಂಕ: 23/07/2013ರ ಸರ್ಕಾರಿ ಅಧಿಸೂಚನೆಗಳಲ್ಲಿ ನೋಟರಿ ಸಂದರ್ಶನ ಮಂಡಳಿಗೆ ರಚಿಸಲಾಗಿರುವ ಸಮಿತಿಗಳನ್ನು ಈ ಕೂಡಲೇ ಜಾರಿಗೆ ಬರುವಂತೆ ರದ್ದುಗೊಳಿಸಿ, 1952ರ ಕೇಂದ್ರ ಅಧಿನಿಯಮ, ಸೆಕ್ಷನ್ 15ರಲ್ಲಿ (1951ರ ಅಧಿನಿಯಮ 53) ಓದಲಾದ ನೋಟರಿಗಳ ತಿದ್ದುಪಡಿ ನಿಯಮಗಳು, ಹಾಗೂ 2009ರ ನೋಟರಿಗಳ ತಿದ್ದುಪಡಿ ನಿಯಮಗಳ, ನಿಯಮ 7(ಎ)(2)ರನ್ವಯ ಈ ಕೆಳಕಂಡ 3 (ಮೂರು) ಹುದ್ದೆಗಳ ವೃಂದ ಬಲದ ಅಧ್ಯಕ್ಷರು ಮತ್ತು ಸದಸ್ಯರುಗಳನ್ನೊಳಗೊಂಡ ನೋಟರಿ ಸಂದರ್ಶನ ಮಂಡಳಿಯನ್ನು ಮುಂದಿನ ಆದೇಶದವರೆಗೆ ಜಾರಿಗೆ ಬರುವಂತೆ ರಚಿಸಲಾಗಿದೆ.

1) ಅಪರ ಕಾನೂನು ಕಾರ್ಯದರ್ಶಿಗಳು (ಅಭಿಪ್ರಾಯ), -- ಅಧ್ಯಕ್ಷರು

2) ಕಾನೂನು ಕೋಶದ ಮುಖ್ಯಸ್ಥರು (ಹಿರಿಯ ಸಿವಿಲ್ ನ್ಯಾಯಾಧೀಶರು) -- ಸದಸ್ಯರು
(ಲೋಕೋಪಯೋಗಿ ಮತ್ತು ಜಲಸಂಪನ್ಮೂಲ ಇಲಾಖೆ)

3) ಕಾನೂನು ಕೋಶದ ಮುಖ್ಯಸ್ಥರು (ಹಿರಿಯ ಸಿವಿಲ್ ನ್ಯಾಯಾಧೀಶರು) -- ಸದಸ್ಯರು
(ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ)

ಮೇಲೆ ಓದಲಾದ ಕ್ರಮ ಸಂಖ್ಯೆ (5)ರ ಪತ್ರದಲ್ಲಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ಪ್ರಸ್ತಾವನೆಯಲ್ಲಿ ಶಿಫಾರಸ್ಸು ಮಾಡಿರುವ ಎಲ್ಲಾ ವಕೀಲರುಗಳನ್ನು ಸಂದರ್ಶನಕ್ಕೆ ಆಹ್ವಾನಿಸಿ ದಿನಾಂಕ: 24.06.2015 ರಂದು ನಡೆದ ಸಂದರ್ಶನ ಮಂಡಳಿಯಲ್ಲಿ ಶ್ರೀ ಶ್ರೀಶೈಲ್ ಬೂಮರ್, ವಕೀಲರು,

ಇವರನ್ನು ಜಮಖಂಡಿ ಕಂದಾಯ ತಾಲ್ಲೂಕು, ಬಾಗಲಕೋಟೆ ಜಿಲ್ಲೆ ಇಲ್ಲಿ ಹೊಸದಾಗಿ ಸೃಜಿಸಿರುವ ಒಂದು ಹೆಚ್ಚುವರಿ ನೋಟರಿ ಹುದ್ದೆಗೆ ನೇಮಕ ಮಾಡಲು ಶಿಫಾರಸ್ಸು ಮಾಡಲಾಗಿದೆ.

ಆ ಮೇರೆಗೆ, ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ : ಲಾ 362 ಎಲ್‌ಸಿಎಲ್ 2014, ಬೆಂಗಳೂರು. ದಿನಾಂಕ: 21.07.2015.

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಕೂಲಂಕುಷವಾಗಿ ಪರಿಶೀಲಿಸಿ ನೋಟರಿ ಅಧಿನಿಯಮ, 1952 ಹಾಗೂ ಇದರ ಅಡಿಯಲ್ಲಿ ರಚಿಸಲಾಗಿರುವ ನೋಟರಿ ನಿಯಮಗಳು, 1956 ಹಾಗೂ ನಂತರದ ತಿದ್ದುಪಡಿ ನಿಯಮಗಳನ್ವಯ ಪರಿಶೀಲಿಸಿ, ನಿಯಮ 8(1)ರಲ್ಲಿ ಪ್ರದತ್ತವಾದ ಅಧಿಕಾರದನ್ವಯ ಶ್ರೀ ಶ್ರೀಶೈಲ್ ಬೂಮರ್, ವಕೀಲರು, ಕುಂಬಾರ್ ಗಲ್ಲಿ, ಜಮಖಂಡಿ ತಾಲ್ಲೂಕು, ಬಾಗಲಕೋಟೆ ಜಿಲ್ಲೆ –587301. ಇವರನ್ನು ವೃತ್ತಿ ಪ್ರಮಾಣ ಪತ್ರ ನೀಡಲಾದ ದಿನಾಂಕದಿಂದ 5 (ಐದು) ವರ್ಷಗಳ ಅವಧಿಗೆ ಬಾಗಲಕೋಟೆ ಕಂದಾಯ ತಾಲ್ಲೂಕಿನಲ್ಲಿ ಹೊಸದಾಗಿ ಸೃಜಿಸಿರುವ ನೋಟರಿ ಹುದ್ದೆಗೆ ನೇಮಕಾತಿ ಮಾಡಲಾಗಿದೆ.

ಸದರಿ, ವಕೀಲರು ಲೆಕ್ಕ ಶೀರ್ಷಿಕೆ 0070– ಇತರೆ ಆಡಳಿತಾತ್ಮಕ ಸೇವೆಗಳು–01–ನ್ಯಾಯ ಪರಿಪಾಲನೆ–501–0–ಇತರೆ ಸ್ವೀಕೃತಿಗಳು – 06–ಇತರೆ ಬಾಬ್ತುಗಳಿಗೆ (0070–01–501–0–06) ನೋಟರಿ ನಿಯಮಗಳಲ್ಲಿ ನಿಗಧಿಪಡಿಸಲಾದ ₹.1000.00 (ಒಂದು ಸಾವಿರಗಳು ಮಾತ್ರ) ಶುಲ್ಕವನ್ನು ಸರ್ಕಾರಿ ಖಜಾನೆಯಲ್ಲಿ ಜಮಾ ಮಾಡಿ ಆ ಬಗೆಗಿನ ಮೂಲ ಚಲನ್ ಮತ್ತು ಹುಟ್ಟಿದ ದಿನಾಂಕವನ್ನು ಧೃಢೀಕರಿಸಬಲ್ಲ ದಾಖಲೆಯನ್ನು ಹಾಜರುಪಡಿಸಿದ ನಂತರ ಅವರಿಗೆ ವೃತ್ತಿ ಪ್ರಮಾಣ ಪತ್ರವನ್ನು ನೀಡಲಾಗುವುದು.

ವೃತ್ತಿ ಪ್ರಮಾಣ ಪತ್ರ ನೀಡಿದ ನಂತರ ಶ್ರೀಯುತರ ಹೆಸರನ್ನು ನೋಟರಿ ಅಧಿನಿಯಮ, 1952 ಕಲಂ 4ನೇ ಪ್ರಕರಣದಡಿ ಸರ್ಕಾರ ನಿರ್ವಹಿಸುತ್ತಿರುವ ನೋಟರಿ ಪಟ್ಟಿಯಲ್ಲಿ ನಮೂದಿಸಲಾಗುವುದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
ಸಯೀದಾ ಬಾನು
ಸರ್ಕಾರದ ಅಧೀನ ಕಾರ್ಯದರ್ಶಿ,
ಕಾನೂನು ಇಲಾಖೆ (ಆಡಳಿತ–2).

P.R.493
SC-25

ಕಾನೂನು ಸಚಿವಾಲಯ

ವಿಷಯ : ಶಹಾಪುರ ಕಂದಾಯ ತಾಲ್ಲೂಕು, ಯಾದಗಿರಿ ಜಿಲ್ಲೆ ಇಲ್ಲಿ ಹೊಸದಾಗಿ ಸೃಜಿಸಿರುವ ಒಂದು ಹೆಚ್ಚುವರಿ ನೋಟರಿ ಹುದ್ದೆಯನ್ನು ತುಂಬುವ ಬಗ್ಗೆ.

ಓದಲಾಗಿದೆ :
1. ಸರ್ಕಾರಿ ಆದೇಶ ಸಂಖ್ಯೆ: ಲಾ 187 ಎಲ್‌ಸಿಎಲ್ 2013, ದಿನಾಂಕ: 19.02.2015.
2. ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಯಾದಗಿರಿ ಜಿಲ್ಲೆ ಇವರ ಪತ್ರ ಸಂಖ್ಯೆ: ಡಿಸಿವೈ/ಎಡಿಎಮ್‌ಎನ್ 1163/2015, ದಿನಾಂಕ :17.04.2015.
3. ಸರ್ಕಾರಿ ಅಧಿಸೂಚನೆ ಸಂಖ್ಯೆ: ಲಾ 157 ಎಲ್‌ಸಿಎಲ್ 2015 ದಿನಾಂಕ: 30.05.2015.
4. ಸಂದರ್ಶನದ ಸಭಾ ಸೂಚನಾ ಪತ್ರದ ದಿನಾಂಕ : 15.06.2015.

ಪ್ರಸ್ತಾವನೆ :

ಮೇಲೆ ಓದಲಾದ ಕ್ರಮ ಸಂಖ್ಯೆ (1) ರ ಸರ್ಕಾರಿ ಆದೇಶದಲ್ಲಿ ಶಹಾಪುರ ಕಂದಾಯ ತಾಲ್ಲೂಕು, ಯಾದಗಿರಿ ಜಿಲ್ಲೆ ಇಲ್ಲಿಗೆ ಸಾರ್ವಜನಿಕ ಹಿತದೃಷ್ಠಿಯಿಂದ ಹೊಸದಾಗಿ ಒಂದು ಹೆಚ್ಚುವರಿ ನೋಟರಿ ಹುದ್ದೆಯನ್ನು ಸೃಜಿಸಿ ಸದರಿ ಹುದ್ದೆಯನ್ನು ತುಂಬುವ ಕುರಿತಂತೆ ನೋಟರಿಗಳ ಅಧಿನಿಯಮ/ನಿಯಮಗಳು 1956 ನಿಯಮ 6(1)(2) ಮತ್ತು 7(1)(2)(3) ರನ್ವಯ ಮತ್ತು ತಿದ್ದುಪಡಿ ನಿಯಮಗಳನ್ವಯ ಅಧಿಸೂಚನೆ ಹೊರಡಿಸಿ ಸ್ಥಳೀಯ ಜಾಹೀರಾತು ನೀಡಿ ಆ ಮೂಲಕ ಸ್ವೀಕರಿಸುವ ಅರ್ಜಿಗಳನ್ನು ಕರ್ನಾಟಕ ಕಾನೂನು ಅಧಿಕಾರಿಗಳ (ನೇಮಕಾತಿ ಮತ್ತು ಸೇವಾ ಷರತ್ತುಗಳು) ನಿಯಮಗಳ 1977ರ ನಿಯಮ 12 ರನ್ವಯ ಪರಿಶೀಲಿಸಿ ಅವರ ಅಭಿಪ್ರಾಯದೊಂದಿಗೆ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸುವಂತೆ ಕೋರಲಾಗಿತ್ತು. ಆ ಮೇರೆಗೆ ಕ್ರಮ ಸಂಖ್ಯೆ (3) ರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ಪತ್ರದಲ್ಲಿ 12 ವಕೀಲರುಗಳ ಮೆಮೋರಿಯಲ್‌ಗಳನ್ನು ಅವರ ಅಭಿಪ್ರಾಯದೊಂದಿಗೆ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿರುತ್ತದೆ.

ಮೇಲೆ ಓದಲಾದ ಕ್ರಮ ಸಂಖ್ಯೆ (4) ರ ಸರ್ಕಾರಿ ಅಧಿಸೂಚನೆಯಲ್ಲಿ ಸಂಖ್ಯೆ: ಲಾ 61 ಎಲ್‌ಸಿಎಲ್ 2009, ದಿನಾಂಕ: 14/07/2010 ಮತ್ತು ಸಂಖ್ಯೆ: ಲಾ 53 ಎಲ್‌ಸಿಎಲ್ 2013, ದಿನಾಂಕ: 23/07/2013ರ ಸರ್ಕಾರಿ ಅಧಿಸೂಚನೆಗಳಲ್ಲಿ ನೋಟರಿ ಸಂದರ್ಶನ ಮಂಡಳಿಗೆ ರಚಿಸಲಾಗಿರುವ ಸಮಿತಿಗಳನ್ನು ಈ ಕೂಡಲೇ ಜಾರಿಗೆ ಬರುವಂತೆ ರದ್ದುಗೊಳಿಸಿ, 1952ರ ಕೇಂದ್ರ ಅಧಿನಿಯಮ, ಸೆಕ್ಷನ್ 15ರಲ್ಲಿ (1951ರ ಅಧಿನಿಯಮ 53) ಓದಲಾದ ನೋಟರಿಗಳ ತಿದ್ದುಪಡಿ ನಿಯಮಗಳು, ಹಾಗೂ 2009ರ ನೋಟರಿಗಳ (ತಿದ್ದುಪಡಿ ನಿಯಮಗಳ) ನಿಯಮ 7(ಎ)(2)ರನ್ವಯ ಈ ಕೆಳಕಂಡ ನೋಟರಿ ಸಂದರ್ಶನ ಮಂಡಳಿಯನ್ನು ಮುಂದಿನ ಆದೇಶದವರೆಗೆ ಜಾರಿಗೆ ಬರುವಂತೆ ರಚಿಸಲಾಗಿದೆ.

1) ಅಪರ ಕಾನೂನು ಕಾರ್ಯದರ್ಶಿಗಳು (ಅಭಿಪ್ರಾಯ), -- ಅಧ್ಯಕ್ಷರು
2) ಕಾನೂನು ಕೋಶದ ಮುಖ್ಯಸ್ಥರು (ಹಿರಿಯ ಸಿವಿಲ್ ನ್ಯಾಯಾಧೀಶರು) -- ಸದಸ್ಯರು
(ಲೋಕೋಪಯೋಗಿ ಮತ್ತು ಜಲಸಂಪನ್ಮೂಲ ಇಲಾಖೆ)
3) ಕಾನೂನು ಕೋಶದ ಮುಖ್ಯಸ್ಥರು (ಹಿರಿಯ ಸಿವಿಲ್ ನ್ಯಾಯಾಧೀಶರು) -- ಸದಸ್ಯರು
(ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ)

ಮೇಲೆ ಓದಲಾದ ಕ್ರಮ ಸಂಖ್ಯೆ (5)ರ ಪತ್ರದಲ್ಲಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ಪ್ರಸ್ತಾವನೆಯಲ್ಲಿ ಶಿಫಾರಸ್ಸು ಮಾಡಿರುವ ಎಲ್ಲಾ ವಕೀಲರುಗಳನ್ನು ಸಂದರ್ಶನಕ್ಕೆ ಆಹ್ವಾನಿಸಿ ದಿನಾಂಕ: 24.06.2015 ರಂದು ನಡೆದ ಸಂದರ್ಶನ ಮಂಡಳಿಯಲ್ಲಿ ಶ್ರೀ ಮಲ್ಲಪ್ಪ, ವಕೀಲರು, ಸೈದಾಪುರ

ಗ್ರಾಮ್, ಪೋಸ್ಟ್ ದಿಗ್ಗಿ, ಶಹಾಪುರ ಕಂದಾಯ ತಾಲ್ಲೂಕು, ಯಾದಗಿರಿ ಜಿಲ್ಲೆ–585287 ಇವರನ್ನು ಯಾದಗಿರಿ ಜಿಲ್ಲೆಯಲ್ಲಿ ಹೊಸದಾಗಿ ಸೃಜಿಸಿರುವ ಒಂದು ಹೆಚ್ಚುವರಿ ನೋಟರಿ ಹುದ್ದೆಗೆ ನೇಮಕ ಮಾಡಲು ಶಿಫಾರಸ್ಸು ಮಾಡಲಾಗಿದೆ.

ಆ ಮೇರೆಗೆ, ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ : ಲಾ 145 ಎಲ್‌ಸಿಎಲ್ 2015, ಬೆಂಗಳೂರು. ದಿನಾಂಕ: 21.07.2015.

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಕೂಲಂಕುಷವಾಗಿ ಪರಿಶೀಲಿಸಿ ನೋಟರಿ ಅಧಿನಿಯಮ, 1952 ಹಾಗೂ ಇದರ ಅಡಿಯಲ್ಲಿ ರಚಿಸಲಾಗಿರುವ ನೋಟರಿ ನಿಯಮಗಳು, 1956 ಹಾಗೂ ನಂತರದ ತಿದ್ದುಪಡಿ ನಿಯಮಗಳನ್ವಯ ಪರಿಶೀಲಿಸಿ, ನಿಯಮ 8(1)ರಲ್ಲಿ ಪ್ರದತ್ತವಾದ ಅಧಿಕಾರದನ್ವಯ ಶ್ರೀ ಮಲ್ಲಪ್ಪ, ವಕೀಲರು, ಸೈದಾಪುರ ಗ್ರಾಮ್, ಪೋಸ್ಟ್ ದಿಗ್ಗಿ, ಶಹಾಪುರ ಕಂದಾಯ ತಾಲ್ಲೂಕು, ಯಾದಗಿರಿ ಜಿಲ್ಲೆ–585287 ಇವರನ್ನು ವೃತ್ತಿ ಪ್ರಮಾಣ ಪತ್ರ ನೀಡಲಾದ ದಿನಾಂಕದಿಂದ 5 (ಐದು) ವರ್ಷಗಳ ಅವಧಿಗೆ ಶಹಾಪುರ ಕಂದಾಯ ತಾಲ್ಲೂಕಿನಲ್ಲಿ ಹೊಸದಾಗಿ ಸೃಜಿಸಿರುವ ನೋಟರಿ ಹುದ್ದೆಗೆ ನೇಮಕಾತಿ ಮಾಡಲಾಗಿದೆ.

ಸದರಿ, ವಕೀಲರು ಲೆಕ್ಕ ಶೀರ್ಷಿಕೆ 0070– ಇತರೆ ಆಡಳಿತಾತ್ಮಕ ಸೇವೆಗಳು–01–ನ್ಯಾಯ ಪರಿಪಾಲನೆ–501–0–ಇತರೆ ಸ್ವೀಕೃತಿಗಳು – 06–ಇತರೆ ಬಾಬ್ತುಗಳಿಗೆ (0070–01–501–0–06) ನೋಟರಿ ನಿಯಮಗಳಲ್ಲಿ ನಿಗಧಿಪಡಿಸಲಾದ ರೂ.1000.00 (ಒಂದು ಸಾವಿರಗಳು ಮಾತ್ರ) ಶುಲ್ಕವನ್ನು ಸರ್ಕಾರಿ ಖಜಾನೆಯಲ್ಲಿ ಜಮಾ ಮಾಡಿ ಆ ಬಗೆಗಿನ ಮೂಲ ಚಲನ್ ಮತ್ತು ಹುಟ್ಟಿದ ದಿನಾಂಕವನ್ನು ಧೃಡೀಕರಿಸಬಲ್ಲ ದಾಖಲೆಯನ್ನು ಹಾಜರುಪಡಿಸಿದ ನಂತರ ಅವರಿಗೆ ವೃತ್ತಿ ಪ್ರಮಾಣ ಪತ್ರವನ್ನು ನೀಡಲಾಗುವುದು.

ವೃತ್ತಿ ಪ್ರಮಾಣ ಪತ್ರ ನೀಡಿದ ನಂತರ ಶ್ರೀಯುತರ ಹೆಸರನ್ನು ನೋಟರಿ ಅಧಿನಿಯಮ, 1952 ಕಲಂ 4ನೇ ಪ್ರಕರಣದಡಿ ಸರ್ಕಾರ ನಿರ್ವಹಿಸುತ್ತಿರುವ ನೋಟರಿ ಪಟ್ಟಿಯಲ್ಲಿ ನಮೂದಿಸಲಾಗುವುದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
ಸಯೀದಾ ಬಾನು
ಸರ್ಕಾರದ ಅಧೀನ ಕಾರ್ಯದರ್ಶಿ,
ಕಾನೂನು ಇಲಾಖೆ (ಆಡಳಿತ–2).

P.R.494
SC-25

ಸಹಕಾರ ಸಚಿವಾಲಯ

ವಿಷಯ: 2014–15ನೇ ಸಾಲಿನಲ್ಲಿ ರಾಜ್ಯದ ರೈತರಿಗೆ ಕರ್ನಾಟಕ ರಾಜ್ಯ ಸಹಕಾರ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬ್ಯಾಂಕ್, ಪ್ರಾಥಮಿಕ ಸಹಕಾರ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬ್ಯಾಂಕ್‌ಗಳ ಮೂಲಕ ವಿತರಿಸಿದ ದೀರ್ಘಾವಧಿ ಕೃಷಿ ಸಾಲಗಳಿಗೆ ಬಡ್ಡಿ ಸಹಾಯಧನ ದರವನ್ನು ನಿಗದಿಪಡಿಸುವ ಕುರಿತು ಆದೇಶ.

ಓದಲಾಗಿದೆ:
1. ಸರ್ಕಾರದ ಆದೇಶ ಸಂಖ್ಯೆ: ಸಿಒ 207 ಸಿಎಲ್‌ಎಸ್ 2014, ದಿನಾಂಕ: 08–08–2014.
2. ಸರ್ಕಾರದ ಆದೇಶ ಸಂಖ್ಯೆ: ಸಿಒ 160 ಸಿಎಲ್‌ಎಸ್ 2014, ದಿನಾಂಕ: 07–06–2014.
3. ಸಹಕಾರ ಸಂಘಗಳ ನಿಬಂಧಕರ ಪತ್ರ ಸಂಖ್ಯೆ: ಆರ್‌ಸಿಎಸ್/ಎಲ್‌ಡಿಬಿ–2/82/2013–14, ದಿನಾಂಕ: 28.03.2015.

ಪ್ರಸ್ತಾವನೆ:

ಮೇಲೆ (1)ರಲ್ಲಿ ಓದಲಾದ ಸರ್ಕಾರಿ ಆದೇಶದಲ್ಲಿ ರಾಜ್ಯದ ರೈತರಿಗೆ ಪತ್ತಿನ ಸಹಕಾರಿ ಸಂಸ್ಥೆಗಳು ಶೇ.3ರ ಬಡ್ಡಿ ದರದಲ್ಲಿ ಮಧ್ಯಮಾವಧಿ ಮತ್ತು ದೀರ್ಘಾವಧಿ ಕೃಷಿ ಮತ್ತು ಕೃಷಿ ಸಂಬಂಧಿತ ಸಾಲಗಳನ್ನು ನೀಡುವ ಯೋಜನೆಯನ್ನು 2014–15ನೇ ಸಾಲಿಗೆ ಮುಂದುವರೆಸಿ ಆದೇಶ ಹೊರಡಿಸಲಾಗಿರುತ್ತದೆ.

ಮೇಲೆ (2)ರಲ್ಲಿ ಓದಲಾದ ಸರ್ಕಾರಿ ಆದೇಶದಲ್ಲಿ 2013–14ನೇ ಸಾಲಿನಲ್ಲಿ ಕರ್ನಾಟಕ ರಾಜ್ಯ ಸಹಕಾರ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬ್ಯಾಂಕ್, ಪ್ರಾಥಮಿಕ ಸಹಕಾರ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬ್ಯಾಂಕ್‌ಗಳು ರೈತರಿಗೆ ಶೇ. 3 ರ ಬಡ್ಡಿ ದರದಲ್ಲಿ ವಿತರಿಸಿದ ದೀರ್ಘಾವಧಿ ಸಾಲಗಳಿಗೆ ಶೇ. 10.50ರ ಬಡ್ಡಿ ಸಹಾಯಧನದ ದರವನ್ನು ನಿಗದಿಪಡಿಸಿ ಆದೇಶಿಸಲಾಗಿದೆ.

ಮೇಲೆ (3)ರಲ್ಲಿ ಓದಲಾದ ದಿನಾಂಕ: 28.03.2015ರ ಪತ್ರದಲ್ಲಿ ಸಹಕಾರ ಸಂಘಗಳ ನಿಬಂಧಕರು 2014–15ನೇ ಸಾಲಿನಲ್ಲಿ ಕರ್ನಾಟಕ ರಾಜ್ಯ ಸಹಕಾರ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬ್ಯಾಂಕ್, ಪ್ರಾಥಮಿಕ ಸಹಕಾರ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬ್ಯಾಂಕ್‌ಗಳ ಮುಖಾಂತರ ಶೆ. 3ರ ಬಡ್ಡಿ ದರದಲ್ಲಿ ವಿತರಿಸಿದ ದೀರ್ಘಾವಧಿ ಕೃಷಿ ಸಾಲಗಳಿಗೆ ರಾಜ್ಯ ಸರ್ಕಾರವು ನೀಡಬೇಕಾದ ಸಹಾಯಧನದ ದರವನ್ನು ಶೇ. 11ರಂತೆ ನಿಗದಿಪಡಿಸಿ ಆದೇಶ ಹೊರಡಿಸಲು ಕೋರಿ ಪ್ರಸ್ತಾವನೆ ಸಲ್ಲಿಸಿರುತ್ತಾರೆ.

ಆರ್ಥಿಕ ಇಲಾಖೆಯು ದಿನಾಂಕ: 17.06.2015ರ ಟಿಪ್ಪಣಿ ಸಂಖ್ಯೆ: ಆಇ 192 ವೆಚ್ಚ–2/2015ರ ಹಿಂಬರಹದಲ್ಲಿ 2014–15ನೇ ಸಾಲಿನಲ್ಲಿ ರೈತರಿಗೆ ಶೇ.3ರ ಬಡ್ಡಿ ದರದಲ್ಲಿ ವಿತರಿಸಿದ ದೀರ್ಘಾವಧಿ ಸಾಲಗಳಿಗೆ ಶೇ. 10.50ರ ಬಡ್ಡಿ ಸಹಾಯಧನದ ದರವನ್ನ ನಿಗದಿಪಡಿಸಲು ಸಹಮತಿ ನೀಡಿರುತ್ತದೆ.

ಪ್ರಸ್ತಾವನೆಯನ್ನು ಸರ್ಕಾರವು ಪರಿಶೀಲಿಸಿ, ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಸಿಒ 207 ಸಿಎಲ್‌ಎಸ್ 2014, ಬೆಂಗಳೂರು, ದಿನಾಂಕ; 20.06.2015

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ 2014–15ನೇ ಸಾಲಿನಲ್ಲಿ ಕರ್ನಾಟಕ ರಾಜ್ಯ ಸಹಕಾರ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬ್ಯಾಂಕ್, ಪ್ರಾಥಮಿಕ ಸಹಕಾರ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬ್ಯಾಂಕ್‌ಗಳು ರೈತರಿಗೆ ಶೇ. 3 ರ ಬಡ್ಡಿ ದರದಲ್ಲಿ ವಿತರಿಸಿದ ದೀರ್ಘಾವಧಿ ಸಾಲಗಳಿಗೆ ಶೇ. 10.50ರ ಬಡ್ಡಿ ಸಹಾಯಧನದ ದರವನ್ನು ನಿಗದಿಪಡಿಸಿ ಆದೇಶಿಸಲಾಗಿದೆ.

ಈ ಆದೇಶವನ್ನು ಆರ್ಥಿಕ ಇಲಾಖೆ ಟಿಪ್ಪಣಿ ಸಂಖ್ಯೆ: ಆಇ 192 ವೆಚ್ಚ–2/2015 ದಿನಾಂಕ: 17.06.2015ರಲ್ಲಿ ನೀಡಿರುವ ಸಹಮತಿಯ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಎಂ. ವೆಂಕಟಸ್ವಾಮಿ

ವಿಶೇಷ ಕರ್ತವ್ಯಾಧಿಕಾರಿ ಹಾಗೂ ಪದನಿಮಿತ್ತ

ಸರ್ಕಾರದ ಉಪ ಕಾರ್ಯದರ್ಶಿ, ಸಹಕಾರ ಇಲಾಖೆ.

PR. 402

SC. 25

ಕಂದಾಯ ಸಚಿವಾಲಯ

ವಿಷಯ: ಬಳ್ಳಾರಿ ಜಿಲ್ಲೆ, ಕೂಡ್ಲಿಗೆ ತಾಲ್ಲೂಕು, ಕೊಟ್ಟೂರು ಗ್ರಾಮದ ಸ.ನಂ. 1421, 1422 ಮತ್ತು 1423 ಪೈಕಿ ವಿಸ್ತೀರ್ಣ 21.97 ಹೆಕ್ಟೇರ್ (54.27 ಎಕರೆ) ಸರ್ಕಾರಿ ಜಮೀನನ್ನು ಪರಿಹಾರಾತ್ಮಕ ನೆಡುತೋಪು ಬೆಳೆಸಲು ಮೆ: ಹೆಚ್ ಎನ್. ಪ್ರೇಮ್‌ಕುಮಾರ್ ಗಣಿಗುತ್ತಿಗೆ ಸಂಖ್ಯೆ: 2538 ಕಲ್ಲಹಳ್ಳಿ ಗ್ರಾಮ ಹೊಸಪೇಟೆ ತಾಲ್ಲೂಕು ಇವರ ಪರವಾಗಿ ಅರಣ್ಯ ಇಲಾಖೆಗೆ ವರ್ಗಾಯಿಸುವ ಬಗ್ಗೆ.

ಓದಲಾಗಿದೆ: ಜಿಲ್ಲಾಧಿಕಾರಿ, ಬಳ್ಳಾರಿ ಜಿಲ್ಲೆ, ಇವರ ಪತ್ರ ಸಂಖ್ಯೆ: ಕಂ:ಭೂಮಿ/ಸಿ&ಡಿ/09/2014–15, ದಿನಾಂಕ: 30.03.2015 ಮತ್ತು 30.04.2015.

ಪ್ರಸ್ತಾವನೆ:

ಮೇಲೆ ಓದಲಾದ ಪತ್ರದಲ್ಲಿ, ಜಿಲ್ಲಾಧಿಕಾರಿಗಳು, ಬಳ್ಳಾರಿ ಜಿಲ್ಲೆ, ಬಳ್ಳಾರಿ ಇವರು ಮೆ: ಹೆಚ್. ಎನ್ ಪ್ರೇಮ್ ಕುಮಾರ್, ಗಣಿಗುತ್ತಿಗೆ ಸಂಖ್ಯೆ: 2538 ಕಲ್ಲಹಳ್ಳಿ ಗ್ರಾಮ ಹೊಸಪೇಟೆ ತಾಲ್ಲೂಕು ಇವರಿಗೆ ಸರ್ಕಾರದ ಆದೇಶದಂತೆ ಎಂ.ಎಲ್.ನಂ 2538, ದಿನಾಂಕ: 28.02.2007ರಲ್ಲಿ ಗಣಿ ಗುತ್ತಿಗೆ ಮಂಜೂರಾಗಿದ್ದು, ಸದರಿ ಜಮೀನು ಅರಣ್ಯ ಜಮೀನಾಗಿರುವುದರಿಂದ, ಅರಣ್ಯ ಜಮೀನಿಗೆ ಸಮಾನಾಂತರವಾಗಿ ಪರಿಹಾರಾತ್ಮಕ ನೆಡುತೋಪು ಬೆಳೆಸಲು ಬಳ್ಳಾರಿ ಜಿಲ್ಲೆ, ಕೂಡ್ಲಿಗೆ ತಾಲ್ಲೂಕಿನ ಕೊಟ್ಟೂರು ಗ್ರಾಮದ ಸ.ನಂ 1421, 1422 ಮತ್ತು 1423ರಲ್ಲಿ ಅನುಕ್ರಮವಾಗಿ ವಿಸ್ತೀರ್ಣ 46.93, 7.02 ಮತ್ತು 6.40 ಒಟ್ಟು 60.35 ಜಮೀನಿನ ಪೈಕಿ 21.97 ಹೆಕ್ಟೇರ್ (54.26 ಎಕರೆ) ಜಮೀನನ್ನು ಅರಣ್ಯ ಇಲಾಖೆಗೆ ವರ್ಗಾಯಿಸುವಂತೆ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.

ಜಿಲ್ಲಾಧಿಕಾರಿ, ಬಳ್ಳಾರಿ ಇವರು ಬಳ್ಳಾರಿ ಜಿಲ್ಲೆ, ಕೂಡ್ಲಿಗೆ ತಾಲ್ಲೂಕು, ಕೊಟ್ಟೂರು ಗ್ರಾಮದ ಸ.ನಂ. 1421, ಸ.ನಂ 1422 ಮತ್ತು 1423ರಲ್ಲಿ ಅನುಕ್ರಮವಾಗಿ ವಿಸ್ತೀರ್ಣ 46.93, 7.02 ಮತ್ತು 6.40 ಒಟ್ಟು ವಿಸ್ತೀರ್ಣ 60.35 ಎಕರೆ ಜಮೀನಿದ್ದು, ಖುಲ್ಲಾ ಇರುತ್ತದೆ. ಯಾವುದೇ ಅತಿಕ್ರಮಣವಾಗಿರುವುದಿಲ್ಲ. ನಮೂನೆ 50 ಮತ್ತು 53ರ ಅರ್ಜಿ ಬಾಕಿ ಇರುವುದಿಲ್ಲ. ಅಲ್ಲದೆ ಸರ್ಕಾರದ ಆದೇಶ ಸಂಖ್ಯೆ ಆರ್‌ಡಿ 51 ಎಲ್‌ಜಿಪಿ 81, ದಿನಾಂಕ: 18.08.1981ರನ್ವಯ ಸದರಿ ಜಮೀನುಗಳು ಲ್ಯಾಂಡ್ ಬ್ಯಾಂಕ್‌ನಲ್ಲಿ ಸೇರಿಸಿರುವುದಿಲ್ಲವಾದ್ದರಿಂದ ಸದರಿ ಜಮೀನುಗಳನ್ನು ಲ್ಯಾಂಡ್ ಬ್ಯಾಂಕ್‌ನಲ್ಲಿ ಸೇರಿಸಿಕೊಂಡು ಈ ಪೈಕಿ 21.97 ಹೆಕ್ಟೇರ್ (54.26 ಎಕರೆ) ಜಮೀನನ್ನು ಮೆ. ಹೆಚ್. ಎನ್. ಪ್ರೇಮ್ ಕುಮಾರ್ ಗಣಿಗುತ್ತಿಗೆ ಸಂಖ್ಯೆ 2538, ಕಲ್ಲಹಳ್ಳಿ ಗ್ರಾಮ, ಹೊಸಪೇಟೆ ತಾಲ್ಲೂಕು ಇವರ ಪರವಾಗಿ ಪರಿಹಾರಾತ್ಮಕ ನೆಡುತೋಪು ಬೆಳೆಸಲು ಅರಣ್ಯ ಇಲಾಖೆಗೆ ಹಸ್ತಾಂತರಿಸುವ ಕುರಿತು ಪ್ರಸ್ತಾಪಿಸಿದ್ದಾರೆ.

ಸದರಿ ಪ್ರಸ್ತಾವನೆಯನ್ನು ಕೂಲಂಕಷವಾಗಿ ಸರ್ಕಾರವು ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಆರ್‌ಡಿ 28 ಎಲ್‌ಜಿಇ 2015 ಬೆಂಗಳೂರು, ದಿನಾಂಕ: 22.06.2015

ಮೇಲಿನ ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಬಳ್ಳಾರಿ ಜಿಲ್ಲೆ, ಕೂಡ್ಲಿಗೆ ತಾಲ್ಲೂಕು, ಕೊಟ್ಟೂರು ಗ್ರಾಮದ ಸ.ನಂ 1421ರಲ್ಲಿ 46.93 ಎಕರೆ 1422ರಲ್ಲಿ 7.02 ಎಕರೆ ಮತ್ತು ಸ.ನಂ 1423ರಲ್ಲಿ 6.40 ಎಕರೆ ಒಟ್ಟು 60.35 ಎಕರೆ ಜಮೀನನ್ನು ಲ್ಯಾಂಡ್ ಬ್ಯಾಂಕ್ ಗೆ ಸೇರಿಸಿಕೊಂಡು ಈ ಪೈಕಿ 21.97 ಹೆಕ್ಟೇರ್ (54.26 ಎಕರೆ) ಜಮೀನನ್ನು ಮೆ. ಹೆಚ್. ಎನ್. ಪ್ರೇಮ್ ಕುಮಾರ್. ಗಣಿಗುತ್ತಿಗೆ ಸಂಖ್ಯೆ: 2538, ಕಲ್ಲಹಳ್ಳಿ ಗ್ರಾಮ ಹೊಸಪೇಟೆ ತಾಲ್ಲೂಕು ಇವರ ಪರವಾಗಿ ಪರಿಹಾರಾತ್ಮಕ ನೆಡುತೋಪು ಬೆಳೆಸಲು ಈ ಕೆಳಕಂಡ ಷರತ್ತುಗಳೊಂದಿಗೆ ಅರಣ್ಯ ಇಲಾಖೆಗೆ ವರ್ಗಾಯಿಸಲು ಸರ್ಕಾರದ ಮಂಜೂರಾತಿಯನ್ನು ನೀಡಿ ಆದೇಶಿಸಿದೆ.

ಷರತ್ತುಗಳು:

1. ವರ್ಗಾವಣೆಯಾದ ಜಮೀನನ್ನು ಸರ್ಕಾರದ ಸುತ್ತೋಲೆ ಸಂಖ್ಯೆ: ಆರ್‌ಡಿ 27 ಎಲ್‌ಜಿಪಿ 2011, ದಿನಾಂಕ: 06.04.2011ರ ಕಂಡಿಕೆ 6ರಂತೆ ಕ್ರಮವಹಿಸುವುದು.
2. ವರ್ಗಾವಣೆ ಪಡೆದ ಇಲಾಖೆಗೆ ವರ್ಗಾಯಿಸಿದ ಜಮೀನಿನ ಅವಶ್ಯಕತೆ ಇಲ್ಲದೇ ಇದ್ದಲ್ಲಿ ಮರಳಿ ಕಂದಾಯ ಇಲಾಖೆಗೆ ವಾಪಸ್ಸು ಪಡೆಯತಕ್ಕದ್ದು.
3. ವರ್ಗಾವಣೆಯಾದ ಜಮೀನನ್ನು ಅರಣ್ಯ ಇಲಾಖೆಯು ನೆಡುತೋಪು ಬೆಳೆಸುವ ಉದ್ದೇಶಕ್ಕಾಗಿ ಮಾತ್ರ ಉಪಯೋಗಿಸತಕ್ಕದ್ದು.
4. ಪ್ರಸ್ತಾಪಿತ ಜಮೀನಿನಲ್ಲಿ ಜಾನುವಾರುಗಳು ಮೇಯುವಿಕೆಗೆ ಅವಕಾಶ ನೀಡತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಮಹಾಂತೇಗೌಡ ಎಸ್. ಎಲ್.

ಸರ್ಕಾರದ ಅಧೀನ ಕಾರ್ಯದರ್ಶಿ

ಕಂದಾಯ ಇಲಾಖೆ (ಭೂ ಮಂಜೂರಾತಿ–3)

PR. 403

SC. 25

ಕಂದಾಯ ಸಚಿವಾಲಯ

ತಿದ್ದೋಲೆ

ಸಂಖ್ಯೆ: ಕಂಇ 23 ಮುಅಬಿ 2014 ಬೆಂಗಳೂರು, ದಿನಾಂಕ: 06.06.2015

ರಾಜ್ಯದ ಮುಜರಾಯಿ ಇಲಾಖೆಗೆ ಸೇರಿದ ದೇವಸ್ಥಾನಗಳನ್ನು ಅಧಿಸೂಚಿತ ಸಂಸ್ಥೆಗಳ ಪಟ್ಟಿಯಲ್ಲಿ ಸೇರಿಸಿ ರಾಜ್ಯ ಪತ್ರದಲ್ಲಿ ಪ್ರಕಟಿಸಲಾಗಿರುವ ಸರ್ಕಾರದ ಆದೇಶ ಸಂಖ್ಯೆ: ಕಂಇ 87 ಮುಅಬಿ 2012 ದಿನಾಂಕ: 29.09.2012ರಲ್ಲಿ ದಕ್ಷಿಣ ಕನ್ನಡ ಜಿಲ್ಲೆ, ಸುಳ್ಯ ತಾಲ್ಲೂಕಿನ ಅಧಿಸೂಚಿತ ಸಂಸ್ಥೆಗಳ ಪಟ್ಟಿಯಲ್ಲಿನ ಪುಟ ಸಂಖ್ಯೆ: 288ರಲ್ಲಿ ಕ್ರಮ ಸಂಖ್ಯೆ: 27ರಲ್ಲಿ **"ಶ್ರೀ ವಿಷ್ಣುಮೂರ್ತಿ ದೇವಸ್ಥಾನ, ತಂತಿಗೋಡು ಗ್ರಾಮ, ಪುತ್ತೂರು ತಾಲ್ಲೂಕು, ದಕ್ಷಿಣ ಕನ್ನಡ ಜಿಲ್ಲೆ"** ಎಂದಿರುವುದನ್ನು **"ಶ್ರೀ ವಿಷ್ಣುಮೂರ್ತಿ ದೇವಸ್ಥಾನ, ಶಾಂತಿಗೋಡು ಗ್ರಾಮ, ಪುತ್ತೂರು ತಾಲ್ಲೂಕು, ದಕ್ಷಿಣ ಕನ್ನಡ ಜಿಲ್ಲೆ"** ಎಂದು ಸೇರಿಸಿ ಓದಿಕೊಳ್ಳತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಸಿ. ಟಿ. ಜಯರಾಮೇಗೌಡ

ಸರ್ಕಾರದ ಅಧೀನ ಕಾರ್ಯದರ್ಶಿ

ಕಂದಾಯ ಇಲಾಖೆ (ಮುಜರಾಯಿ)

PR. 404

SC. 25

ಕಂದಾಯ ಸಚಿವಾಲಯ

ತಿದ್ದೋಲೆ

ಸಂಖ್ಯೆ: ಕಂಇ 27 ಮುಅಬಿ 2015, ಬೆಂಗಳೂರು, ದಿನಾಂಕ: 06.06.2015

ರಾಜ್ಯದ ಮುಜರಾಯಿ ಇಲಾಖೆಗೆ ಸೇರಿದ ದೇವಸ್ಥಾನಗಳನ್ನು ಅಧಿಸೂಚಿತ ಸಂಸ್ಥೆಗಳ ಪಟ್ಟಿಯಲ್ಲಿ ಸೇರಿಸಿ ರಾಜ್ಯ ಪತ್ರದಲ್ಲಿ ಪ್ರಕಟಿಸಲಾಗಿರುವ ಸರ್ಕಾರದ ಆದೇಶ ಸಂಖ್ಯೆ: ಕಂಇ 87 ಮುಅಬಿ 2012 ದಿನಾಂಕ: 29.09.2012ರಲ್ಲಿ ದಕ್ಷಿಣ ಕನ್ನಡ ಜಿಲ್ಲೆ, ಸುಳ್ಯ ತಾಲ್ಲೂಕಿನ ಅಧಿಸೂಚಿತ ಸಂಸ್ಥೆಗಳ ಪಟ್ಟಿಯಲ್ಲಿನ ಪುಟ ಸಂಖ್ಯೆ: 290ರಲ್ಲಿ ಕ್ರಮ ಸಂಖ್ಯೆ: 11ರಲ್ಲಿ **"ಶ್ರೀ ಜಲದುರ್ಗಾ ದೇವಿ ದೇವಸ್ಥಾನ, ಬೆಳ್ಳಾರೆ ಗ್ರಾಮ, ಸುಳ್ಯ ತಾಲ್ಲೂಕು, ದಕ್ಷಿಣ ಕನ್ನಡ ಜಿಲ್ಲೆ"** ಎಂದಿರುವುದನ್ನು **"ಶ್ರೀ ಜಲದುರ್ಗಾ ದೇವಿ ದೇವಸ್ಥಾನ, ಪೆರುವಾಜೆ ಗ್ರಾಮ ಮತ್ತು ಅಂಚೆ ಸುಳ್ಯ ತಾಲ್ಲೂಕು, ದಕ್ಷಿಣ ಕನ್ನಡ ಜಿಲ್ಲೆ"** ಎಂದು ಸೇರಿಸಿ ಓದಿಕೊಳ್ಳತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಸಿ. ಟಿ. ಜಯರಾಮೇಗೌಡ

ಸರ್ಕಾರದ ಅಧೀನ ಕಾರ್ಯದರ್ಶಿ

ಕಂದಾಯ ಇಲಾಖೆ (ಮುಜರಾಯಿ)

PR. 405

SC. 25

ಕಂದಾಯ ಸಚಿವಾಲಯ

ವಿಷಯ: ಬೆಂಗಳೂರು ಗ್ರಾಮಾಂತರ ಜಿಲ್ಲೆ, ನೆಲಮಂಗಲ ತಾಲ್ಲೂಕು, ನಿಜಗಲ್ ಗ್ರಾಮದ ಶ್ರೀ ಮರಳು ಸಿದೇಶ್ವರ ದೇವಸ್ಥಾನವನ್ನು ಶ್ರೀ ಉದ್ಭಾನ ವೀರಭದ್ರ ದೇವಸ್ಥಾನದ ಉಪ ದೇವಸ್ಥಾನ ಎಂದು ಸೇರಿಸುವ ಬಗ್ಗೆ.

ಓದಲಾಗಿದೆ: ಆಯುಕ್ತರು, ಧಾರ್ಮಿಕ ದತ್ತಿ ಇಲಾಖೆ ಇವರ ಪತ್ರ ಸಂಖ್ಯೆ: ಎಡಿಎಂ 5 ಸಿಆರ್ 68/2014-15, ದಿನಾಂಕ: 24-04-2015

ಪ್ರಸ್ತಾವನೆ:

ಮೇಲೆ ಓದಲಾದ ಆಯುಕ್ತರು, ಧಾರ್ಮಿಕ ದತ್ತಿ ಇಲಾಖೆ ಇವರ ಪತ್ರ ದಿನಾಂಕ: 24-04-2015ರಲ್ಲಿ ಬೆಂಗಳೂರು ಗ್ರಾಮಾಂತರ ಜಿಲ್ಲೆ, ನೆಲಮಂಗಲ ತಾಲ್ಲೂಕು, ಸೋಂಪುರ ಹೋಬಳಿ, ದೇವರ ಹೊಸಹಳ್ಳಿ ಹಳೇ ನಿಜಗಲ್ ಗ್ರಾಮದ ಶ್ರೀ ಉದ್ಭಾನ ವೀರಭದ್ರಸ್ವಾಮಿ ದೇವಸ್ಥಾನವು ಧಾರ್ಮಿಕ ದತ್ತಿ ಇಲಾಖೆಗೆ ಒಳಪಟ್ಟಿರುವ ಪ್ರವರ್ಗ 'ಸಿ' ಅಧಿಸೂಚಿತ ಸಂಸ್ಥೆಯಾಗಿರುತ್ತದೆ. ಈ ದೇವಸ್ಥಾನದ ಪಕ್ಕದಲ್ಲಿಯೆ ಬಲಭಾಗದಲ್ಲಿ ಶ್ರೀ ಮರಳು ಸಿದ್ದೇಶ್ವರಸ್ವಾಮಿ ದೇವಾಲಯವಿದ್ದು, ಇದನ್ನು ಶ್ರೀ ಮರಳು ಸಿದ್ದೇಶ್ವರಸ್ವಾಮಿ ಮಠವೆಂದು ನಾಮಫಲಕಗಳನ್ನು ಅಳವಡಿಸಿಕೊಂಡು ಈ ದೇವಾಲಯದ ಹೆಸರಿನಲ್ಲಿ ಕೆಲವು ಖಾಸಗಿ ವ್ಯಕ್ತಿಗಳು ಸೇವಾ ಟ್ರಸ್ಟ್‌ನ್ನು ರಚಿಸಿಕೊಂಡು ಸಾರ್ವಜನಿಕರಿಂದ/ಭಕ್ತಾಧಿಗಳಿಂದ ಹಣ ಸಂಗ್ರಹಿಸುತ್ತಿರುವುದು ತಿಳಿದು ಬಂದಿದೆ. ಶ್ರೀ ಉದ್ಭಾನ ವೀರಭದ್ರಸ್ವಾಮಿ ದೇವಾಲಯಕ್ಕೆ ಸೇರಿದ ಜಾಗದಲ್ಲಿ ಶ್ರೀ ಮರಳು ಸಿದ್ದೇಶ್ವರಸ್ವಾಮಿ ದೇವಾಲಯವನ್ನು ನಿರ್ಮಿಸಿದ್ದು, ಶ್ರೀ ಮರಳು ಸಿದೇಶ್ವರಸ್ವಾಮಿ ದೇವಾಲಯವು ಶ್ರೀ ಉದ್ಭಾನ ವೀರಭದ್ರಸ್ವಾಮಿ ದೇವಾಲಯದ ಉಪ ದೇವಾಲಯವೆಂದು ಕಂಡುಬಂದಿದ್ದು, ಕೂಡಲೇ ಶ್ರೀ ಮರಳು ಸಿದ್ದೇಶ್ವರಸ್ವಾಮಿ ದೇವಾಲಯವನ್ನು ಇಲಾಖಾ ವಶಕ್ಕೆ ಪಡೆಯುವಂತೆ ಜಿಲ್ಲಾಧಿಕಾರಿಗಳು ಹಾಗೂ ಸಹಾಯಕ ಆಯುಕ್ತರು ತಿಳಿಸಿರುತ್ತಾರೆ.

ಈ ಬಗ್ಗೆ ಕಛೇರಿಯ ಆಗಮ ಪಂಡಿತರು ಸಲ್ಲಿಸಿರುವ ಸ್ಥಳ ಪರಿಶೀಲನಾ ವರದಿಯಲ್ಲಿ ಸದರಿ ದೇವಸ್ಥಾನವು ಕ್ರಿ.ಶ.1288 (ಎ.ಡಿ) ಆಕಾಲದಲ್ಲಿ ಶಿವ ದೇವಾಲಯ ಮತ್ತು ವೀರಭದ್ರ ದೇವಾಲಯಗಳನ್ನು ಹೊಯ್ಸಳ ಅರಸರು ನಿರ್ಮಿಸಿ, ಪ್ರತಿಷ್ಠಾಪಿಸಿರುತ್ತಾರೆ. ಈ ದೇವಾಲಯಕ್ಕೆ ದೇವಾದಾಯ ಇನಾಂ ಭೂಮಿಯಿದ್ದು, ಸರ್ವೆ ನಂ. 118ರಲ್ಲಿ ಹಳೆ ನಿಜಗಲ್ ಗ್ರಾಮ, ಶ್ರೀ ವೀರಭದ್ರ ದೇವಾಲಯವೆಂದು 1969-70ರ ಪಹಣಿ ಪತ್ರಿಕೆಯಲ್ಲಿ ನಮೂದಾಗಿರುತ್ತದೆ. ಅಧಿಸೂಚಿತ ಸಂಸ್ಥೆಯಾದ ಶ್ರೀ ಉದ್ಭಾನ ವೀರಭದ್ರೇಶ್ವರ ಸ್ವಾಮಿ ದೇವಾಲಯಕ್ಕೆ ಹೊಂದಿಕೊಂಡಂತೆ ಇತರ ಉಪ ದೇವಾಲಯಗಳಿದ್ದು, ಈ ದೇವಾಲಯಗಳು ಅಧಿಸೂಚಿತ ಪಟ್ಟಿಗೆ ಸೇರಿರುವುದಿಲ್ಲ. ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ಅಧಿನಿಯಮ 1997ರ ಕಲಂ 2(27) ಅನ್ವಯ ಈ ಉಪ ದೇವಾಲಯಗಳನ್ನು ಶ್ರೀ ಉದ್ಭಾನ ವೀರಭದ್ರೇಶ್ವರಸ್ವಾಮಿ ದೇವಾಲಯದ ಉಪ ದೇವಾಲಯಗಳೆಂದು ಅಧಿಸೂಚನೆ ಹೊರಡಿಸಬಹುದಾಗಿದೆ. ಎಂದು ಆಗಮ ಪಂಡಿತರು ಹಾಗೂ ಕಾನೂನು ಸಮಾಲೋಚಕರು ಸಲಹೆ ನೀಡಿರುತ್ತಾರೆ.

ಬೆಂಗಳೂರು ಗ್ರಾಮಾಂತರ ಜಿಲ್ಲಾಧಿಕಾರಿ ಹಾಗೂ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಧಾರ್ಮಿಕ ದತ್ತಿ ಇಲಾಖೆಯ ಸಹಾಯಕ ಆಯುಕ್ತರ ವರದಿಗಳ ಮೇರೆಗೆ ಕಛೇರಿಯ ಆಗಮ ಪಂಡಿತರುಗಳ ಸ್ಥಳ ತನಿಖಾ ವರದಿ ಹಾಗೂ ಕಾನೂನು ಸಮಾಲೋಚಕರ ಅಭಿಪ್ರಾಯದ ಮೇರೆಗೆ ಬೆಂಗಳೂರು ಗ್ರಾಮಾಂತರ ಜಿಲ್ಲೆ, ನೆಲಮಂಗಲ ತಾಲ್ಲೂಕು, ಸೋಂಪುರ ಹೋಬಳಿ ದೇವರ ಹೊಸಹಳ್ಳಿ ಹಳೇ ನಿಜಗಲ್ ಗ್ರಾಮದ ಶ್ರೀ ಉದ್ಧಾನ ವೀರಭದ್ರಸ್ವಾಮಿ ದೇವಾಲಯದ ಉಪ ದೇವಾಲಯವಾದ ಶ್ರೀ ಮರಳು ಸಿದ್ದೇಶ್ವರಸ್ವಾಮಿ ದೇವಾಲಯವನ್ನು ಶ್ರೀ ಉದ್ಧಾನ ವೀರಭದ್ರ ದೇವಾಲಯದ ಉಪ ದೇವಾಲಯವೆಂದು ಘೋಷಿಸಿ ಅಧಿಸೂಚನೆ ಹೊರಡಿಸುವಂತೆ ಕೋರಿ ಪ್ರಸ್ತಾವನೆ ಸಲ್ಲಿಸಿರುತ್ತಾರೆ.

ಆಯುಕ್ತರು, ಧಾರ್ಮಿಕ ದತ್ತಿ ಇಲಾಖೆ ಇವರ ಪ್ರಸ್ತಾವನೆಯನ್ನು ಸರ್ಕಾರವು ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಕಂಇ 28 ಮುಅಬಿ 2015, ಬೆಂಗಳೂರು, ದಿನಾಂಕ: 06ನೇ ಜೂನ್, 2015.

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಬೆಂಗಳೂರು ಗ್ರಾಮಾಂತರ ಜಿಲ್ಲೆ, ನೆಲಮಂಗಲ ತಾಲ್ಲೂಕು ಸೋಂಪುರ ಹೋಬಳಿ, ದೇವರ ಹೊಸಹಳ್ಳಿ ಹಳೇ ನಿಜಗಲ್ ಗ್ರಾಮದ ಶ್ರೀ ಮರಳು ಸಿದ್ದೇಶ್ವರ ದೇವಸ್ಥಾನವನ್ನು ಶ್ರೀ ಉದ್ಧಾನ ವೀರಭದ್ರಸ್ವಾಮಿ ದೇವಸ್ಥಾನದ ಉಪ ದೇವಸ್ಥಾನ ಎಂದು ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ಅಧಿನಿಯಮ 1997ರ ಕಲಂ 2(27)ಅನ್ವಯ ಅಧಿಸೂಚಿತ ಪಟ್ಟಿಯಲ್ಲಿ ಸೇರಿಸಿಕೊಳ್ಳಲು ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಸಿ. ಟಿ. ಜಯರಾಮೇಗೌಡ

PR. 406 ಸರ್ಕಾರದ ಅಧೀನ ಕಾರ್ಯದರ್ಶಿ

SC. 25 ಕಂದಾಯ ಇಲಾಖೆ (ಮುಜರಾಯಿ)

ಕಂದಾಯ ಸಚಿವಾಲಯ

ವಿಷಯ: ಬೆಂಗಳೂರು ನಗರ ದಕ್ಷಿಣ ತಾಲ್ಲೂಕು, ಮಡಿವಾಳ ಗ್ರಾಮದ ಶ್ರೀ ಮಾರಮ್ಮ ದೇವಸ್ಥಾನವನ್ನು ಅಧಿಸೂಚಿತ ಪಟ್ಟಿಗೆ ಸೇರಿಸುವ ಕುರಿತು.

ಓದಲಾಗಿದೆ: ಆಯುಕ್ತರು, ಧಾರ್ಮಿಕ ದತ್ತಿ ಇಲಾಖೆ ಇವರ ಪತ್ರ ಸಂಖ್ಯೆ: ಎಡಿಎಂ 8 ಸಿಆರ್ 150/2010–11 ದಿನಾಂಕ: 23–04–2015

ಪ್ರಸ್ತಾವನೆ:

ಮೇಲೆ ಓದಲಾದ ಆಯುಕ್ತರು, ಧಾರ್ಮಿಕ ದತ್ತಿ ಇಲಾಖೆ ಇವರ ದಿನಾಂಕ: 23–04–2015ರ ಪತ್ರದಲ್ಲಿ ಬೆಂಗಳೂರು ನಗರ, ದಕ್ಷಿಣ ತಾಲ್ಲೂಕು, ಮಡಿವಾಳ ಗ್ರಾಮದಲ್ಲಿರುವ ಶ್ರೀ ಮಾರಮ್ಮ ದೇವಾಲಯ ಮತ್ತು ದೇವಾಲಯಕ್ಕೆ ಸೇರಿದ ಚರ–ಸ್ಥಿರಾಸ್ತಿಗಳನ್ನು ಸರ್ಕಾರದ ವಶಕ್ಕೆ ಪಡೆಯುವಂತೆ ಭಕ್ತಾಧಿಗಳು ಹಾಗೂ ಗ್ರಾಮಸ್ಥರು ದೂರು ಅರ್ಜಿಯನ್ನು ಸಲ್ಲಿಸಿರುತ್ತಾರೆ. ಸದರಿ ದೂರಿನ ಕುರಿತು ಜಿಲ್ಲಾಧಿಕಾರಿ, ಬೆಂಗಳೂರು ನಗರ ಜಿಲ್ಲೆ ಇವರು ನೀಡಿರುವ ವರದಿಯಲ್ಲಿ ಶ್ರೀ ಮಾರಮ್ಮ ದೇವಸ್ಥಾನವನ್ನು ಸರ್ವೆ ನಂ. 50ರ ಜಾಗದಲ್ಲಿ ನಿರ್ಮಿಸಲಾಗಿರುತ್ತದೆ. ಈ ಜಾಗವು ಶ್ರೀ ಚನ್ನಾರೆಡ್ಡಿ ಇವರಿಗೆ ಸೇರಿದ್ದು, ದೇವಾಲಯಕ್ಕಾಗಿ ಸ್ವಲ್ಪ ಜಾಗವನ್ನು ದೇವಾಲಯಕ್ಕೆ ಬಿಟ್ಟುಕೊಟ್ಟಿರುತ್ತಾರೆ. ಸದರಿ ಜಾಗದಲ್ಲಿ ಅಂಗಡಿ/ಮಳಿಗೆ ಮತ್ತು ಮನೆಗಳನ್ನು ನಿರ್ಮಿಸಿದ್ದು, ಇವುಗಳಿಂದ ಬರುವ ಬಾಡಿಗೆ, ಹುಂಡಿ, ಸೇವಾರ್ಥ, ಕಾಣಿಕೆಗಳನ್ನು ಹಾಗೂ ಒಡವೆ ಇತ್ಯಾದಿಗಳನ್ನು ಯಾವುದೇ ಲೆಕ್ಕ ಪತ್ರ ನಿರ್ವಹಿಸದೇ ದೇವಸ್ಥಾನದ ಅಧ್ಯಕ್ಷರಾದ ಶ್ರೀ ಈರಪ್ಪ, ಕಾರ್ಯದರ್ಶಿ ಶ್ರೀ ಆರ್. ವೆಂಕಟೇಶ್ ಹಾಗೂ ಅರ್ಚಕರಾದ ಶ್ರೀ ಪವನಕುಮಾರ್ ಎಂಬುವವರು ದುರುಪಯೋಗಪಡಿಸಿಕೊಂಡಿರುವುದು ಮೇಲ್ನೋಟಕ್ಕೆ ಸಾಬೀತಾಗಿರುತ್ತದೆ. ಯಾವ ಪ್ರಮಾಣದಲ್ಲಿ ಹಣ ದುರುಪಯೋಗವಾಗಿದೆ ಎಂಬ ಬಗ್ಗೆ ದೇವಾಲಯದಲ್ಲಿ ಯಾವುದೇ ಲೆಕ್ಕ ಪತ್ರಗಳನ್ನು ನಿರ್ವಹಿಸದೇ ಮತ್ತು ಬ್ಯಾಂಕ್‌ನ ನಲ್ಲಿ ಖಾತೆ ತೆರೆದು ವ್ಯವಹರಿಸದೇ ಇರುವುದರಿಂದ ನಿಖರವಾಗಿ ಮಾಹಿತಿ ಲಭ್ಯವಿರುವುದಿಲ್ಲವೆಂದು ವರದಿಯಲ್ಲಿ ತಿಳಿಸಿರುತ್ತಾರೆ.

ಸದರಿ ದೇವಸ್ಥಾನವನ್ನು ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳೂ ಮತ್ತು ಧರ್ಮಾದಾಯ ದತ್ತಿಗಳ ಅಧಿನಿಯಮ 1997ರ ಕಾಯ್ದೆಯ ಸೆಕ್ಷನ್ 42 ಮತ್ತು 43 ರನ್ವಯ ಸರ್ಕಾರದ ವಶಕ್ಕೆ ಏಕೆ ಪಡೆಯಬಾರದು? ಎಂಬ ಬಗ್ಗೆ ಒಂದು ತಿಂಗಳೊಳಗಾಗಿ ಲಿಖಿತ ಸಮಜಾಯಿಷಿಯನ್ನು ದಾಖಲೆಗಳೊಂದಿಗೆ ಸಲ್ಲಿಸುವಂತೆ ತಿಳಿಸಿ, ದೇವಸ್ಥಾನದ ಅಧ್ಯಕ್ಷರು, ಕಾರ್ಯದರ್ಶಿ ಹಾಗೂ ಅರ್ಚಕರಿಗೆ ಆಯುಕ್ತಾಲಯದಿಂದ ದಿನಾಂಕ: 25.02.2015ರಂದು ಕಾರಣ ಕೇಳುವ ನೋಟೀಸ್ ಜಾರಿ ಮಾಡಲಾಗಿದೆ. ಸದರಿಯವರುಗಳು ಈವರೆಗೆ ಯಾವುದೇ ಲಿಖಿತ ಸಮಜಾಯಿಸಿಯನ್ನು ನೀಡಿರುವುದಿಲ್ಲ. ಆದುದರಿಂದ ಸದರಿ ದೇವಸ್ಥಾನವನ್ನು ಕಾಯ್ದೆ ಸೆಕ್ಷನ್ 42 ಮತ್ತು 43 ರನ್ವಯ ಘೋಷಿತ ಸಂಸ್ಥೆಯನ್ನಾಗಿ ಘೋಷಿಸಿ ಆದೇಶ ಹೊರಡಿಸುವಂತೆ ಆಯುಕ್ತರು, ಧಾರ್ಮಿಕ ದತ್ತಿ ಇಲಾಖೆ ಇವರು ಕೋರಿರುತ್ತಾರೆ.

ಆಯುಕ್ತರು, ಧಾರ್ಮಿಕ ದತ್ತಿ ಇಲಾಖೆ ಇವರ ಪ್ರಸ್ತಾವನೆಯನ್ನು ಸರ್ಕಾರವು ಪರಿಶೀಲಿಸಿ, ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಕಂಇ 23 ಮುಅಬಿ 2015, ಬೆಂಗಳೂರು, ದಿನಾಂಕ: 6ನೇ ಜೂನ್, 2015.

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಬೆಂಗಳೂರು ನಗರ, ದಕ್ಷಿಣ ತಾಲ್ಲೂಕು, ಮಡಿವಾಳ ಗ್ರಾಮದ ಶ್ರೀ ಮಾರಮ್ಮ ದೇವಾಲಯವನ್ನು ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ಅಧಿನಿಯಮ 1997 ರ ಕಾಯ್ದೆ ಸೆಕ್ಷನ್ 42 ಮತ್ತು 43ರನ್ವಯ ಘೋಷಿತ ಸಂಸ್ಥೆಯನ್ನಾಗಿ ಘೋಷಿಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಸಿ. ಟಿ. ಜಯರಾಮೇಗೌಡ

PR. 407 ಸರ್ಕಾರದ ಅಧೀನ ಕಾರ್ಯದರ್ಶಿ

SC. 25 ಕಂದಾಯ ಇಲಾಖೆ (ಮುಜರಾಯಿ)

ಪಶುಸಂಗೋಪನೆ ಮತ್ತು ಮೀನುಗಾರಿಕೆ ಸಚಿವಾಲಯ

ಸೇರ್ಪಡೆ

ಸಂಖ್ಯೆ: ಪಸಂಮೀ 99 ಮೀಇಇ 2015 ಬೆಂಗಳೂರು, ದಿನಾಂಕ: 19-06-2015.

ಆದೇಶ ಸಂಖ್ಯೆ: ಪಸಂಮೀ/125/ಮೀಇಇ/2013, ದಿನಾಂಕ: 21-06-2014 ಅನುಬಂಧ-1ರಲ್ಲಿರುವ ಅಂಶ-6ನ್ನು ಮುಂದುವರೆಸುತ್ತಾ, ಮೀನುಗಾರಿಕೆ ಸಹಕಾರ ಸಂಘಗಳ ಆರ್ಥಿಕ ಸ್ಥಿತಿಯನ್ನು ದೃಢೀಕರಿಸಲು ಬ್ಯಾಂಕ್ ಖಾತೆಯ ಪಾಸ್ ಪುಸ್ತಕದ ದೃಢೀಕೃತ ಪ್ರತಿ ಪ್ರಕಾರ ಬ್ಯಾಂಕ್ ಖಾತೆಯಲ್ಲಿ ಈ ಕೆಳಕಂಡ ಮೂಲಗಳಿಂದ ಹಣ ಸ್ವೀಕೃತಿ ಆಗಿದ್ದಲ್ಲಿ, ಮಾತ್ರ ಒಪ್ಪಿಕೊಳ್ಳತಕ್ಕದ್ದು.

(1) ಸದಸ್ಯರಿಂದ ಹೆಚ್ಚುವರಿಯಾಗಿ ಷೇರು ಬಂಡವಾಳದ ಮುಖಾಂತರ

(2) ಸರ್ಕಾರದ ವಾಣಿಜ್ಯ ಬ್ಯಾಂಕ್‌ಗಳು/ಸಹಕಾರಿ ಬ್ಯಾಂಕ್‌ಗಳು/ಗ್ರಾಮೀಣ ಬ್ಯಾಂಕ್‌ಗಳ ಸಾಲದ ಮುಖಾಂತರ.

(3) ಸಂಘದ ಸದಸ್ಯರ ಮಧ್ಯ "ಸ್ವಸಹಾಯ ಸಂಘ"ಗಳನ್ನು ರಚಿಸಿ ತನ್ನ ಸದಸ್ಯರ "ಸ್ವಸಹಾಯ ಗುಂಪುಗಳಿಂದ" ಸಾಲ ಪಡೆದುಕೊಳ್ಳುವ ಮುಖಾಂತರ

ಯಾವುದೇ ಕಾರಣಕ್ಕೂ ಮೀನುಗಾರರ ಸಹಕಾರ ಸಂಘವು ಖಾಸಗಿ ಬಂಡವಾಳದಾರರಿಂದಾಗಲಿ, ಮೀನು ವರ್ತಕರಿಂದಾಗಲಿ ಅಥವಾ ಇನ್ನಿತರ ಖಾಸಗಿ ಸದಸ್ಯರಿಂದಾಗಲಿ ಠೇವಣಿ ಪಡೆದು ದುಡಿಯುವ ಬಂಡವಾಳವನ್ನಾಗಿ ತೋರಿಸುವುದನ್ನು ಒಪ್ಪಿಕೊಳ್ಳುವಂತದ್ದಲ್ಲ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ರಶ್ಮಿ ಶಿವಶಂಕರ ಪೋಳ

ಸರ್ಕಾರದ ಅಧೀನ ಕಾರ್ಯದರ್ಶಿ

ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ (ಮೀನುಗಾರಿಕೆ)

PR. 408

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯ

ವಿಷಯ: ಶ್ರೀಮತಿ ಸುಧಾಸ್ವಾಮಿ, ಚೀಫ್ ಸೈಂಟಿಫಿಕ್ ಆಫೀಸರ್, ಶ್ರೀ ಪಿ. ಮೊಹಮ್ಮದ್ ಸೈಫುದ್ದೀನ್ ರುಬ್ಬಾನಿ ಸೈಂಟಿಫಿಕ್ ಆಫೀಸರ್ ಹಾಗೂ ಶ್ರೀ ಗಿರೀಶ್ ಎಂ. ಕೆ. ಜ್ಯೂನಿಯರ್ ಸೈಂಟಿಫಿಕ್ ಆಫೀಸರ್ ಔಷಧ ಪರೀಕ್ಷಾ ಪ್ರಯೋಗಾಲಯ ಬೆಂಗಳೂರು, ಇವರ ಅಮಾನತ್ತನ್ನು ತೆರವುಗೊಳಿಸಿ ಸೇವೆಗೆ ಮರುಸ್ಥಾಪಿಸುವ ಬಗ್ಗೆ.

ಓದಲಾಗಿದೆ:

1. ಪತ್ರ ಸಂಖ್ಯೆ: Compt/UPLOK-2/Misc-735/2014 Dated: 13.08.2014.
2. ಔಷಧ ನಿಯಂತ್ರಕರ ಪತ್ರ ಸಂಖ್ಯೆ: ಔನಿಇ/22/ಡಿಸಿಪಿ 2014-15 ದಿನಾಂಕ: 08.09.2014.
3. ಸರ್ಕಾರದ ಆದೇಶ ಸಂಖ್ಯೆ: ಆಕುಕ 181 ಐಎಂಎಂ 2014 ದಿನಾಂಕ: 30.09.2014.
4. ಸರ್ಕಾರದ ಆದೇಶ ಸಂಖ್ಯೆ: ಆಕುಕ 181 ಐಎಂಎಂ 2014 ದಿನಾಂಕ: 09.10.2014 ಮತ್ತು 17.11.2014.
5. ಪತ್ರ ಸಂಖ್ಯೆ: Compt/UPLOK/BCD/1365/2015 Dated: 20.04.2015.
6. ಔಷಧ ನಿಯಂತ್ರಕರ ಪತ್ರ ಸಂಖ್ಯೆ: ಔನಿಇ/595/ಸಿಬ್ಬಂದಿ/2014-15 ದಿನಾಂಕ: 23/04/2015

ಪ್ರಸ್ತಾವನೆ:

ಮಾನ್ಯ ಉಪ ಲೋಕಾಯುಕ್ತ ಕರ್ನಾಟಕ ಬೆಂಗಳೂರು ರವರು ಮೇಲೆ ಓದಲಾದ ಕ್ರಮ ಸಂಖ್ಯೆ (1)ರ ಪತ್ರದಲ್ಲಿ ಶ್ರೀಮತಿ ಸುಧಾಸ್ವಾಮಿ ಚೀಫ್ ಸೈಂಟಿಫಿಕ್ ಆಫೀಸರ್, ಶ್ರೀ ಮೊಮಮ್ಮದ್ ಸೈಫುದ್ದೀನ್ ರುಬ್ಬಾನಿ ಸೈಂಟಿಫಿಕ್ ಆಫೀಸರ್ ಹಾಗೂ ಶ್ರೀ ಗಿರೀಶ್ ಎಂ. ಕೆ ಜ್ಯೂನಿಯರ್ ಸೈಂಟಿಫಿಕ್ ಆಫೀಸರ್ ಔಷಧ ಪರೀಕ್ಷಾ ಪ್ರಯೋಗಾಲಯ ಬೆಂಗಳೂರು ಇವರುಗಳು ಕರ್ತವ್ಯ ಲೋಪ ಎಸಗಿರುವ ಹಿನ್ನೆಲೆಯಲ್ಲಿ ನಿಯಮಾನುಸಾರ ಕ್ರಮ ವಹಿಸುವಂತೆ ತಿಳಿಸಿರುವ ಹಿನ್ನೆಲೆಯಲ್ಲಿ ಸದರಿ ಅಧಿಕಾರಿಗಳ ವಿರುದ್ಧ ಔಷಧ ನಿಯಂತ್ರಣ ಇಲಾಖೆಯು ತನಿಖೆ ನಡೆಸಿ ಸದರಿ ಅಧಿಕಾರಿಗಳು ಕರ್ತವ್ಯ ಲೋಪ ಎಸಗಿರುವ ಹಿನ್ನೆಲೆಯಲ್ಲಿ ಸದರಿ ಅಧಿಕಾರಿಗಳನ್ನು ಅಮಾನತ್ತುಗೊಳಿಸಿ ಇವರುಗಳ ವಿರುದ್ಧ ಇಲಾಖಾ ವಿಚಾರಣೆ ನಡೆಸಲು ಮೇಲೆ ಓದಲಾದ ಕ್ರಮ ಸಂಖ್ಯೆ (2)ರ ಪತ್ರದಲ್ಲಿ ಔಷಧ ನಿಯಂತ್ರಕರು ಸರ್ಕಾರಕ್ಕೆ ಶಿಫಾರಸ್ಸು ಮಾಡಿರುತ್ತಾರೆ.

ಶ್ರೀಮತಿ ಸುಧಾಸ್ವಾಮಿ ಚೀಫ್ ಸೈಂಟಿಫಿಕ್ ಆಫೀಸರ್, ಶ್ರೀ ಮೊಹಮ್ಮದ್ ಸೈಫುದ್ದೀನ್ ರುಬ್ಬಾನಿ ಸೈಂಟಿಫಿಕ್ ಆಫೀಸರ್ ಹಾಗೂ ಶ್ರೀ ಗಿರೀಶ್ ಎಂ. ಕೆ. ಜ್ಯೂನಿಯರ್ ಸೈಂಟಿಫಿಕ್ ಆಫೀಸರ್ ಔಷಧ ಪರೀಕ್ಷಾ ಪ್ರಯೋಗಾಲಯ ಬೆಂಗಳೂರು ಇವರುಗಳು ಕರ್ತವ್ಯ ಲೋಪ ಎಸಗಿರುವುದು ಮೇಲ್ನೋಟಕ್ಕೆ ಸಾಬೀತಾದ ಹಿನ್ನೆಲೆಯಲ್ಲಿ ಮೇಲೆ ಓದಲಾದ ಕ್ರಮ ಸಂಖ್ಯೆ (3)ರ ಆದೇಶದಲ್ಲಿ ಸದರಿ ಅಧಿಕಾರಿಗಳನ್ನು ಸೇವೆಯಿಂದ ಅಮಾನತ್ತುಗೊಳಿಸಿದೆ. ತದನಂತರ ಮೇಲೆ ಓದಲಾದ ಕ್ರಮ ಸಂಖ್ಯೆ (4) ರ ಆದೇಶದಲ್ಲಿ ಸದರಿ ಅಧಿಕಾರಿಗಳ ವಿರುದ್ಧ ಇಲಾಖಾ ವಿಚಾರಣೆ ನಡೆಸಲು ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿ 1957ರ ನಿಯಮ 14ಎ ರನ್ವಯ ಪ್ರಕರಣವನ್ನು ಮಾನ್ಯ ಕರ್ನಾಟಕ ಲೋಕಾಯುಕ್ತ ರವರಿಗೆ ವಹಿಸಲಾಗಿದೆ.

ಶ್ರೀಮತಿ ಸುಧಾಸ್ವಾಮಿ ಚೀಫ್ ಸೈಂಟಿಫಿಕ್ ಆಫೀಸರ್, ಶ್ರೀ ಮೊಹಮ್ಮದ್ ಸೈಫುದ್ದೀನ್ ರುಬ್ಬಾನಿ ಸೈಂಟಿಫಿಕ್ ಆಫೀಸರ್ ಹಾಗೂ ಶ್ರೀ ಗಿರೀಶ್ ಎಂ. ಕೆ. ಜ್ಯೂನಿಯರ್ ಸೈಂಟಿಫಿಕ್ ಆಫೀಸರ್ ಔಷಧ ಪರೀಕ್ಷಾ ಪ್ರಯೋಗಾಲಯ ಬೆಂಗಳೂರು ಇವರುಗಳು ಇಲಾಖಾ ಮುಖ್ಯಸ್ಥರಿಗೆ ಮತ್ತು ಸರ್ಕಾರಕ್ಕೆ ಮನವಿ ಸಲ್ಲಿಸಿ ಇವರುಗಳ ಅಮಾನತ್ತನ್ನು ತೆರವುಗೊಳಿಸಿ ಸೇವೆಗೆ ಮುರುಸ್ಥಾಪಿಸುವಂತೆ ದಿನಾಂಕ: 27-11-2014, 17.12.2014 ಮತ್ತು 08.12.2014ರಲ್ಲಿ ಕೋರಿದ್ದರು, ಈ ಬಗ್ಗೆ ದಿನಾಂಕ: 11.03.2015ರ ಸರ್ಕಾರಿ ಪತ್ರದಲ್ಲಿ ನಿಬಂಧಕರು ಕರ್ನಾಟಕ ಲೋಕಾಯುಕ್ತ ಇವರ ಅಭಿಪ್ರಾಯವನ್ನು ಕೋರಲಾಗಿತ್ತು.

ಸದರಿ ಅಧಿಕಾರಿಗಳನ್ನು ಸೇವೆಗೆ ಮರುಸ್ಥಾಪಿಸುವ ಬಗ್ಗೆ ಸರ್ಕಾರದ ಹಂತದಲ್ಲಿಯೇ ಕ್ರಮವಹಿಸಬಹುದೆಂದು ಮಾನ್ಯ ಕರ್ನಾಟಕ ಉಪಲೋಕಾಯುಕ್ತ ಬೆಂಗಳೂರು ರವರು ಮೇಲೆ ಓದಲಾದ ಕ್ರಮ ಸಂಖ್ಯೆ: (5)ರ ಪತ್ರದಲ್ಲಿ ತಿಳಿಸಿರುತ್ತಾರೆ.

ಮೇಲೆ ಓದಲಾದ ಕ್ರಮ ಸಂಖ್ಯೆ (6)ರ ಪತ್ರದಲ್ಲಿ ಶ್ರೀಮತಿ ಸುಧಾಸ್ವಾಮಿ ಚೀಫ್ ಸೈಂಟಿಫಿಕ್ ಆಫೀಸರ್, ಶ್ರೀ ಮೊಹಮ್ಮದ್ ಸೈಫೂದ್ದೀನ್ ರುಬ್ಬಾನಿ ಸೈಂಟಿಫಿಕ್ ಆಫೀಸರ್ ಹಾಗೂ ಶ್ರೀ ಗಿರೀಶ್ ಎಂ. ಕೆ ಜ್ಯೂನಿಯರ್ ಸೈಂಟಿಫಿಕ್ ಆಫೀಸರ್ ಔಷಧ ಪರೀಕ್ಷಾ ಪ್ರಯೋಗಾಲಯ ಬೆಂಗಳೂರು ಇವರುಗಳು ಅಮಾನತ್ತಿನಲ್ಲಿ 06 ತಿಂಗಳ ಅವಧಿಯನ್ನು ಪೂರ್ಣಗೊಳಿಸಿರುವುದರಿಂದ, ಇಲಾಖಾ ವಿಚಾರಣೆ ಪ್ರಾರಂಭವಾಗದಿರುವುದರಿಂದ, ಜೀವನಾಂಶ ಭತ್ಯೆಯನ್ನು ಶೇ.50 ರಿಂದ ಶೇ. 75ಕ್ಕೆ ಹೆಚ್ಚಿಸಬೇಕಾಗಬಹುದಾದ ಸಾಧ್ಯತೆ ಇದ್ದು, ಆಡಳಿತಾತ್ಮಕ ದೃಷ್ಟಿಯಿಂದ ಸದರಿಯವರುಗಳನ್ನು ಸೇವೆಯಲ್ಲಿ ಪುನರ್ ಸ್ಥಾಪಿಸುವುದು ಸಮಂಜಸವೆಂದು ಔಷಧ ನಿಯಂತ್ರಕರು ಸರ್ಕಾರಕ್ಕೆ ಶಿಫಾರಸ್ಸು ಮಾಡಿರುತ್ತಾರೆ. ಸರ್ಕಾರವು ಔಷಧ ನಿಯಂತ್ರಕರ ಪ್ರಸ್ತಾವನೆಯನ್ನು ಕೂಲಂಕೂಷವಾಗಿ ಪರಿಶೀಲಿಸಿ, ಸದರಿ ಅಧಿಕಾರಿಗಳ ಅಮಾನತ್ತನ್ನು ತೆರವುಗೊಳಿಸಿ ಸೇವೆಗೆ ಮರುಸ್ಥಾಪಿಸಲು ನಿರ್ಧರಿಸಿ ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಆಕುಕ 181 ಐಎಂಎಂ 2014 ಬೆಂಗಳೂರು ದಿನಾಂಕ: 16.06.2015

ಪ್ರಸ್ತಾವನೆಯ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಶ್ರೀಮತಿ ಸುಧಾಸ್ವಾಮಿ ಚೀಫ್ ಸೈಂಟಿಫಿಕ್ ಆಫೀಸರ್, ಶ್ರೀ ಮೊಹಮ್ಮದ್ ಸೈಫುದ್ಧೀನ ರುಬ್ಬಾನಿ ಸೈಂಟಿಫಿಕ್ ಆಫೀಸರ್ ಹಾಗೂ ಶ್ರೀ ಗಿರೀಶ್ ಎಂ.ಕೆ. ಜ್ಯೂನಿಯರ್ ಸೈಂಟಿಫಿಕ್ ಆಫೀಸರ್ ಔಷಧ ಪರೀಕ್ಷಾ ಪ್ರಯೋಗಾಲಯ ಬೆಂಗಳೂರು ಇವರುಗಳ ಅಮಾನತ್ತನ್ನು ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) 1957ರ ನಿಯಮ 10 5) (ಸಿ) ರನ್ವಯ ತೆರವುಗೊಳಿಸಿ, ಇಲಾಖಾ ವಿಚಾರಣಾ ಕಾಯ್ದಿರಿಸಿ, ಸೇವೆಗೆ ಪುನರ್ ಸ್ಥಾಪಿಸಲಾಗಿದೆ.

ಮುಂದುವರೆದು ಸದರಿ ಅಧಿಕಾರಿಗಳನ್ನು ಈ ಕೆಳಕಂಡಂತೆ ತಕ್ಷಣದಿಂದ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ ಸ್ಥಳ ನಿಯುಕ್ತಿಗೊಳಿಸಿ ಆದೇಶಿಸಿದೆ.

ಕ್ರ.ಸಂ	ಹೆಸರು ಮತ್ತು ಪದನಾಮ	ಸ್ಥಳ ನಿಯುಕ್ತಿಗೊಳಿಸಿದ ಕಛೇರಿ
1	ಶ್ರೀಮತಿ ಸುಧಾಸ್ವಾಮಿ ಚೀಫ್ ಸೈಂಟಿಫಿಕ್ ಆಫೀಸರ್	ಪ್ರಾದೇಶಿಕ ಔಷಧ ಪರೀಕ್ಷಾ ಪ್ರಯೋಗಾಲಯ ಬಳ್ಳಾರಿ ಇಲ್ಲಿ ಕಾರ್ಯ ನಿರ್ವಹಿಸುತ್ತಿರುವ ಚೀಫ್ ಸೈಂಟಿಫಿಕ್ ಆಫೀಸರ್ ಶ್ರೀ ಎಸ್. ಎನ್. ಶಿವಶಂಕರ ಇವರ ಜಾಗಕ್ಕೆ.
2	ಶ್ರೀ ಪಿ. ಮೊಹಮ್ಮದ್ ಸೈಫುದ್ದೀನ್ ರುಬ್ಬಾನಿ, ಸೈಂಟಿಫಿಕ್ ಆಫೀಸರ್.	ಬೆಂಗಳೂರು ಸರ್ಕಾರಿ ಔಷಧ ವಿಜ್ಞಾನಗಳ ಮಹಾ ವಿದ್ಯಾಲಯ (ಜಿ. ಸಿ. ಪಿ) ಇಲ್ಲಿ ಖಾಲಿ ಇರುವ ಉಪನ್ಯಾಸಕರ ಹುದ್ದೆಗೆ ನಿಯೋಜನೆ ಮೇಲೆ ಒಂದು ದಿನ ಔಷಧ ನಿಯಂತ್ರಣ ಕಛೇರಿಯಲ್ಲಿ ಕರ್ತವ್ಯಕ್ಕೆ ಹಾಜರಾಗಿ ಮರು ದಿನ ನಿಯೋಜನೆ ಹುದ್ದೆಯಲ್ಲಿ ಕಾರ್ಯಭಾರ ವಹಿಸಿಕೊಳ್ಳತಕ್ಕದ್ದು.
3	ಶ್ರೀ ಗಿರೀಶ್ ಎಂ. ಕೆ ಜ್ಯೂನಿಯರ್ ಸೈಂಟಿಫಿಕ್ ಆಫೀಸರ್	ಪ್ರಾದೇಶಿಕ ಔಷಧ ಪರೀಕ್ಷಾ ಪ್ರಯೋಗಾಲಯ ಬಳ್ಳಾರಿ ಇಲ್ಲಿ ಖಾಲಿ ಇರುವ ಜ್ಯೂನಿಯರ್ ಸೈಂಟಿಫಿಕ್ ಆಫೀಸರ್ ಹುದ್ದೆಗೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಬಿ. ಕಮಲಮ್ಮ

ಸರ್ಕಾರದ ಅಧೀನ ಕಾರ್ಯದರ್ಶಿ

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ,

(ಭಾರತೀಯ ವೈದ್ಯ ಪದ್ಧತಿ ಮತ್ತು ಸಮನ್ವಯ)

PR. 409

SC. 20

ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಸಚಿವಾಲಯ

ವಿಷಯ: ಕರ್ನಾಟಕ ಸರ್ಕಾರ ಸಚಿವಾಲಯದ ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆಯಲ್ಲಿನ ವಿಶೇಷಾಧಿಕಾರಿ (ನಬಾರ್ಡ್) ಹುದ್ದೆಯನ್ನು ಮುಂದುವರಿಸುವ ಬಗ್ಗೆ.

ಓದಲಾಗಿದೆ:

1. ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 35 ಸಸಿವಿ 2006, ದಿನಾಂಕ: 08.06.2006.
2. ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 400 ಸಉಸೇ 2014, ದಿನಾಂಕ: 13.11.2014.
3. ಲೋಕೋಪಯೋಗಿ ಇಲಾಖೆಯ ಕಡತ ಸಂಖ್ಯೆ: ಲೋಇ 723 ಸೇಸಎ 2014.

ಪ್ರಸ್ತಾವನೆ:

ಮೇಲೆ ಕ್ರಮ ಸಂಖ್ಯೆ (1) ರಲ್ಲಿ ಓದಲಾದ ದಿನಾಂಕ: 08.06.2006ರ ಸರ್ಕಾರದ ಆದೇಶದಲ್ಲಿ ಕರ್ನಾಟಕ ಸರ್ಕಾರ ಸಚಿವಾಲಯದ ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆಯ ವಿಶೇಷಾಧಿಕಾರಿ (ನಬಾರ್ಡ್) ಹುದ್ದೆಯನ್ನು ಒಂದು ವರ್ಷದ ಅವಧಿಗೆ ತಾತ್ಕಾಲಿಕವಾಗಿ ಸೃಜಿಸಲಾಗಿದೆ. ನಂತರ ಕಾಲಕಾಲಕ್ಕೆ ಸದರಿ ಹುದ್ದೆಯನ್ನು ಮುಂದುವರಿಸಲಾಗಿದೆ. ಮೇಲೆ ಕ್ರಮ ಸಂಖ್ಯೆ (2)ರಲ್ಲಿ ಓದಲಾದ ಸರ್ಕಾರದ ಆದೇಶದಲ್ಲಿ ಸದರಿ ಹುದ್ದೆಯನ್ನು ದಿನಾಂಕ: 08.06.2014 ರಿಂದ ಒಂದು ವರ್ಷದ ಅವಧಿಗೆ ಮುಂದವರಿಸಲಾಗಿದೆ. ಮೇಲೆ ಕ್ರಮ ಸಂಖ್ಯೆ (3)ರಲ್ಲಿ ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆಯಲ್ಲಿ, ನಬಾರ್ಡ್ ಯೋಜನೆಯಡಿ ಇನ್ನು ಸುಮಾರು 270 ಕೋಟಿ ರೂ. ಮೊತ್ತದ 512 ಕಾಮಗಾರಿಗಳು ಪ್ರಗತಿಯಲ್ಲಿದ್ದು ಪ್ರಸ್ತುತ ಸಾಲಿನಲ್ಲಿ 300 ಕೋಟಿ ರೂ. ಮೊತ್ತದ ಹೊಸ ಕಾಮಗಾರಿಗಳ ಪ್ರಸ್ತಾವನೆ ತಯಾರಿಕೆ ಹಾಗೂ ಸಾಲ ಮರುಪಾವತಿ ಇತ್ಯಾದಿ ಕ್ರಮಗಳನ್ನು ಜರುಗಿಸುವ ಸಲುವಾಗಿ, ವಿಶೇಷಾಧಿಕಾರಿ (ನಬಾರ್ಡ್) ಹುದ್ದೆಯನ್ನು ದಿನಾಂಕ: 08.06.2015 ರಿಂದ ಮತ್ತೆ ಎರಡು ವರ್ಷಗಳ ಅವಧಿಗೆ ತಾತ್ಕಾಲಿಕವಾಗಿ ಮುಂದುವರಿಸುವಂತೆ ಕೋರಿರುತ್ತಾರೆ. ಪ್ರಸ್ತಾವನೆಯನ್ನು ಪರಿಶೀಲಿಸಿದ ಸರ್ಕಾರವು ಈ ಮುಂದಿನಂತೆ ಆದೇಶಿಸುತ್ತದೆ.

ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 223 ಸಉಸೇ 2015, ಬೆಂಗಳೂರು, ದಿನಾಂಕ: 16ನೇ ಜೂನ್, 2015

R.N.I. No. KARBIL/2001/47147 POSTAL REGN. No. RNP/KA/BGS/2202/2014-16
Licensed to post without prepayment **WPP No. 297**

ಕರ್ನಾಟಕ ಸರ್ಕಾರ ಸಚಿವಾಲಯದ ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆಯ ವಿಶೇಷಾಧಿಕಾರಿ (ನಬಾರ್ಡ್) ಹುದ್ದೆಯನ್ನು ದಿನಾಂಕ: 07–06–2015 ರಿಂದ ಮತ್ತೆ ಒಂದು ವರ್ಷದ ಅವಧಿಗೆ ಮುಂದುವರೆಸಲಾಗಿದೆ.

ಈ ಆದೇಶವನ್ನು ಸರ್ಕಾರದ ಆದೇಶ ಸಂಖ್ಯೆ: ಎಫ್‌ಡಿ 1 ಟಿಎಫ್‌ಪಿ 96, ದಿನಾಂಕ: 10–07–1996ರಲ್ಲಿ ಇಲಾಖಾ ಪ್ರಧಾನ ಕಾರ್ಯದರ್ಶಿಯವರಿಗೆ ಪ್ರತ್ಯಾಯೋಜಿಸಲಾಗಿರುವ ಅಧಿಕಾರದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಚಂದ್ರಶೇಖರ

ಸರ್ಕಾರದ ಅಧೀನ ಕಾರ್ಯದರ್ಶಿ

ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ (ಸೇವೆಗಳು–6)

PR. 410

ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಸಚಿವಾಲಯ

ವಿಷಯ: ಕರ್ನಾಟಕ ಸರ್ಕಾರ ಸಚಿವಾಲಯದ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆಯ ಸರ್ಕಾರದ ಕಾರ್ಯದರ್ಶಿ (ಪರಿಸರ ಮತ್ತು ಜೀವಿಶಾಸ್ತ್ರ) ಹುದ್ದೆಯನ್ನು ಮುಂದುವರೆಸುವ ಬಗ್ಗೆ.

ಓದಲಾಗಿದೆ:
1. ಸರ್ಕಾರದ ಆದೇಶ ಸಂಖ್ಯೆ : ಸಿಆಸುಇ 121 ಸಲುಸೇ 2014, ದಿನಾಂಕ: 15.05.2014.
2. ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆಯ ಅಪರ ಮುಖ್ಯ ಕಾರ್ಯದರ್ಶಿಯವರ ಅರೆ ಸರ್ಕಾರಿ ಪತ್ರ ಸಂಖ್ಯೆ: ಎಫ್‌ಇಇ 79 ಎಸಿಎಸ್ 2015, ದಿನಾಂಕ: 19–05–2015.

ಪ್ರಸ್ತಾವನೆ:

ಕರ್ನಾಟಕ ಸರ್ಕಾರ ಸಚಿವಾಲಯದ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆಯ ಸರ್ಕಾರದ ಕಾರ್ಯದರ್ಶಿ (ಪರಿಸರ ಮತ್ತು ಜೀವಿಶಾಸ್ತ್ರ) ಹುದ್ದೆಯನ್ನು ತಾತ್ಕಾಲಿಕವಾಗಿ ಸೃಜಿಸಿ ಕಾಲಕಾಲಕ್ಕೆ ಮುಂದುವರೆಸಲಾಗಿದೆ ಮೇಲೆ ಕ್ರಮಾಂಕ (1)ರಲ್ಲಿ ಓದಲಾದ ದಿನಾಂಕ: 15.05.2014ರ ಆದೇಶದಲ್ಲಿ ಸದರಿ ಹುದ್ದೆಯನ್ನು ದಿನಾಂಕ: 01–04–2014 ರಿಂದ 31–03–2015 ರವರೆಗೆ ತಾತ್ಕಾಲಿಕವಾಗಿ ಮುಂದುವರೆಸಲಾಗಿದೆ.

ಮೇಲೆ ಕ್ರಮಾಂಕ (2)ರಲ್ಲಿ ಓದಲಾದ ಅನಧಿಕೃತ ಟಿಪ್ಪಣಿಯಲ್ಲಿ ಹಾಗೂ ಅರೆ ಸರ್ಕಾರಿ ಪತ್ರದಲ್ಲಿ ಕೋರಿರುವಂತೆ ಸರ್ಕಾರದ ಕಾರ್ಯದರ್ಶಿ (ಪರಿಸರ ಮತ್ತು ಜೀವಿಶಾಸ್ತ್ರ) ಹುದ್ದೆಯು ಅವಶ್ಯಕವಾಗಿರುವುದರಿಂದ ಈ ಹುದ್ದೆಯನ್ನು ಶಾಶ್ವತ ಹುದ್ದೆಯನ್ನಾಗಿ ಪರಿವರ್ತಿಸುವ ಬದಲಾಗಿ ಆಡಳಿತಾತ್ಮಕ ಹಿತದೃಷ್ಟಿಯಿಂದ ದಿನಾಂಕ: 01.04.2015ರಿಂದ 31–03–2016ರವರೆಗೆ ಮುಂದುವರೆಸುವಂತೆ ಕೋರಲಾಗಿದೆ.

ಪ್ರಸ್ತಾವನೆಯನ್ನು ಪರಿಶೀಲಿಸಿದ ಸರ್ಕಾರವು ಈ ಮುಂದಿನಂತೆ ಆದೇಶಿಸುತ್ತದೆ.

ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 77 ಸಲುಸೇ 2015, ಬೆಂಗಳೂರು, ದಿನಾಂಕ: 16ನೇ ಜೂನ್, 2015.

ಕರ್ನಾಟಕ ಸರ್ಕಾರ ಸಚಿವಾಲಯದ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆಯ ಸರ್ಕಾರದ ಕಾರ್ಯದರ್ಶಿ (ಪರಿಸರ ಮತ್ತು ಜೀವಿಶಾಸ್ತ್ರ) ಹುದ್ದೆಯನ್ನು ದಿನಾಂಕ: 01–04–2015 ರಿಂದ 31–03–2016 ರವರೆಗೆ ತಾತ್ಕಾಲಿಕವಾಗಿ ಮುಂದುವರೆಸಿ ಆದೇಶಿಸಿದೆ.

ಈ ಆದೇಶವನ್ನು ಸರ್ಕಾರದ ಆದೇಶ ಸಂಖ್ಯೆ: ಎಫ್‌ಡಿ 1 ಟಿಎಫ್‌ಪಿ 96, ದಿನಾಂಕ: 10–07–1996ರಲ್ಲಿ ಪ್ರತ್ಯಾಯೋಜಿಸಿರುವ ಅಧಿಕಾರದನ್ವಯ ಆರ್ಥಿಕ ಇಲಾಖೆ ಸಹಮತಿ ನೀಡಿದೆ ಎಂದು ಪರಿಭಾವಿಸಿ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಚಂದ್ರಶೇಖರ

ಸರ್ಕಾರದ ಅಧೀನ ಕಾರ್ಯದರ್ಶಿ

ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ (ಸೇವೆಗಳು–6)

PR. 411

ಮುದ್ರಕರು ಹಾಗೂ ಪ್ರಕಾಶಕರು:– ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು–59